ಬಸವರಾಜ ಬಳಿಗಾರ ಸಂಪಾದಕತ್ವದಲ್ಲಿ..

KARKAN/2021/27600

# ಕರುನಾಡ ಕಂದ


ಸಂಪುಟ-1 | ಸಂಚಿಕೆ-3 | ದಿನಾಂಕ: 1-12-2021 | ಪುಟಗಳು: 16 ಬೆಲೆ: 20/-

ಪಾಕ್ಷಿಕ



## ಭಕ್ತಿ ಮುಕ್ತಿಯನ್ನು ಮೀರಿನಿಲ್ಲುವ ದೇವನಿಲಯ - ಸಂಸ್ಥಾನ ಶ್ರೀಗವಿಮಠ ಕೊಪ್ಪಳ

## ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರಿಗೆ ಆಗ್ರಹ ಪತ್ರ ಸಲ್ಲಿಕೆ






### ಕಿಲಾರಹಟ್ಟಿ ಕಿಲ್ಲರ್ ಹಟ್ಟಿಯಾದದ್ದು ಹೇಗೆ..?

ದಲಿತರು ಪ್ರತ್ಯೇಕ ರಾಜ್ಯಕ್ಕಾಗಿ ಏಕೆ ಹೋರಾಡ ಬಾರದು?



### ಭೂ ಮಾಪನ ಕಚೇರಿಯಲ್ಲಿ ಅಧಿಕಾರಿಯ ಅಪರೂಪದ ಹಾಜರಿ!



### 'ಬಿಟ್ ಕಾಯಿನ್'? ಮಾಹಿತಿ, ಇತಿಹಾಸ





### 'ರಾಜನಂತೆ ರಾಜನಾಗಿ ರಾರಾಜಿಸಿದ ರಾಜಕುಮಾರ-ಅಪ್ಪು'

### ಪ್ರೇಮ ಖಾಯಿಲೆಗೆ ಟೈಮ್ ಪಾಸ್ ಕಡಲೆಕಾಯಿ

ಕರುನಾಡ ಕಂದ
ಸಂಪುಟ–1 । ಸಂಚಿಕೆ–3
ದಿನಾಂಕ: 1–12–2021 । ಪುಟಗಳು: 16

# ಓ ನನ್ನ ಪ್ರೀತಿಯ ಹಳ್ಳಿಯ ಮುಗ್ಧ ಪ್ರಜಾ ಮಿತ್ರರೆ , ಏಳಿ ಎದ್ದೇಳಿ!

ನೀವು ಎಚ್ಚರವಾಗಿರಿ ನಿಮ್ಮ ಮನೆ ನಿಮ್ಮ ಮಕ್ಕಳು ಚೆನ್ನಾಗಿರಬೇಕಂದರೆ ಮೊದಲು ನೀವುಗಳು ಬದಲಾಗಬೇಕು. ನೀವು ಬದಲಾದರೆ ನಿಮ್ಮ ಕುಟುಂಬ ಬದಲಾಗುತ್ತದೆ ,ನಿಮ್ಮ ಕುಟುಂಬ ಬದಲಾದರೆ ನಿಮ್ಮ ಸಮಾಜ,ನಿಮ್ಮ ಊರು ,ನಿಮ್ಮ ಜಿಲ್ಲೆ ,ನಿಮ್ಮ ರಾಜ್ಯ, ನಿಮ್ಮ ದೇಶ ಬದಲಾಗುವದು ಖಚಿತ. ಯಾಕೆಂದರೆ ಕಾರಣ ಇಷ್ಟೆ ನಮ್ಮನ್ನು ಆಳುವ ಮಂತ್ರಿಗಳು ಅಧಿಕಾ–ರಿಗಳು ಹಾಗು ಲಂಚ ತಿನ್ನುವಂತ ಕಂತ್ರಿಗಳು ನಮ್ಮನ್ನು ಗುಲಾಮರಂತೆ ಬಳಸಿಕೊಂಡು ಕೊನೆಗೆ ಕೈ ಬಿಡುವದು ರಾಜಕೀಯವರ ಕೆಟ್ಟ ಚಟ. ಆದ್ದರಿಂದ ನಾವು ಯಾರೊಬ್ಬರ ಮಾತನ್ನು ಕೇಳದೆ ನಮ್ಮದೇ ಆದ ಸ್ವಾಭಿಮಾನ ದುಡಿಮೆಯಿಂದ ಬದುಕಬೇಕು. ಈ ಛತ್ರಿಗಳು,ಕೊಡೆ ಹಿಡಿಯುವ ಕಂತ್ರಿಗಳನ್ನು ನಂಬಲೇಬಾರದು .ಇವರು ಬರೀ ತಮ್ಮ ಸಂಸಾರಕ್ಕಾಗಿ ಬೇಕಾದಷ್ಟು ಆಸ್ತಿ ಅಂತಸ್ತು ಗಳಿಸುದಕ್ಕೆ ಯಾವುದೇ ನಿಯಮಗಳಿಲ್ಲ,ಅ–ಡತಡೆಗಳಿಲ್ಲ . ಆದರೆ ಒಬ್ಬ ಬಡ ರೈತ ತನ್ನ ಜಮೀನಿನಲ್ಲಿ ಕಷ್ಟಪಟ್ಟು ದುಡಿದು ಒಂದು ವರ್ಷಕ್ಕೆ ಬೆಳೆಯನ್ನು ಬೆಳೆಯುತ್ತಾನೆ, ಆ ಬೆಳೆದಂತ ಬೆಳೆಗೆ , ಊರಲ್ಲಿ ಇರುವ ದಲ್ಲಾಳಿಯಿಂದ ಪಟ್ಟಣದ ದೊಡ್ಡ ದೊಡ್ಡ ಕಂಪನಿಗಳವರೆಗೂ ಕತ್ತರಿಯಂತೆ ಕಂತ್ರಿ ಕೆಲಸ ಮಾಡುತ್ತವೆ. ಇದರಿಂದ ರೈತರು ಯಾವಗಲೂ ಉದ್ಧಾರವಾಗುವುದಿಲ್ಲ ಕಾರಣ ಇದೆ ಹಾಗೆಯೇ ಹಳ್ಳಿಯ ಕೆಲವು ಮೂರ್ಖರು ಯಾರೋ ಹತ್ತು ಐವತ್ತು ಕೊಟ್ಟರೆ ಅವನ ಹಿಂದೆ ಗುಲಾಮರಂತೆ ಅವರ ಚಾಕರಿ ಕೆಲಸ ಮಾಡುವಂತಹ ಜನ ಇದ್ದಾರೆ.ಹತ್ತು ರೂಪಾಯಿ ಬಿಸಾಕಿದರೆ ನಾಯಿಗಳಂತೆ ಹಿಂದೆ ಬರುತ್ತಾರೆ , ನಾವು ಇನ್ನು ಐದು ವರ್ಷ ಆಡಳಿತ ಮಾಡಬಹುದು ಅಂತಾರೆ , ರಾಜಕೀಯ ಪಂಡಿತರು. ಪ್ರಜೆಗಳೆ ನೀವು ಧರಿಸುವ ಚಡ್ಡಿಯಿಂದ ಹಿಡಿದು ಮಸಣ ಸೇರುವ ಕೊನೆಯವರೆಗೂ ನಿಮ್ಮ ಮೇಲೆ ಸರ್ಕಾರಗಳು ತೆರಿಗೆಗಳು ವಸೂಲಿ ಮಾಡುತ್ತಾನೆ ಇರುತ್ತವೆ. ಆದರೂ ನಮ್ಮ ಹಳ್ಳಿಗಳು ಇನ್ನು ಉದ್ಧಾರವಾಗಿಲ್ಲ ಕಾರಣ ನಮ್ಮನ್ನು ಆಳುವ ಮಂತ್ರಿಗಳು,ಪುರಸಭೆಯ ಸದಸ್ಯರು,ಗ್ರಾಮ ಪಂಚಾಯತಿಯ ಮಹಾ ಹೆಗ್ಗಣ ಕೂಟಗಳು. ಅರೆ! ಒಂದು ಕೋಟಿ ಬಜೆಟ ಅವರೆ ಬಿಡುಗಡೆ ಮಾಡುತ್ತಾರೆ, ಅವರೆ ಎಲ್ಲಾ ತಾಲೂಕಿನಿಂದ ಹಿಡಿದು ಪಂಚಾಯತಿ ತನಕ ಅವರೆ ಎಲ್ಲಾ ದಾಖಲಾತಿ ತಯಾರು ಮಾಡುತ್ತಾರೆ , ಕೊನೆಗೆ ಒಂದು ಕೋಟಿಯಲ್ಲಿ ತಮಗೆ ಬೇಕಾದಷ್ಟು ಉಳಿಸಿಕೊಂಡು ಉಳಿದಿದ್ದರಲ್ಲಿ ನಾಮಿಕಾವಸ್ಥೆ ಕೆಲಸ ಮುಗಿಸಿ ಕೈ ತೊಳೆದುಕೊಳ್ಳುತ್ತಾರೆ ಇದು ನಮ್ಮನು ಆಳುವ ನಮ್ಮ ಸರ್ಕಾರಗಳ ಹಣೆಬರಹ. ಎಲ್ಲಿ ಹಳ್ಳಿ ಹೋಗಿ ದಿಲ್ಲಿಯಾಗಬೇಕು! ದಿಲ್ಲಿಯಲ್ಲಿರುವ ಹವಾಮಾನ ಬದಲಾವಣೆ ಮಾಡಿಲ್ಲ , ಇನ್ನು ನಮ್ಮ ಹಳ್ಳಿಗಳನ್ನು ಯಾವ ರೀತಿ ಉದ್ಧಾರ ಮಾಡಬಹುದು ನೀವೆ ಲೆಕ್ಕ ಹಾಕಿ

**–ಬಸವರಾಜ್ ಜೇವರ್ಗಿ.**

# "ರಾಜನಂತೆ ರಾಜನಾಗಿ ರಾರಾಜಿಸಿದ ರಾಜಕುಮಾರ–ಅಪ್ಪು"



ಅಭಿಮಾನಿಗಳನ್ನು ದೇವರೆಂದು ಕರೆದ ದೊಡ್ಮನೆ ಮಗನಾಗಿ,ಎಲ್ಲರಿಗೂ ಅಚ್ಚು ಮೆಚ್ಚಿನ ಅಪ್ಪುವಾಗಿ,ಚಿಕ್ಕವಯಸ್ಸಿನಲ್ಲೇ ರಾಷ್ಟ್ರ ಪ್ರಶಸ್ತಿ ಪಡೆದ ಎಕೈಕ ಬಾಲ ನಟನಾಗಿ,ಅಪ್ಪಾ–ಜಿಯವರ ಮುದ್ದಿನ ಮಗನಾಗಿ,ಕನ್ನಡದ ಶ್ರೇಷ್ಠ ಕಲಾವಿದನಾಗಿ,ದೇಶ–ವಿದೇಶಗಳಲ್ಲೂ ಕನ್ನಡದ ಕಂಪನ್ನು ಬಿರುತ್ತ,ಅಂದಿನಿಂದ ಹಿಡಿದು ಇಂದಿನವರೆಗೂ ಕನ್ನಡದ ವರಪುತ್ರರಾದ ವರನಟ ಗಾನಗಂಧರ್ವ ಪದ್ಮವಿಭೂಷಣ ಡಾ.ರಾಜ–ಕುಮಾರವರು ಕನ್ನಡಕ್ಕಾಗಿ,ಕನ್ನಡ ನಾಡು–ನುಡಿಗಾಗಿ, ಕನ್ನಡ ಸೇವೆಗಾಗಿ,ಕಲಾ ಸೇವೆಗಾಗಿ, ಜನಸೇವೆಗಾಗಿ,ಸಾಮಾಜಿಕ ಕಳಕಳಿ ಹೊತ್ತುಕೊಂಡು ಸಾಮಾಜಿಕ ಸೇವೆಗಾಗಿ ನಿಂತವರು.ಅಂತವರಲ್ಲಿ ನಮ್ಮ ಅಪ್ಪು ಅವರು ಕೂಡ ಒಬ್ಬರು.ಇವರು ತಂದೆಯವರು ಹಾಕಿಕೊಟ್ಟ ಮಾರ್ಗದಲ್ಲೆ ನಡೆದು,ತಂದೆಗೆ ತಕ್ಕ ಮಗನಾಗಿ, ತಂದೆಯ ಕೀರ್ತಿಯನ್ನು ಇನ್ನಷ್ಟು ಉತ್ತುಂಗಕ್ಕೆ ಏರಿಸಿ,ಇನ್ನಷ್ಟೂ ಅವರ ಗರಿಮೆಯನ್ನು ಹೆಚ್ಚಿಸಿದ ನಮ್ಮ ಅಪ್ಪು ಅವರು ಅಪ್ಪಾಜಿಯ ಮಡಿಲಲ್ಲಿ ಮಲಗಿದ್ದಾರೆ.ಅವರೂ ಎಲ್ಲಿಯು ಇಲ್ಲ.ಪ್ರೀತಿಸುವ ಪ್ರತಿಯೊಬ್ಬ ಅಭಿಮಾನಿಯ ಹೃದಯದಲ್ಲಿ ಅಚ್ಚಳಿಯದೆ ಉಳಿದುಕೊಂಡಿದ್ದಾರೆ. ಅವರು ಬರಿ ಸಿನಿಮಾದಲ್ಲಿ ನಾಯಕನಾಗಿ ಉಳಿಯದೆ ನಿಜ ಜೀವನದಲ್ಲೂ ನಾಯಕನಾಗಿ,ಯುವಕರಲ್ಲಿ ಉತ್ಸಾಹ,ಧೈರ್ಯ, ಅಭಿಮಾನ ಹಾಗೂ ಪ್ರೀತಿ ಎಂಬ ಬಿಜವನ್ನು ಬಿತ್ತಿ,ಒಂದು ಕೈಯಲ್ಲಿ ಕೊಟ್ಟದ್ದು ಇನ್ನೊಂದು ಕೈಯಿಗೆ ಗೊತ್ತಾಗಬಾರದು ಎಂಬ ಡಾ.ರಾಜರವರ ತತ್ವವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಾಕಷ್ಟು ಮಕ್ಕಳಿಗೆ,ಸಾಕಷ್ಟು ಅನಾಥಾಶ್ರಮಗಳಿಗೆ,ಸಾಕಷ್ಟು ಗೋಶಾಲೆಗಳಿಗೆ,ಕಷ್ಟ ಎಂದು ಬಂದವರಿಗೆ ನೆರವಾಗಿ ನಿಲ್ಲುತ್ತಿದ್ದ ನಮ್ಮ ಹೆಮ್ಮೆಯ ಕನ್ನಡ ಮಣ್ಣಿನ ಮಗನಾದ ಅಪ್ಪು ಎಂದಿಗೂ ಅವರು ಅಮರ–ಅಜರಾಮರ. ಅಭಿಮಾನಿಗಳಾಗಿ ನಾವು ತಿಳಿಯಬೇಕಾದ್ದು ಇಷ್ಟೇ ನಾವು ಅವರಂತೆ ನಡೆದು ಸಮಾಜದಲ್ಲಿ ನಾಲ್ಕಾರು ಜನರಿಗೆ ನೆರವಾಗಿ,ಎಲ್ಲರಲ್ಲೂ ಪ್ರೀತಿ–ಪ್ರೇಮ ಹಂಚುತ್ತ ಹೋದರೆ ಸಾಕು.ಸಾರ್ಥಕ ಬದುಕಿನ ಅರ್ಥ ಇದಾಗಿದೆ.ನಮ್ಮ ಅಪ್ಪು ಕನ್ನಡ ಚಿತ್ರರಂಗದಲ್ಲಿ 'ಅಪ್ಪು' ಎಂಬ ಚಿತ್ರದಿಂದ ನಾಯಕ ನಟನಾಗಿ ಇಂದು 'ಜೇಮ್ಸ್' ಎಂಬ ಚಲನ ಚಿತ್ರದವರೆಗೂ ಪಾತ್ರವನ್ನು ನಿಭಾಯಿಸುತ್ತ ರಾರಾಜಿಸಿದ ಕನ್ನಡದ ಪವರ್ ಸ್ಟಾರ್ ಪುನೀತರಾಜಕುಮಾರ.ಇಂದು ತಮ್ಮ ಪಾತ್ರವನ್ನು ನಿಲ್ಲಿಸಿಲ್ಲ ಇನ್ನೂ ನಮ್ಮಲ್ಲಿ ಬಿಟ್ಟು ಹೋಗಿದ್ದಾರೆ. ಅದನ್ನು ನಾವು ನೀವೆಲ್ಲ ಅರ್ಥೈಸಿಕೊಂಡು ಅವರು ಸಮಾಜದ ಮೇಲೆ ಇಟ್ಟಿರುವ ಕಳಕಳಿ ಎಂತಹದು ಎಂಬುದನ್ನು ಅರಿತು.ನಾವೆಲ್ಲರೂ ಆ ನಿಟ್ಟಿನಲ್ಲೆ ನಡೆದು ಅವರಂತೆ ಸಾಧ್ಯವಾದಷ್ಟು ಸಹಾಯ ಮಾಡೋಣ. ಕನ್ನಡ ಭಾಷೆ ಬೆಳಸೋಣ–ಉಳಿಸೋಣ ಮುಖ್ಯವಾಗಿ ಎಲ್ಲದರಲ್ಲಿರೂ ಕನ್ನಡ ಭಾಷೆ ಬಳಸೋಣ.ಎಂಬ ತತ್ವದ ವಿಚಾರದಡಿಯಲ್ಲಿ ನಾವು ಮುಂದೆ ಸಾಗೋಣ. ಆದರೆ ಇದೆಲ್ಲದರ ನಡುವೆ ನಮ್ಮ ಅಪ್ಪುಅವರು ಅಪ್ಪಾಜಿಯಂತೆ

ಬರಿ ನಟರಾಗಿ ಉಳಿಲಿಲ್ಲ. ತಂದೆಯ ಹಾಗೆ ತಂದೆಯವರು ನಡೆದು ಬಂದ ಹಾದಿಯಲ್ಲಿ ತಾವು ನಡೆದು,ನಯ,ವಿನಯದಿಂದ ಮನೆಗೆ ಬಂದವರಿಗೆ,ಸುತ್ತ ಮುತ್ತಲೂ ಸಿಕ್ಕವರಿಗೆ,ಚಿಕ್ಕವರು,ದೊಡ್ಡವರು,ಹಿ–ರಿಯರು–ಕಿರಿಯರು,ಪುಟ್ಟಮಕ್ಕಳು ಎಲ್ಲರನ್ನು ಪ್ರೀತಿಯ ಅಪ್ಪುಗೆಯಿಂದು ಅಪ್ಪುತ್ತಿದ್ದ ಅಪ್ಪುರವರು. ಇಂದ ಇಹಲೋಕದಲ್ಲಿ ನಮ್ಮ ಜತೆ ಇಲ್ಲ ಎನ್ನುವ ಸಂಗತಿ ನಮ್ಮನ್ನು ತುಂಬಾ ಕಾಡುತ್ತಿದೆ.ಆದರೆ ಅವರು ಕೊಟ್ಟ ಆ ಪ್ರೀತಿ ನಮ್ಮ ಮನದಲ್ಲಿ ಶಾಶ್ವತವಾಗಿ ಉಳಿದಿದೆ.ಅವರ ಆತ್ಮಕ್ಕೆ ಶಾಂತಿ ಸಿಗಲಿ,ಮತ್ತೆ ನಮ್ಮ ಕರುನಾಡಿನಲ್ಲಿ ಹುಟ್ಟಿ ಬರಲಿ ಎಂದು ನಾವು ನೀವೆಲ್ಲರೂ ಹರಸಿ ಹಾರೈಸೋಣ.

**– ಡಾ.ರಾಕೇಶ ಹಿರೇಮನಿ(ರಾವಿಹಿ)(ಯುವಕವಿ ಮತ್ತು ಕಲಾವಿದ) (ವಿಶ್ವದಾಖಲೆ ಪುರಸ್ಕೃತರು)**

# ದಲಿತರಿಗೆ ಕೆಲಸ ಕೊಡುವುದರಲ್ಲಿ ಸಂಪೂರ್ಣ ವಿಫಲ

ಪಾವಗಡ ತಾಲೂಕಿನ ವೈ.ಎನ್ ಹೊಸಕೋಟೆ ಹೋಬಳಿಯ ಪೋತಗಾನಹಳ್ಳಿ ಗ್ರಾಮ ಪಂಚಾಯತಿ ಕಾರ್ಯಾಲಯದಲ್ಲಿ ಕಂಪ್ಯೂಟರ್ ಅಪರೆಟರ್ ಅಗಿ ಕಾರ್ಯ ನಿರ್ವಹಿಸುತ್ತಿರುವ "ಹನುಮೇಶ" ಸರಕಾರದ ಯೋಜನೆಯಾದ "ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯ ಅಡಿಯಲ್ಲಿ ಪೋತಗಾಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ವಾಸವಿರು ದಲಿತ ಕುಟುಂಬಗಳಿಗೆ ಕೆಲಸ ಕೊಡಿ ಎಂದು ಬೇಡಿಕೆ ನೀಡಿದರೂ ಸಹ ಅದನ್ನು ತಿರಸ್ಕರಿ ಉದ್ದೇಶ ಪೂರ್ವಕವಾಗಿ ಅವರನ್ನು ಜಾತಿ ನಿಂದನೆ ಮಾಡುತ್ತಾ ಪಂಚಾಯತಿ ಔಜಂ ಹನುಮಂತರಾಯಪ್ಪ ಮತ್ತು ಈ ಹನುಮೇಶ ಎನ್ನುವವರು



ಪಂಚಾಯತಿ ಯಲ್ಲಿ ಅಕ್ರಮವಾಗಿ ಇತರರಿಗೆ ನೀಡುತ್ತಿದ್ದು ದಲಿತರನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆ ಮತ್ತು ಪಂಚಾಯತಿ ಅದ್ಯಕ್ಷರನ್ನು ಸಹ ಲೆಕ್ಕಿಸದೆ ಅವರನ್ನು ಸಹ ದಲಿತ ಎಂಬ ಕಾರಣಕ್ಕೆ ಅವರನ್ನು ಕೇವಲ ಡ್ಯಾಂ ಗಲ್ ಹಾಕುವುದಕ್ಕೆ ಉಪಯೋಗಿಸುತ್ತಾರೆ ಅವರು ಏನಾದರು ಹೇಳಿದರೆ ಅವರ ಮಾತುಗಳನ್ನು ಗಾಳಿಗೆ ತೂರಿ ಇವರಿಬ್ಬರೂ ಮತ್ತು ಪಂಚಾಯತಿ ಯಲ್ಲಿನ ಕೆಲ ಪ್ರಭಾವಿಗಳು (mgnrega) ಯೋಜನೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಾ ದಲಿತ ಜನಾಂಗದವರ ಕೂಲಿ ಚೀಟಿಯನ್ನು ಬೇಕಾದವರಿಗೆ ಇತರರಿಗೆ (others')ಬರುವ ಹಾಗೆ ಮಾಡಿರುತ್ತಾರೆ ಮತ್ತು ದಲಿತರು ಕೆಲಸ ಮಾಡಿದರೂ ಅವರಿಗೆ ಹಾಜರಾತಿ ಹಾಕದೆ ಸರಿಯಾದ ಸಮಯಕ್ಕೆ ಡ್ಯಾಂ ಗಲ್ ಹಾಕದೆ ಜಿರೋ ಮಾಡಿ ಅನ್ಯಾಯ ಮಾಡುತ್ತಿದ್ದು ಅವರಿಗೆ ಬೇಕಾದವರಿಗೆ ಬೆಕಾದವರಿಗೆ ಮಾಡದೇನೆ ಹಾಜರಾತಿ ಹಾಕಿ ಬೋಗಸ್ ಬಿಲ್ ಗಳು ಮಾಡಿಕೊಂಡು ಟಂಟಿಡಿಜಂ ಯೋಜನೆಯನ್ನು ಒಂದು ದಂಧೆಯಾಗಿ ಮಾಡಿಕೊಂಡು ಬಡವರಿಗೆ ಮೋಸ ಮಾಡಿ ಔಜಂ ಮತ್ತು ಡೇಟಾ ಅಪರೆಟರ್ ಅಕ್ರಮ ಎಸಗುತ್ತಿದ್ದಾರೆ ಎಂದು ಪಂಚಾಯತಿ ವ್ಯಾಪ್ತಿಯಲ್ಲಿನ ದಲಿತರು ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಫಿರ್ಯಾದು ನೀಡಿರುತ್ತಾರೆ ಅದ್ದರಿಂದ ಸಂಭಂದಿಸಿದ ಅಧಿಕಾರಿಗಳು ಇದರ ಬಗ್ಗೆ ತನಿಖೆ ಮಾಡಿ ತಪ್ಪಿತಸ್ಥರಿಗೆ ಕಾನೂನು ಕ್ರಮ ಜರುಗಿ (ಟಂಟಿಡಿಜಂಚಿ) ಯೋಜನೆ ಸಮರ್ಪಕವಾಗಿ ಜಾರಿಗೋಸಬೇಕಾಗಿದೆ

# ರಸ್ತೆನೋ ಅಥವಾ ಕೆರೆ ಕುಂಟೆಯೋ ಇದಕ್ಕೆ ಕೊನೆ ಎಂದು..?





ತುಮಕೂರು:ಪಾವಗಡ ತಾಲೂಕಿನ ಮರಿದಾಸನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಮರಿದಾಸನಹಳ್ಳಿಯಿಂದ ಬಿ.ಹೊಸಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ ಇದು ರಸ್ತೆನೋ ಅಥವಾ ಕೆರೆ ಕುಂಟೆಯೋ ಅರ್ಥವಾಗದ ರೀತಿ ಮಾರ್ಪಟ್ಟಿದೆ ವಾಹನ ಸವಾರರು ಪ್ರಾಣ ಅಂಗೈಲಿ ಇಟ್ಟುಕೊಂಡು ಓಡಾಡುತ್ತಿದ್ದಾರೆ ಆದರೂ ಸಹ ಇಲ್ಲಿನ ಸ್ಥಳೀಯ ಪ್ರತಿನಿಧಿಗಳು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ನೋಡಿಯೂ ನೋಡದಂತೆ ಹೋಗುತ್ತಿದ್ದರೆ ಇಲ್ಲಿನ pdo ಗ್ರಾಮಪಂಚಾಯ್ತಿ ಅದ್ಯಕ್ಷರ ಮತ್ತು ಆಡಳಿತ ಪ್ರತಿನಿಧಿಗಳ ಕೈಗೊಂಬೆಯಾಗಿ ವರ್ತಿಸುತ್ತಿದ್ದು ಇದರ ಬಗ್ಗೆ ಯಾರಾದರೂ ಮಾತಾಡಿದರೆ ಅವರ ವಿರುದ್ಧ ಆಡಳಿತ ಪ್ರತಿನಿಧಿಗಳಿಗೆ ಎತ್ತಿ ಕಟ್ಟಿ ಬೆದರಿಸುವ ಕೆಲಸಗಳು ನಡೆಯುತ್ತಿವೆ ಅದ್ದರಿಂದ ಸಂಭಂದಿಸಿದ ಅಧಿಕಾರಿಗಳು ಒಂದು ಬಾರಿ ಮರಿದಾಸನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಯ ಎಲ್ಲಾ ಹಳ್ಳಿಗಳಿಗೆ ಬೇಟಿ ನೀಡಿ ಇಲ್ಲಿನ ಅವ್ಯವಸ್ಥೆಯನ್ನು ತಿಳಿದುಕೊಂಡು ಪಂಚಾಯತಿ ಅಧಿಕಾರಿಗಳು ಸರಿಯಗಿ ಕೆಲಸ ಮಾಡುವ ಕ್ರಮ ಜರುಗಿಸಬೇಕಾಗಿದೆ ಇದೇ ರೀತಿಯ ಇನ್ನೂ ಹಲವು ಸಮಸ್ಯೆಗಳ ನಡುವೆ ಈ ಪಂಚಾಯತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಜನ ವಾಸಿಸುತ್ತಿದ್ದಾರೆ



ಕರುನಾಡ ಕಂದ
ಸಂಪುಟ–1 । ಸಂಚಿಕೆ–3
ದಿನಾಂಕ: 1–12–2021 । ಪುಟಗಳು: 16

# ಪ್ರೇಮ ಖಾಯಿಲೆಗೆ ಟೈಮ್ ಪಾಸ್ ಕಡಲೆಕಾಯಿ

(ಸಿಂಪಲ್ ಲವ್ ಸ್ಟೋರಿ)

ತುಂಬಾ ಮಳೆ ರಿ ಇತ್ತ ಜೋರಾಗಿ ನು ಬರ್ತಾ ಇಲ್ಲ ಸಣ್ಣಗೆ ತುಂತುರು ಹನಿಗಳು , ತಲೆ ವದ್ದೆ ಯಾಗಿ ಮೂಗು ಸ್ವರ ಸ್ವರ ಎನ್ನುತ್ತಾ ನೆಗಡಿಯಗಿ ಮರದ ಕೆಳಗೆ ನಿಂತಿದ್ದೆ ರಿ. ಬಸ್ ಬರ್ಲೆ ಇಲ್ಲ ಓ ಇವತ್ತು ನು ಬಸ್ ಮಿಸ್ ಮಾಡ್ಕೊಂಡೆ ಅಂತ ಫೋನ್ ತೆಗೆದು ಟೈಮ್ ನೋಡಿದೆ 7 : 08 ಆಗಿತ್ತು ಇರು ಅಜಯ್ ಗೆ ಕಾಲ್ ಮಾಡೋಣ ಅಂತ ಕಾಲ್ ಮಾಡ್ದೆ , ಅವ್ನ್ ಅಪ್ಪಿ ಬಸ್ ಸುಗ್ನಹಳ್ಳಿ ಅತ್ರ ಕೆಟ್ಟು ಹೋಗಿದೆ ಅಂತೆ ಸಿವಿಲ್ ಬಸ್ ಗೆ ಬರ್ತೀನಿ ಅಥ್ವೊ ಅಂದ, ಸರಿ ಬಾರಪ್ಪ ಅಂತ ಬಸ್ ಸ್ಟ್ಯಾಂಡ್ ನಲ್ಲಿ ಇದ್ದ ಗಸಗಸೆ ಮರ ದ ಕೆಳಗೆ ಬಂದೆ . ಪೂರ್ಣವಾಗಿ ಮಂಜಿನಿಂದ ರಸ್ತೆ ಕಾಣಿಸ್ತಾ ಇರಲಿಲ್ಲ ರಸ್ತೆ ಬದಿಯಲ್ಲಿ ಇದ್ದ ಸಾಲು ನೇರಳೆ ಮರದಿಂದ ಇನ್ನ ಕತ್ತಲು ಆಗಿತ್ತು ಆ ಸೂರ್ಯ ಒಂದು ವಾರ ನಮ್ಮ ತುಮಕೂರಿನಲ್ಲಿ ಕಳೆದು ಹೋಗಿದ್ದ . ಇದರಿಂದ ವಾಟ್ಸಪ್ ಸ್ಟೇಟಸ್ ನಲ್ಲಿ ಎಲ್ಲರದು ಒಂದೇ ಡೈಲಾಗ್ ಬಾಸ್ ಇದು ತುಮಕೂರು ಮಲೆನಾಡು ಅಲ್ಲ ವಾತಾವರಣ ಚೇಂಜ್ ಮಾಡಪ್ಪ ಮತ್ತೆ ಹುಡುಗಿಯರ ಮೇಕಪ್ ಹಾಳು ಆದರಿಂದ ಇಬ್ಬರು ಹುಡುಗಿಯರು ಸ್ಥಳದಲ್ಲೇ ಸಾವು , ಅದಕ್ಕೆ ಬ್ರೇಕಿಂಗ್ ನ್ಯೂಸ್ ಎಂದು ಇದೆ ನಮ್ ಹುಡುಗ–ರಿಗೆ ಹಾಸ್ಯ . ಬಸ್ ಬಂತು ಅಂತ ಮೆಸೇಜ್ ಬಂತು ಪಂಡಿತನಹಳ್ಳಿ ಬಿಟ್ರೆ ನಮ್ ಊರ್ ಗೇಟ್ ಎರಡನೇ ಮೈಲಿ . ಬಸ್ ಒಳಗೂ ನೀರು ಆಚೆ ನು ನೀರು ಬಸ್ ಗೆ ಫುಲ್ ಸಾನ ಆಗಿತ್ತು ಹೇಗೋ ಕೈ ಹಾಕಿ ಬಸ್ ನಿಲ್ಲಿಸಿದೆ ಅದು ಅವನು ನನ್ನ ಬಿಟ್ಟು ಸ್ವಲ್ಪ ದೂರ ನಿಲ್ಲಿಸಿದ ಆಗ ಓಡಿ ಹೋಗಿ ಅತ್ತಿದೆ ಬಸ್ ಸೀಟ್ ಫುಲ್ ಆಗಿತ್ತು ಬಸ್ ನ ಡೋರ್ ಪಕ್ಕ ಮುಂದೆ ಇದ್ದ ಸೀಟ್ ನಲ್ಲಿ ಶಿವಗಂಗೆ ನೋಡಲು ಅಂತ ಮಂಗಳೂರು ಇಂದ ಒಂದು ಹುಡುಗಿ ಬಂದ್ ಇತ್ತು ಅವ್ರು ಟ್ರಿಪ್ ಬಂದ್ ಇದ್ದಾರೆ ಅಂತ ಅವ್ರು ಹೇಳಿದಾಗಲೇ ಗೊತ್ತಾಗಿದ್ದು. ಆ ಸೀಟ್ ನಲ್ಲಿ ಒಂದ್ ಸೀಟ್ ಖಾಲಿ ನಾ ಹೆಂಗಪ್ಪ ಹುಡ್ಗಿ ಪಕ್ಕ ಅಂತ ಮನಸಲ್ಲಿ ಒಂದ್ ತರ ಮಾತಾಡಿಕೊಂಡು " ಮೇಡಂ ನಿಮ್ಮ ಬ್ಯಾಗ್ ಸ್ವಲ್ಪ " ಅಂದೆ ಯಪ್ಪ ಒಂದ್ ನೋಟದಲ್ಲಿ ಆಕೀ ಗೆ ನಾ ಬಿದ್ದೆ ಅನ್ನಿಸುತ್ತೆ ಕಿವಿಯ ಗುಂಡು ಅದಕ್ಕೆ ಒಂದ್ ಜುಮಕಿ ಸೈಡಿಗೆ ಬಿಟ್ಟ ಕೂದಲು ಅದರ ಮರೆಯಲ್ಲಿ ಆ ಜುಮ್ಕಿ ನಗ್ತಾ ಇತ್ತು ಸಣ್ಣ ಕೆಂಪು ತುಟಿಗಳು , ತುಟಿ ಮೇಲೆ ಕಿರು ಕೋಪದ ನಗು ಆ ನಗು ಗೆ ಕೆನ್ನೆಯ ಮೇಲೆ ಬಿದ್ದ ಗುಳಿ ಸಂಗಾತಿ ಆ ಸಂಗಾತಿ ಗೆ ಮೂಗ್ ಬೊಟ್ಟು ಗೆಳೆಯ ಆ ಮಿಂಚು ಕಣ್ಣಲ್ಲಿ ಏನೋ ಒಂದು ರೀತಿಯ ಮಧುರ ಕಾವ್ಯ ಕಲ್ಪನೆ ಕವಿತೆ ಸೃಷ್ಟಿ ಆಗಿತ್ತು ಆ ಗೊಂಬೆಯ ಲಡ್ಡು ಮುದ್ದು ಗೆ ಒಂದ್ ಸ್ವೆಟ್ಟರ್ . ಆಕೀ ನಾ ನೋಡಿ ನಾ ಸೋತು ಅವಳ ಪಕ್ಕ ಕುಂತು ಕೈ ಕಟ್ಟಿದೆ ಅವಳ ಕೈ ನೋಡಿದೆ ನನ್ನ ಕೈ ನು ನೋಡಿದೆ ಇಬ್ಬರ ಕೈ ನಲ್ಲಿಯೂ ಒಂದೇ ರೀತಿಯ ಬೆಳ್ಳಿ ಚೈನ್ ಹಾಗೆ ಕಾಲ್ ಕಡೆ ನನ್ನ ಕಣ್ಣು ಬಿಟ್ಟು ಅವಳ ಕಾಲ್ ಗೆಜ್ಜೆ ಮಾತ್ರ ಸೂಪರ್ ಇತ್ತು ನಾನು ಅಂ–ದುಕೊಂಡೆ ಈ ಬೆಳ್ಳಿ ಗೆ ಒಂದ್ ಬೆಳ್ಳಿ ಆಭರಣ ನಾ ? ಈ ಬಂಗಾರಕ್ಕೆ ಒಂದ್ ಬಂಗಾರ ನ ? ಅಂತ ಮುಗುಳು ನಗುತ್ತಿದ್ದೆ . ಆಕೀ ನನ್ನ ಮತ್ತೆ ಒಂದೇ ಕಣ್ಣಿನಲ್ಲಿ ನೋಡಿದಳು ಭಯ ಆಗ್ತಾ ಹೃದಯದ ಬಡಿತ ಹೆಚ್ಚಾಗಿ ಕಣ್ಣು ಮುಚ್ಚಿ ಕೈ ಗಟ್ಟಿಯಾಗಿ ಕಟ್ಟಿ ಕೊಂಡು ಸೈಡ್ ಗೆ ತಿರುಗಿ ಮತ್ತೆ ನೋಡಿದೆ . ಅವಳು ನನ್ನೇ ನೋಡುತ್ತಾ ಇದ್ದಳು ನಾನು ಯಪ್ಪ ದೇವ್ರೆ ಎಂದು ಗಾಳಿಗೆ ಮುಖ ಮಾಡಿದೆ ನನ್ನ ಶರ್ಟ್ ಮೇಲೆ ಒಂದ್ ಸಣ್ಣ ಎಲೆ ಇತ್ತು ಆಕೀ ಅದನ್ನ ನೋಡ್ತಾ ಇದ್ದಳು ಅಂತ ಅವಳು ಅದನ್ನ ತೆಗೆದು ಕೈ ನನ್ನ ಕಾಲೇಜ್ ಬ್ಯಾಗ್ ಮೇಲೆ ಇಟ್ಟಾಗ ಗೊತ್ತಾಯ್ತು ನಾನೇ ಮೊದಲು ತುಂಬು ಹೃದಯದ ಧನ್ಯವಾದಗಳು ಮೇಡಂ ಎಂದು ಕನ್ನಡಲ್ಲಿ ಹೇಳಿದೆ ಅವಳು ತುಟಿ ಎರೆಡು ಮಾಡದೆ ನನ್ನೆ ನೋಡುತ್ತಾ ನಗುತ್ತಿದ್ದಳು ನಾನು ಹಲ್ಲು ಬಿಟ್ಟೆ , ಆಕೀ ಕೆನ್ನೆ ಕೆಂಪಾಗಿ ನಡುಗುತ್ತಾ ಇತ್ತು . ಪಾಪ ತುಂಬಾ ಚಳಿ ಅನ್ನಿಸುತ್ತೆ ಅಂತ ಡ್ರೈವರ್ ಕಡೆ ನೋಡ್ತಾ ಇದ್ದೆ ಆಗ ಅವಳ ಮನಸಲ್ಲಿ ನೋಡು ಮಾತಾಡುತ್ತಾನೆ ಅಂದ್ರೆ ಅತ್ತ ತಿರುಗಿದ ಪಕ್ಕ ಒಂದ್ ಹುಡುಗಿ ಇದ್ದಾಳೆ ಮಾತಾಡೋಣ ಅನ್ನೋ ಬುದ್ದಿ ಇಲ್ಲ ತಿಕಲು,ಮೆಂಟಲ್ ಎಂಬಂತೆ ಇತ್ತು ಆಕೀ ಮೌನದ ಮಾತು. ಅವಳೇ ರಿ ನಿಮ್ಮ ಫೋನ್ ಕೊಡಿ ಒಂದ್ ಕಾಲ್ ಮಾಡ್ಬೇಕು ನನ್ ಫೋನ್ ನಲ್ಲಿ ಕರೆನ್ಸಿ ಇಲ್ಲ ಎಂದು ಮಾತಾಡಿದಳು . ನನ್ನಗೆ ಒಂದ್ ರೀತಿ ಖುಷಿ ಆಯ್ತು ಕಣ್ಣಲ್ಲೇ ಮಾತಾಡಿ ಫೋನ್ ಕೊಟ್ಟೆ ಅವಳು ಯಾರ್ಗೂ ಕಾಲ್ ಮಾಡ್ತಾಳೆ ಅಂದ್ರೆ ಅವಳ ನಂಬರ್ ಗೆ ಕಾಲ್ ಮಾಡಿಕೊಂಡಳು ನಾನು ಅಬ್ಬ ಹೇಗೋ ನಂಬರ್ ಸಿಕ್ತು ಅನ್ಕೊಂಡೆ ಆದ್ರೆ ಅವಳೇ ಹೇಳಿದಳು ಇದು ನನ್ನ ನಂಬರ್ ರಿ ಅಂತ . ನಾನು ಹ್ಮ್ ಎಂದು ಸುಮ್ಮನಾದೆ. ಯಾಕ್ರೀ ಮಾತೆ ಆಡ್ತಾ ಇಲ್ಲ ಅಂದ್ಲು .. ಅಯ್ಯೋ ಮಾರಾಯ್ತಿ ನನ್ನ ಹೃದಯ ತುಂತುರು ಹನಿಯಲ್ಲಿ ಜಾರಿ ಹೋಗೋ ತರ ಇದೆ ಅಂದೆ . ಆಕೀ ಗೆ ಅರ್ಥ ಆಗಿತ್ತು ಅನ್ನಿಸುತ್ತೆ ನನ್ನ ಮೌನದ ಮಾತು! ಕ್ರಶ್ ಆಗಿದೆ ಅಂತ.

ನನಗೆ ಆಕೀ ಮೇಲೆ ಕ್ರಶ್ ಆಗಿದ್ರೆ ಅವಳಿಗೆ ನನ್ನ ಮೇಲೆ ಲವ್ ಆಗಿದೆ ಅಂತ ಗೊತ್ತಾಗಿದ್ದು ಹ್ಯಾಡ್ ಪೋಸ್ಟ್ ನಲ್ಲಿ ಅವಳು ಚಳಿಗೆ ಟೈಮ್ ಪಾಸ್ ಗೆ ಕಡಲೆಕಾಯಿ ತೆಗೆದು ಕೊಂಡು ಜೊತೆ ಕಡ್ಡಿ ಚಿಪ್ಸ್ ತೆಗೆದು ಕೊಂಡು ತಗೋ ರಿ ತಿನ್ನಿ ಎಂದು ನನ್ನ ಅವಳ ಮಧ್ಯೆ ಇಟ್ಟಳು ಇಬ್ಬರ ಕೈ ಮಿಸ್ ಆಗಿ ಟಚ್ ಆಯ್ತು ಅವಳ ಕೈ ನಲ್ಲಿ ಇದ್ದ ರಿಂಗ್ ನೋಡಿ ರಿ ನೀವೆ ಬಂಗಾರ ನಿಮಗೆ ಯಾಕ್ ರಿ ಈ ಬಂಗಾರ ಎಂದೇ , ಅವಳು ನಗುತ್ತಾ ಸುಮ್ನೆ ಇರಪ್ಪ ಕಾಮಿಡಿ ಮಾಡ್ಬೇಡ ಎನ್ನುತ್ತಾ . ರಿ ನಿಮ್ಮ ನಾಮಧೇಯ ಎಂದಳು ನಾನು ಹೆಸರಲ್ಲೇನಿದೆ ? ಎಂದೇ ಆಕೀ ಕಣ್ಣು ದಪ್ಪ ಮಾಡಿ ತುಟಿಯಲ್ಲಿ ಏನೋ ಗೊತ್ತಿಲ್ಲ ಎಂಬ ಪ್ರತಿಕ್ರಿಯೆ ಕೊಟ್ಟಳು. ಆಮೇಲೆ ನಾನೇ ಹನಿ ಅಂತ ಅಂದೆ. ಅವಳು ಏನ್ರಿ ಈ ಮಳೆ ಹನಿಗೆ ಹನಿ ಅಂತ ಇದ್ದಾರ ಎಂದು ಹಲ್ಲು ಬಿಟ್ಟಳು ನಾನು ನಿಮ್ ಹೆಸ್ರು ಎನ್ ಅಂದೆ ಅವಳು ಅಂಜು ನಂದು ಮಂಗಳೂರು ಇಲ್ಲೇ ತುಮಕೂರು ನಲ್ಲಿ ಓದುತ್ತಾ ಇದ್ದೀನಿ ಅಂದ್ರು ನಾನು ಎಲ್ಲಿ ಇದೀರಾ ಮತ್ತೆ ಅಂದೆ. ಅಂಜು ಅವ್ರು ಹಾಸ್ಟೆಲ್ ಇದೆ ರಿ ಅಂ–ದರು ಈಗ ಎಲ್ಲಿಂದ ಬರ್ತಾ ಇದೀರಾ ಅಂದೆ ಶಿವಗಂಗೆ ಬೆಟ್ಟ ಅಂದ್ರು. ಅಬ್ಬ ಸರಿ ಕನವ್ವ ಎಂದು ಯಾವ್ ಕಾಲೇಜ್ ಅಂದೆ ಯೂನಿವರ್ಸಿಟಿ ರಿ ಅಂತ ನಗುತ್ತಲೇ ಇದ್ದಳು. ನಾನು ಸರಿ ಎಂದು ಸುಮ್ನೆ ಇದ್ದೆ ಅವ್ರು ತಗೋ ಚಿಪ್ಸ್ ಅಂತ ಹೇಳಿ ಕಡಲೆ ಕಾಯಿ ಒಂದ್ ಒಂದೇ ತಿನ್ನುತ್ತಾ ಇದ್ದರು. ನಾನು ಫೋನ್ ನೋಡ್ತಾ ಇದ್ದಾರೆ ಆಕೀ ಪಕ್ಕ ಇದ್ದರೂ ಮೆಸೇಜ್ ಮಾಡ್ತಾ ಇದ್ದಳು ಆಯೋ ಶಿವ ಯಾರೋ ಇದು ಮೆಂಟಲ್ ಅಂತ ನಾನು ಅವಳ ಜೊತೆ ಮೆಂಟಲ್ ಆದೆ ಆಕೀ ಗೆ ನಾನೇ ನೀವ್ ಸಿಂಗಲ್ ಹ ಎಂದೇ..ನಗುವ ಸಿಂಬಲ್ ಕಳುಹಿಸಿ , ಆಕೀ ಹೌದು ಎಂದು ಖುಷಿಯ ಸಿಂಬಲ್ ಕಳುಹಿಸಿ ನೀವು ...? ಎಂದು ಪ್ರಶ್ನೆ ಮಾಡಿದಳು ನಾನು ಗಟ್ಟಿಯಾಗಿ ಒಂದ್ ಗತ್ತಿನಲ್ಲಿ ಎಸ್ ಅಂದೆ ಆಕೀ ನಿಜ ನಾ ಅಂತ ವತ್ತಿ ವತ್ತೀ ಕೇಳಿದಳು ಯಾಕ್ ಡೌಟ್ ಹ ಎಂದೇ ಅವಳು ಹೈ ಇಲ್ಲೋಪಾ ಹುಡುಗ್ರು ಅಲ್ವಾ ಹುಡುಗೀರ ಮೇಲೆ ಜೆಸ್ಟ್ ಕ್ರಶ್ ಆದ್ರೂ ಆಗಿರುತ್ತೆ ಅಲ್ವಾ ಅಂದ್ಲು ರಿ ಈಗ ನಿಜ ಆಗ್ತಾ ಇದೆ ಅಂದೆ ಅವಳು ನಗುವ ಸಿಂಬಲ್ ಕಳುಹಿಸಿ ಯಾರ್ ಅಪ್ಪ ಆಕೀ ಅಂತ ???? ಈ ರೀತಿ ಚಿಹ್ನೆ ಸೆಂಡ್ ಮಾಡ್ತಾ ಇದ್ದಳು ನಾನು ನಿಮ್ಮ ಫೋಟೋ ಸೆಂಡ್ ಮಾಡಿ ಹೇಳ್ತೀನಿ ಅಂದೆ" ಯಾಕ್ರೀ ನಾನು ಪಕ್ಕನೆ ಇದೀನಿ ಅಲ್ವಾ ನೋಡಿ ಫೋಟೋ ಯಾಕೆ ಅಂತ ಹೇಳಿದಳು !" ನಾ ಸೆಂಡ್ ಮಾಡ್ ಮಾರಾಯ್ತಿ ಎಂದೇ ಸೆಂಡ್ ಮಾಡಿದಾಗ ಅವಳ ಫೋಟೋ ಗೆ ಇವಳೇ ಅಂತ ರಿಪ್ಲೈ ಮಾರ್ಕ್ ಮಾಡಿ ಹೇಳಿದೆ ಅವಳು ರಿ ನಂಗೆ ನಿಮ್ಮ ನ ನೋಡಿದ ತಕ್ಷಣ ಲವ್ ಆಯ್ತು ಅಂದ್ಲು . ಯವ್ವ ! ಅಂತ .

ರಿ ನಾನ್ ಚೆನ್ನಾಗ್ ಇದೀನ ? ನನ್ ಬಗ್ಗೆ ನಿಮಗೆ ಗೊತ್ತ.? ನನ್ನ ನೀವ್ ಮೊದಲೇ ನೋಡಿದ್ರೆ ? ಮತ್ತೆ ವೇರಿ ಇಂಪಾರ್ಟೆಂಟ್ ನನ್ ಮೇಲೆ ಲವ್ ಆಗೋಕೆ ಕಾರಣ ? ಎಂದು ಪ್ರಶ್ನೆ ಮೇಲೆ ಪ್ರಶ್ನೆ ಮಾಡಿದೆ.

ಕವಿ ಕಾವ್ಯ ಕಲ್ಪನೆ ಹನಿ

## ತೋಟಗಾರಿಕಾ ಇಲಾಖೆಯ ಅಧಿಕಾರಿಗಳಿಂದ ಈರುಳ್ಳಿ ಹಾಗೂ ಮೆಣಸಿನಕಾಯಿ ಬೆಳೆ ನಷ್ಟ ಪ್ರದೇಶಗಳ ಪರಿಶೀಲನೆ




ಗದಗ – ಇಲ್ಲಿ ಸಮಿಪದ ತಿಮ್ಮಾಪೂರ ಹಾಗೂ ಹರ್ಲಾಪೂರ ಗ್ರಾಮದಲ್ಲಿ ಕಳೆದ ಒಂದು ವಾರದಿಂದ ಸುರಿಯುತ್ತಿರುವ ಮಳೆಗೆ ಈರುಳ್ಳಿ ಹಾಗೂ ಮೆಣಸಿನಕಾಯಿ ಬೆಳೆ ಸಂಪೂರ್ಣ ಹಾಳಾಗಿ ನೀರಿನಲ್ಲಿ ಕೋಳೆತು ಹೂಗಿರುವದನ್ನು ಪರಿಶೀಲನೆ ಮಾಡಿದ ಗದಗ ಜಿಲ್ಲಾ ತೋಟಗಾರಿಕಾ ಅಧಿಕಾರಿಗಳು ಎರಡು ಗ್ರಾಮಕ್ಕೆ ಭೇಟಿ ನೀಡಿ ರೈತರ ಜಮೀನುಗಳಲ್ಲಿ ಬೆಳೆದ ಈರುಳ್ಳಿ , ಮೆಣಸಿನಕಾಯಿ ಬೆಳೆಯ ನಷ್ಟವನ್ನು ಪರೀಕ್ಷಿಸಿದರು.

ತೋಟಗಾರಿಕೆ ಇಲಾಖೆಯ ಸಹಾಯಕ ಅಧಿಕಾರಿಯಾದ ಶ್ರೀಯುತ ಶಂಭುಲಿಂಗಪ್ಪ ನೆಗಳೂರು ಅವರು ಮಾತನಾಡಿ ಪ್ರಸ್ತುತ ಗದಗ ತಾಲ್ಲೂಕಿನಲ್ಲಿ 12470 ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬಿತ್ತನೆಯಾಗಿದೆ . ಅದರಲ್ಲಿ ತಿಮ್ಮಾಪೂರ ಗ್ರಾಮದಲ್ಲಿ ಈರುಳ್ಳಿ 783 ಹೆಕ್ಟೇರ ಮತ್ತು ಮೆಣಸಿನ ಕಾಯಿ 37 ಹೆಕ್ಟೇರ ಬೀತನೆಯಾಗಿದೆ ಹಾಗೂ ಹರ್ಲಾಪೂರ ಗ್ರಾಮದಲ್ಲಿ ಈರುಳ್ಳಿ 1857 ಹೆಕ್ಟೇರ ಮತ್ತು 783 ಹೆಕ್ಟೇರ ಪ್ರದೇಶದಲ್ಲಿ ಈರುಳ್ಳಿ ಹಾಗೂ ಮೆಣಸಿನಕಾಯಿ ಬೆಳೆದಿದ್ದು. ಈಗ ಕಳೆದ ಒಂದು ವಾರದಿಂದ ಸುರಿಯುತ್ತಿರುವ ಮಳೆಗೆ ಸಂಪೂರ್ಣ ಭಾಗಶಹ ಈರುಳ್ಳಿ ಮೆಣಸಿನಕಾಯಿ ಬೆಳೆಯುವ ನಷ್ಟವಾಗಿದ್ದು ಈ ವರದಿಯನ್ನು ನಾನು ಕಂದಾಯ ಇಲಾಖೆಗೆ ಮತ್ತು ಜಿಲ್ಲಾಧಿಕಾರಿ ಕಚೇರಿಗಳಿಗೆ ಬೆಳೆನಷ್ಟ ಪ್ರಸ್ತಾವನೆಯ ವರದಿಯನ್ನು ಕಳಿಸುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ರೈತ ಸಂಘದ ಗದಗ ಜಿಲ್ಲಾ ಅಧ್ಯಕ್ಷ ಯಲ್ಲಪ್ಪ ಎಚ್ ಬಾಬರಿ ಮಾತನಾಡಿ ಸರ್ಕಾರಕ್ಕೆ ಬೇಗನೆ ಬೆಳೆ ನಷ್ಟ ವರದಿಯನ್ನು ಸಲ್ಲಿಸಿ ಸರಿಯಾದ ಸಮಯಕ್ಕೆ ರೈತ–ರಿಗೆ ಈರುಳ್ಳಿ, ಮೆಣಸಿನಕಾಯಿ, ಹಾಗೂ ಹಿಂಗಾರು ಬೆಳೆಯಾದ ಜೋಳ ಕಡ್ಡಿ ಗೋಧಿ ಬೆಳೆಗಳಿಗ ನಷ್ಟ ಪರಿಹಾರವನ್ನು ನೀಡಬೇಕು .ಹಾಗೂ ಗದಗ ತಾಲ್ಲೂಕನ್ನು ಅತಿವೃಷ್ಟಿ ಪ್ರದೇಶವೆಂದು ಘೋಷಣೆ ಮಾಡಿ ಎಲ್ಲಾ ರೈತ–ರಿಗೂ ನೆರವಾಗಬೇಕು . ಹಾಗೂ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಬೆಳೆ ವಿಮೆ ಹಣವನ್ನು ಬೇಗನೆ ಬಿಡುಗಡೆ ಮಾಡಿ ರೈತರ ಬ್ಯಾಂಕ್ ಖಾತೆಗೆ ಜಮಾವಣೆ ಮಾಡಿಸಬೇಕೆಂದು ಆಗ್ರಹಿಸಿದರು . ಈ ಸಂದರ್ಭದಲ್ಲಿ ತೋಟಗಾ–ರಿಕೆ ಇಲಾಖೆಯ ಸಹಾಯಕರಾದ ಮಲ್ಲಯ್ಯ ಕಡ್ಲಿಮಠ ಹಾಗೂ ಕಂದಾಯ ಇಲಾಖೆಯ ಗ್ರಾಮ ಲೆಕ್ಕಾಧಿಕಾರಿ ಸಂತೋಷ ಜಾಧವ್ ರೈತ ಸಂಘದ ಗ್ರಾಮ ಘಟಕದ ಅಧ್ಯಕ್ಷ ಹುಚ್ಚೀರಪ್ಪ ಜೋಗಿನ, ಶರಣಪ್ಪ ಜೋಗಿನ, ಭೀಮಪ್ಪ ರಾಮಜಿ ಹನುಮಪ್ಪ ಭೀಮನೂರ, ಶೇಖಪ್ಪ ಘಂಟೆ, ಪ್ರಕಾಶ್ ಇದ್ಲಿ, ರಾಮಪ್ಪ ತಳವಾರ, ವಸಂತ ಬೇಟಗೆರಿ, ಇನ್ನೂ ಮುಂತಾದ ರೈತರು ಪಾಲ್ಗೊಂಡಿದ್ದರು

## ಹೊಸ ಓಬಳಾಪುರದಲ್ಲಿ ಮೂಲಭೂತ ಸೌಕರ್ಯ ಕೊರತೆ



ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲೂಕಿನ ಅದೊಂದು ಪುಟ್ಟ ಗ್ರಾಮ ತಾಲೂಕು ಕೇಂದ್ರದಿಂದ ಯಾವುದೇ ಸಾರಿಗೆ ಸಂಪರ್ಕ ಇಲ್ಲದ ಗ್ರಾಮ ಸರ್ಕಾರಿ ಶಾಲೆ ಅದುವೇ ಸರಕಾರಿ ಹಿರಿಯ ಪ್ರಾಥ–ಮಿಕ ಶಾಲೆ ಹೊಸ ಓಬಳಾಪುರ.ಸರಿಯಾಗಿ ಪ್ರಾರ್ಥನೆ ಮಾಡಲು ಸಾಲದ ಒಂದಿಷ್ಟು ಜಾಗದಲ್ಲಿ ಇಲ್ಲಿನ ಶಿಕ್ಷಕರು ಇಲ್ಲಿನ ಮಕ್ಕಳಿಗೆ ಸೂಕ್ತ ಕ್ರೀಡಾ ತರಬೇತಿಯನ್ನು ನೀಡಿ ರಾಷ್ಟ್ರ ಮಟ್ಟದವರೆಗೂ ಕಬಡ್ಡಿ ಹಾಗೂ ವಾಲಿಬಾಲ್ ಪಂದ್ಯಗಳಲ್ಲಿ ಮಿಂಚಿ ರುತ್ತಾರೆ ಈ ಶಾಲೆಯಲ್ಲಿ ಹಿಂದೆ ಸೇವೆ ಸಲ್ಲಿಸುತ್ತಿದ್ದ ಕೆಎಚ್ ತೀರ್ಥಪ್ಪ ಅವರ ಅಪಾರ ಕ್ರೀಡಾಸಕ್ತಿ ಮಕ್ಕಳನ್ನು ಈ ಮಟ್ಟಕ್ಕೆ ಬೆಳೆಸಲು ಸಹಕಾರಿಯಾಗಿದೆ ಈ ಶಾಲೆಯ ಹಲವಾರು ಮಕ್ಕಳು ರಾಜ್ಯದ ವಿವಿಧ ಟೂರ್ನಿಗಳಲ್ಲಿ ಖೇಲೋ ಇಂಡಿಯಾ ದಂತಹ ಪಂದ್ಯಗಳಲ್ಲಿ ತಮ್ಮ ಚಾಪು ಮೂಡಿಸಿರುತ್ತಾರೆ ಶಾಲೆಯ ಶಿಕ್ಷಕರು ಮುಖ್ಯ ಶಿಕ್ಷಕರು ಹಾಗೂ ಗ್ರಾಮಸ್ಥರ ಸಹಕಾರದಿಂದ ಇಷ್ಟೆಲ್ಲಾ ಸಾಧನೆ ಮಾಡಲು ಸಾಧ್ಯವಾಗಿದೆ ಎಂದು ಶಿಕ್ಷಕರು ಮತ್ತು ಮುಖ್ಯಶಿಕ್ಷಕರು ಅಭಿಪ್ರಾಯ ಪಟ್ಟಿರುತ್ತಾರೆ. ಇಷ್ಟೆಲ್ಲಾ ಸಾಧನೆ ಮಾಡಿದರೂ ಮಕ್ಕಳು ಆಡಲಿಕ್ಕೆ ಸರಿಯಾದ ಆಟದ ಮೈದಾನ ವಿರುವುದಿಲ್ಲ ಮತ್ತು ದೈಹಿಕ ಶಿಕ್ಷಕರ ಕೊರತೆ ಇದೆ ಇದಕ್ಕೆ ಸಂಬಂಧಪಟ್ಟ ಶಿಕ್ಷಣಾಧಿಕಾ–ರಿಗಳು ಶಾಲೆಗೆ ಕಡೆಗೆ ಗಮನಹರಿಸಲು ಸಾರ್ವಜನಿಕರ ಒತ್ತಾಯವಾಗಿದೆ.

–ಗೊರವರ ಕೋಟೆಪ್ಪ

ಕರುನಾಡ ಕಂದ
ಸಂಪುಟ–1 । ಸಂಚಿಕೆ–3
ದಿನಾಂಕ: 1–12–2021 । ಪುಟಗಳು: 16

# ತಂದೆ ಮತ್ತು ತಾಯಿಯ ತ್ಯಾಗಮಯವಾದ ಜವಾಬ್ದಾರಿಕೆಗೆ ಬೆಲೆ ಕಟ್ಟಲಾಗದು

"ಹೆಣ್ಣು ಮಕ್ಕಳನ್ನು ಪಡೆದಿರುವ ಎಲ್ಲಾ ಅದೃಷ್ಟವಂತ ಅಪ್ಪ ಅವ್ವದಿರೆಗೆ ಇದು ಸಮರ್ಪಣ.'"

* ಹೆರಿಗೆಗೆಂದು ಆಪರೇಷನ್ ರೂಮನೊಳಗೆ ಹೋಗುತ್ತಿರುವ ತಾಯಿಗೆ ಅಪ್ಪ ನಿನಗೇನು ಆಗಲ್ಲ ಏನೂ ಹೆದರಬೇಡ ಅಂತ ಒಳಗೊಳಗೆ ಅಳುತ್ತಾ ಎಲ್ಲಾ ನೋವ ಸಹಿಸಿಕೊಳ್ಳುತ್ತಾನೆ ಮತ್ತು ಅಪ್ಪ ತಾಯಿಯ ಹೆ–ರಿಗೆ ಆಗುವಾಗ ಅಪ್ಪ ಓ ದೇವರೇ ತಾಯಿ ಮಗುವನ್ನು ನೀನೇ ಕಾಪಾಡು ಎಂದು ಆ ದೇವರಲ್ಲಿ ಪ್ರಾರ್ಥಿಸುತ್ತಾನೆ ಅದು ತಂದೆಯ ಮನಸ್ಸು ಆಗಿರುತ್ತದೆ..

* ನಿಮ್ಮ ಪತ್ನಿ ಹೆಣ್ಣು ಮಗಳಿಗೆ ಜನ್ಮ ನೀಡಿದ್ದಾಳೆ.ತಾಯಿ ಮತ್ತು ಮಗು ಚೆನ್ನಾಗಿದ್ದಾರೆ ಅಂತೆ ಡೋರ್ ತೆರೆದು ಬಂದ ನರ್ಸ್ ಹೇಳುವಾಗ ಆತನ ಕಣ್ಣುಗಳಲ್ಲಿ ಆತಂಕ ಮತ್ತು ಮನದೊಳಗೆ ಸಂತೋಷವೂ ಕಾಣಿಸುತ್ತದೆ.ಆ ತಂದೆಯ ಮನಸ್ಸಿನ ಭಾವನೆಯಾಗಿರುತ್ತದೆ.

* ನಂತರ ದಿನಗಳಲ್ಲಿ ಆ ಮುದ್ದುಮಗುವಿನ ಉತ್ತಮ ಭವಿಷ್ಯವನ್ನು ರೂಪಿಸುವ ತಯಾರಿಯಲ್ಲಿ ಮಾತ್ರ ತಂದೆ ಬ್ಯುಸಿ ಆಗಿರುತ್ತಾರೆ..

* ತಂದೆಯ ಆ ಹೆಣ್ಣು ಮಗುವನ್ನು ಪ್ರೀತಿ ವಾತ್ಸಲ್ಯ ದಿಂದ ಸಾಕಿ ಸಲುಹಿ ಸಂತೋಷದ ದಿನಗಳು ಉರುಳುತ್ತಿದ್ದಂತೆ ಒಂದು ದಿನ ಆಕೆ ಋತುಮತಿಯಾದಾಗ ಮೊದಲು ಆ ತಂದೆಯ ತುಂಬಾನೇ ಮನಸ್ಸಿನಲ್ಲಿ ಖುಷಿ ಆಗಿರುತ್ತಾನೆ. ಮತ್ತು ಆ ಹೆಣ್ಣು ಮಗಳನ್ನು ಇನ್ನಷ್ಟು ಪ್ರೀತಿಯಿಂದ ಖುಷಿ ಪಡಿಸಬೇಕೆಂದು ಆ ತಂದೆಯ ಆಸೆ ಮತ್ತು ಕನಸ್ಸು ಕೂಡ ಕಟ್ಟಿಕೊಂಡಿರುತ್ತಾನೆ..

*ಹೆಣ್ಣು ಮಗಳು ವಯಸ್ಸಿಗೆ ಬಂದ ನಂತರ ಆ ತಂದೆಯ ಕೂಡ ಅವಳ ಜೀವನ ರೂಪಿಸಬೇಕು. ಮತ್ತು ಅವಳಿಗೆ ಉತ್ತಮವಾದ ಶಿಕ್ಷಣವನ್ನು ನೀಡಬೇಕು. ಮತ್ತು ಅವಳಿಗೆ ಸರಿಯಾದ ಮಾರ್ಗದಲ್ಲಿ ದಾರಿ ತೋ–ರಿಸಬೇಕೆಂದು ಆ ತಂದೆಯ ಆಸೆ ಕನಸು ಕೂಡಾ ಕಟ್ಟಿಕೊಂಡಿರುತ್ತಾನೆ..

* ತಾಯಿಯು ಕೂಡಾ ತನ್ನ ಹೆಣ್ಣು ಮಗಳ ಮೇಲೆ ತುಂಬಾ ಆಸೆ ಕನಸ್ಸು ಕೂಡಾ ಇಟ್ಟಿಕೊಡಿರುತ್ತಾಳೆ. ಮತ್ತು ತಾಯಿಯು ತನ್ನ ಮಗಳ ಮೇಲೆ ಭಾರವಾದ ಕೆಲಸವನ್ನು ನೀಡದೆ ಇರುತ್ತಾಳೆ. ಮತ್ತು ನನ್ನ ಮಗಳು ಯಾವಾಗಲೂ ಸುಖ ಸಂತೋಷದಿಂದ ಇರಬೇಕೆಂದು. ತಾಯಿಯು ಕೂಡ ಬಯಸುತ್ತಾಳೆ..

* ದಿನನಿತ್ಯ ಮನೆಗೆ ಬರುವಾಗ ಕೆಲಸ ಮುಗಿಸಿಕೊಂಡು ಸಂಜೆ ಹೊತ್ತಿನನಲ್ಲಿ ಮನೆಗೆ ಬರುವಾಗ ಮಗಳಿಗೆ ತಿಂಡಿ ತಿನಿಸುಗಳನ್ನು ತರುವ ತಂದೆಯ ಹವ್ಯಾಸವಾಗಿರುತ್ತದೆ ಮತ್ತು ಆ ಹೆಣ್ಣು ಮಗಳು ಕೇಳಿದರೂ ಬೇಕಾಗಿದ್ದು ಕೇಳಿದರೆ ಸಾಕು ಕೊಡಿಸುತ್ತಾನೆ. ತಂದೆಯು ಮಗಳ ಮೇಲೆ ತುಂಬಾನೆ ಪ್ರೀತಿಯನ್ನು ಬಯಸುತ್ತಾನೆ. ಮಗಳಿಗೆ ಯಾವಾಗಲೂ ಏನಾದರೂ ಸಾಮಾನುಗಳನ್ನು ಡ್ರೆಸ್, ಬಂಗಾರ,ಒ–ಡವೆಗಳು, ಮುಂತಾದವುಗಳ ವಸ್ತುಗಳನ್ನು ತಂದೆಯ ಕೊಡಿಸಲು ಯಾವಾಗಲೂ ಸಿದ್ಧನಾಗಿರುತ್ತಾ ನೆ..

* ತಂದೆಯ ತನ್ನ ಹೆಣ್ಣು ಮಗಳ ಮೇಲೆ ಯಾವುದೇ ತೊಂದರೆ ದುಃಖವನ್ನು ಬಂದಾಗ ಆ ಹೆಣ್ಣು ಮಗಳನ್ನು ಸಮಾಧಾನಪಡಿಸಿ ನಿನಗೆ ಏನೂ ಕಷ್ಟ ಬಂದರೂ ನಾನೇ ಇದ್ದೇನೆ ಎನ್ನುವ ತಂದೆ ಧೈರ್ಯ ತುಂಬಿ ಸಮಾಧಾನಪಡಿಸುತ್ತಾನೆ.

* ತಾಯಿಯೂ ಕೂಡ ತನ್ನ ಹೆಣ್ಣು ಮಗಳ ಮೇಲೆ ತುಂಬಾನೇ ಆಸೆ –ಕನಸ್ಸು ಹೊತ್ತಿರುತ್ತಾಳೆ. ಆ ಹೆಣ್ಣು ಮಗಳಿಗೆ ಮನೆಯ ಶಿಕ್ಷಣದ ಸಂಸ್ಕಾರವನ್ನು ಕಳಿಸುತ್ತಾಳೆ. ಮತ್ತು ಅಡುಗೆ ಮಾಡಲು ಮತ್ತು ಮನೆಯ ಕೆಲಸವನ್ನು ಮಾಡಲು ಕಳಿಸುತ್ತಾಳೆ. ಹಾಗೆಯೇ ತಾಯಿಯು ಕೂಡ ಮನೆಯ ಮೊದಲ ಪಾಠಶಾಲೆ ಆಗಿರುತ್ತಾಳೆ..

*ತಂದೆ –ತಾಯಿಯೂ ಕೂಡ ಯಾವಾಗಲೂ ಆ ಹೆಣ್ಣು ಮಗಳ ಮೇಲೆ ತುಂಬಾ ಆಸೆ– ಕನಸ್ಸುಗಳನ್ನು ಕಟ್ಟಿಕೊಡಿರುತ್ತಾರೆ. ಮತ್ತು ಆ ಹೆಣ್ಣು ಮಗಳಿಗೆ ಏನೂ ಕಡಿಮೆ ಮಾಡದೇ ಎಲ್ಲವನ್ನು ಕೊಡಿಸುವೆ ಎಂದು ತಂದೆಯು ಸಿದ್ದನಾಗಿರುತ್ತಾನೆ. ಈ ಜೀವನದಲ್ಲಿ ತಂದೆ ತಾಯಿಯ ಜವಾಬ್ದಾರಿ ಮತ್ತು ಬೆಲೆಯನ್ನು ಕಟ್ಟಲು ಯಾರಿಗೂ ಸಾಧ್ಯವಿಲ್ಲ.

–ಶಂಕ್ರಮ್ಮ ಕಲಘಟಗಿ.

# ಕಿಲಾರಹಟ್ಟಿ ಕಿಲ್ಲರ್ ಹಟ್ಟಿಯಾದದ್ದು ಹೇಗೆ..?

## ದಲಿತರು ಪ್ರತ್ಯೇಕ ರಾಜ್ಯಕ್ಕಾಗಿ ಏಕೆ ಹೋರಾಡ ಬಾರದು?



ವಷ9ದ ಹಿಂದೆ 10 ನೇ ತರಗತಿ ಓದುತ್ತಿದ್ದ 16 ವಷ9ದ ಮಗಳನ್ನು ಮೇಲ್ಜಾತಿಯ ಯುವಕ ಹೊತ್ತೊಯ್ದರೂ ಮುದಗಲ್ ಪೋಲಿಸರು ಮಿಸಿಂಗ್ ಕೇಸು ದಾಖಲಿಸಿಕೊಂಡು ಯಾವ ಹುಡುಕಾಟ ಮಾಡದೆ ರಾಯಚೂರು ಮಹಿಳಾ ಠಾಣೆಗೆ ಪ್ರಕರಣ ವಗಾ9ಯಿಸಿ ಕೈತೊಳೆದು ಕೊಂಡಿದ್ದಾರೆ.ಏಕೆಂದರೆ ಅಪಹರಣ–ಕ್ಕೊಳಗಾದ ಶ್ರುತಿ ಮಾಲಿಗೌಡರ ಮಗಳಲ್ಲ!ಕೂಲಿಕಾರ ಮಾದಿಗ ಬೈಲಪ್ಪ ಹಾಗೂ ರೇಣುಕಮ್ಮರ ಮಗಳು!

ಮಗಳನ್ನು ಕಳೆದು ಕೊಂಡ ಸಂಕಟ ತಡೆಯಲಾಗದ ಬೈಲಪ್ಪ ತನ್ನ ಗುಡಿಸಿಲೆ ಮುಂದೆ ತಾನು ಕೂಗಾಡಿದ್ದಕ್ಕೆ ಪೋಲಿಸ್ ಗೌಡ ಮಾಲಿಗೌಡರ ಮುಂದಾಳತ್ವದಲ್ಲಿ ನೂರಾರು ಸವಣಿ9ಯ ಹಿಂದುಗಳು ಮನೆಗೆ ನುಗ್ಗಿ ನಾಯಿಯಂತೆ ಬೈಲಪ್ಪನನ್ನು ಎಳೆದೊಯ್ದಿದ್ದಾರೆ.ಕಾಲಿಡಿದು ಬೇಡಿಕೊಂಡ ಈತನ ಹೆಂಡತಿ ಮಕ್ಕಳನ್ನು ತುಳಿದಾಡಿ ಕೇಕೇ ಹಾಕಿದ್ದಾರೆ. ಮಾದಿಗರ 15 ಕುಟುಂಬಗಳು ಚಲವಾದಿಗಳ ಎರಡು ಕುಟುಂಬಗಳು ಬೈಲಪ್ಪನನ್ನು ಬಿಡಿಸಿಕೊಳ್ಳಲಾಗದೆ ಥರ ಥರನೆ ನಡುಗುತ್ತಾ ಕೈಯಲ್ಲಿ ಜೀವ ಹಿಡಿದುಕೊಂಡು ನಿಂತಿದ್ದಾರೆ.ಊರಿನ ನಟ್ಟನಡುವೆ ಇರುವ ವಿದ್ಯುತ್ ಕಂಬಕ್ಕೆ ಅರೆ ಬೆತ್ತಲೆ ಮಾಡಿ ಸರಾಸರಿ ಒಂದುವರೆ ಗಂಟೆಗಳ ಕಾಲ ಥಳಿಸಿದ್ದಾರೆ! ಯಾರೂ ಬಿಡಿಸಿಕೊಳ್ಳುವವರಿಲ್ಲ!

ಅಷ್ಟರಲ್ಲಿಯೆ ಅಲ್ಲಿಗೆ ಬಂದ ಪೋಲಿಸರನ್ನು ಕಂಡು ಮುಗ್ಧ ರೇಣುಕಮ್ಮ ಅವರ ಕಾಲಮೇಲೆ ಬಿದ್ದು ಬೇಡಿಕೊಂಡಿದ್ದಾಳೆ. ಅಲ್ಲಿ ಆದದ್ದೆ ಬೇರೆ.ಮುದಗಲ್ ಠಾಣೆಯ ಎಎಸ್ಐ ಮಹಾಂತೇಶ ಕತ9ವ್ಯಕ್ಕಿಂತ ಕುಲವೆ ಮುಖ್ಯ ಎಂದು ತನ್ನ ಲಾಠಿಯಿಂದ ಬೈಲಪ್ಪನನ್ನು ಹಿಗ್ಗಾ ಮುಗ್ಗಾ ಥಳಿಸಿ ತಾನು ಮೇಲ್ಜಾತಿಯ ಪರ ಎಂದು ಪರಾಕ್ರಮಿಸಿದ್ದಾನೆ.

ತದನಂತರ ಬೈಲಪ್ಪನನ್ನು ಅವರೆ ಬಿಚ್ಚಿ ಮುದಗಲ್ ಠಾಣೆಗೆ ಎಳೆದೊಯ್ದು ತಮಗೆ ಬೇಕಾದಂತೆ ಹೇಳಿಕೆ ತೆಗೆದುಕೊಂಡು 10 ಜನರ ವಿರುದ್ದ ಎಫ್ ಐ ಆರ್ ಮಾಡಿದ್ದಾರೆ.

ಕಿಲಾರಹಟ್ಟಿಯಲ್ಲಿ ಹೋಟೆಲೊಳಗೆ ದಲಿತರು ಹೋಗುವಾಂಗಿಲ್ಲ.ಗುಡಿ ಗುಂಡಾರ ಪ್ರವೇಶವಿಲ್ಲ. ಕುಲವ್ಯವಸ್ಥೆ ಒಪ್ಪಿ ಅಪ್ಪಿ ಜೀವನ ಮಾಡಬೇಕು.15 ಕುಟುಂಬಗಳ ಪೈಕಿ 11 ದಲಿತರು ಭೂರಹಿತರಾಗಿದ್ದಾರೆ. ಕೆಲವರು ಸಿಂಧನೂರು ಬೆಂಗಳೂರಿಗೆ ಬದುಕಲು ಹೋಗಿ ಬರುತ್ತಾರೆ.

ಕಿಲ್ಲಾರ ಹಟ್ಟಿಗೆ ಕೇವಲ 4 ಕಿ.ಮೀ.ದೂರದಲ್ಲಿ ಕಾಂಗ್ರೆಸ್ ಮುಖಂಡ –ಕುಷ್ಟಗಿ ಶಾಸಕ ಅಮರೆಗೌಡ ಅವರ ಬಯ್ಯಾಪೂರ ಇದೆ.ಕೇವಲ 3 ಕಿ ಮೀ. ದೂರದಲ್ಲಿ ಬಿಜೆಪಿ ತಾಲೂಕ ಅಧ್ಯಕ್ಷ ವೀರನಗೌಡ ಅವರ ಊರು ಲಿಕ್ಕಿಹಾಳ ಇದೆ.ಎಡವಿ ಬಿದ್ದರೆ ತಲೆಗೆ ತಾಗುವಂತೆ 'ಲಿಂಗಾಯತರ'ರ ಪ್ರಭಾವಿ ಮತ ಸಜ್ಜಲಗುಡ್ಡ ಇದೆ. ಉಪ್ಪಾರ ನಂದಿಹಾಳ ಸೇರಿ ಈ ಎಲ್ಲಾ ಹಳ್ಳಿಗಳಲ್ಲಿ ಅಸ್ಪ್ರುಶ್ಯತೆ ಜಾತಿ ತಾರತಮ್ಯ ಕಡ್ಡಾಯವಾಗಿ ಜಾರಿಯಲ್ಲಿದೆ.

ಮಗಳ ಅಪಹರಣ ಹಾಗೂ ಮಾತಾಡಿದ ತಂದೆಯ ಮೇಲೆ ಸಾಮೂಹಿಕ ಹಲ್ಲೆಯಾಗಿ ಹೋಗಿದ್ದರೂ ಲಿಂಗಸಗೂರು ಶಾಸಕ ಡಿ.ಎಸ್.ಹುಲಿಗೆರಿ ಕಿಲಾರಹಟ್ಟಿ ಗೆ ಬಂದಿಲ್ಲ.ಮೀಸಲು ಕ್ಷೇತ್ರದ ಎಸ್ಸಿ ಶಾಸಕನೀತನಾದರೂ ಈತ ದಲಿತನಲ್ಲ!

ಬಿಜೆಪಿಯ ಮಾಜಿ ಶಾಸಕ ಡಿ.ಮಾನಪ್ಪ ವಜ್ಜಲ ಇತ್ತ ಸುಳಿದಿಲ್ಲ.ಏಕೆಂದರೆ ಮೊನ್ನೆ ಮೊನ್ನೆಯ ಆರ್ ಎಸ್ ಎಸ್ ಪಥಸಂಚಲನದಲ್ಲಿ ಗಣಧಾರಿಯಾಗಿ ವಣಾ9ಶ್ರಮ ಧಮ್9ಕ್ಕೆ ಜಯವಾಗಲಿ ಎಂದಿದ್ದಾನೆ.ಅಷ್ಟಕ್ಕೂ ಈತನೂ ದಲಿತನಲ್ಲ.

ಸಾಲದೆಂಬಂತೆ' ಕಾಂಗ್ರೆಸಿನಲ್ಲಿ ಬಯ್ಯಾಪೂರ ಗೌಡರ ಮೇಲಾಳುಗಳಾದ ಎರಡೂ ಮುರಾರಿಗಳೂ ಇತ್ತ ಸುಳಿದಿಲ್ಲ! ಮಾದಿಗರಾಗಿಯೂ ಮಾದಿಗರ ಪರ ಮಾತಾಡಿದರೆ ಮಾಲಿಗೌಡರ ಮುನಿಸಿಕೊಂಡರೆ ಮುಂದಿನ ಚುನಾವಣೆಯಲ್ಲಿ ಮತ ಬೀಳುವುದಿಲ್ಲೆಂಬ ಮತದವರು ಇವರು.



ನಿನ್ನೆ ಕಿಲ್ಲರ್ ಹಟ್ಟಿಗೆ ಹೋಗಿ ಅಲ್ಲಿನ ಜನರ ಸಭೆ ನಡೆಯಿಸಿ, ಅತ್ತು ತತ್ತರಿಸಿ ನಿತ್ರಾಣವಾಗಿದ್ದ ರೇಣುಕಮ್ಮಳ ಸಮೇತ ಮುದುಗಲ್ ಠಾಣೆಗೆ ಬಂದು 40 ಜನ ಸವಣಿ9ಯ ಗುಂಡಾಗಳ ವಿರುದ್ದ ದೂರು ನೀಡಿ ಮುದಗಲ್ ನಲ್ಲಿ ಪತ್ರಿಕಾ ಗೋಷ್ಠಿ ನಡೆಯಿಸಿ ನ್ಯಾಯ ಕೊಡದಿದ್ದರೆ ಬರುವ ಮಂಗಳವಾರ ಜಿಲ್ಲಾ ಪೊ?ಲಿಸ್ ಅಧಿಕಾರಿ ಕಚೇರಿ ಮುತ್ತಿಗೆ ಹಾಕುವ ತೀಮಾ9ನ ಪ್ರಕಟಿಸಿದ್ದೇವೆ.ಇತ್ತ ಲಿಂಗಸಗೂರಿನ ಎಲ್ಲಾ ದಲಿತ ಸಂಘಟನೆಗಳು ಡಿವೈಎಸ್ ಪಿ ಕಚೇರಿ ಎದಿರು ಅನಿದಿ9ಷ್ಟ ಧರಣಿ ಆರಂಭಿಸಿ ತಪ್ಪಿತಸ್ಥ ಅಧಿಕಾರಿಗಳ ಅಮಾನತ್ತಿಗೆ ಹಾಗೂ ಅಪಹರಣ ಪ್ರಕರಣದ ತನಿಖೆಗೆ ಒತ್ತಾಯಿಸಿದ್ದಾರೆ.



ಮಿ?ಸಲು ಕ್ಷೇತ್ರ ಲಿಂಗಸೂಗೂರು ಸೇರಿ ಈಡಿ ರಾಯಚೂರು ಜಿಲ್ಲೆಯ ಶೇಕಡ 50 ಗ್ರಾಮಗಳಲ್ಲಿ ಅಸ್ಪ್ರುಷ್ಯತೆ ಹಾಗೂ ಜಾತಿ ದೌಜ9ನ್ಯದ ಕ್ರೌಯ9 ರಾರಾಜಿಸುತ್ತಿದೆ. ಇದರ ನಿಮೂ9ಲನೆಗೆ ರಾಜ್ಯ ಸರಕಾರ ಮುಂದಾಗಬೇಕು.ಇಲ್ಲವೆ ದಲಿತರು ಹಾಗೂ ಎಲ್ಲಾ ಜನಪರ ಶಕ್ತಿಗಳು ದಲಿತರ ಪ್ರತ್ಯೇಕರಾಜ್ಯಕ್ಕಾಗಿ ಹೋರಾಡ ಬೇಕು.

ತಂಡದಲ್ಲಿದ್ದ ಒಡನಾಡಿಗಳು:

ಆರ್.ಮಾನಸಯ್ಯ ಎಂ.ಡಿ.ಅಮೀರ ಅಲಿ,ಚಿನ್ನಪ್ಪ ಕೊಟ್ರಿಕಿ,ತಿಪ್ಪರಾಜ ಗೆಜ್ಜಲಗಟ್ಟಾ'ಖಾಲಿದ್ ಚಾವೂಸ್,ಅಮರೆಗೌಡ ಗುಂತಗೋಳ ,ಸತೀಶ್ ,ಬಸವರಾಜ ನಾಯಕ, ಬಸವರಾಜ ಬಡಿಗೇರ,ಕವಿ ಸಿ.ದಾನಪ್ಪ ನಿಲೋಗಲ್, ಹೆಚ್.ಎನ್.ಬಡಿಗೇರ,ದೊಡ್ಡಪ್ಪ ಮಸ್ಕಿ ಮುಂತಾದವರು.

ಮುದಗಲ್ನಲ್ಲಿ ಸಾಥ್ ನೀಡಿದ ಮುದಗಲ್ನ ಎಲ್ಲಾ ದಲಿತ ಮುಖಂಡರು. ಹನುಮಂತಪ್ಪ ಕಾಕರಗಲ್, ಪ್ರಭುರಾಜ ಕೊಡ್ಲಿ ಮುಂತಾದವರು.

# ಸಿರಿಗನ್ನಡ ರಾಷ್ಟ್ರೀಯ ರಾಜ್ಯೋತ್ಸವ ಪ್ರಶಸ್ತಿಗೆ ಲಕ್ಷ್ಮಣ ರಾಠೋಡ ಆಯ್ಕೆ

ಔರಾದ: ಸಪ್ತಸ್ವರ ಸಂಗೀತ ಕಲಾ ಹಾಗೂ ಗಡಿ ನಾಡು ನುಡಿ ವಾರಪತ್ರಿಕೆಯ ಬೇಳಗಾವಿ ಇವರ ಸಂಯುಕ್ತಾಶ್ರ್ಯಯದಲ್ಲಿ ನಾಡು ನುಡಿಗಾಗಿ ಸಾಹಿತ್ಯ ಸಂಸ್ಕೃತಿ ಕಲೇ ಶೀಕ್ಷಣ ಕಿರುತೆರೆ ಚಲನಚಿತ್ರ ರಾಜ–ಕೀಯ ಸಾಮಾಜಿಕ ಪಕ್ಷದ ಸಂಘಟನೆ ಹಾಗೂ ಸಮಾಜದ ಸರ್ವೋತ್ತಮ ಬೇಳವಣಿಗೆಗೆ ವಿವಿಧ



ಕ್ಷೇತ್ರದಲ್ಲಿ ನಿಸ್ವಾರ್ಥದಿಂದ ನಾಡಿಗಾಗಿ ದುಡಿದಿರುವ ಮಹನಿಯರನ್ನು ಗುರುತಿಸಿ ಪ್ರಶಸ್ತಿ ಪ್ರಧಾನ ಮಾಡಲಾಯಿತು ಈ ಸಾಲಿನಲ್ಲಿ ಬೀದರ ಜಿಲ್ಲೇಯ ಔರಾದ ತಾಲೂಕಿನ ಲಕ್ಷ್ಮಣ ರಾಠೋಡ ರವರ ಮಾಧ್ಯಮ ಕ್ಷೇತ್ರದ ಸೇವ ಗುರುತಿಸಿ ಪ್ರಶಸ್ತಿ ಪ್ರಧಾನ ಮಾಡಲಾಯಿತು



ಕರುನಾಡ ಕಂದ
ಸಂಪುಟ–1 । ಸಂಚಿಕೆ–3
ದಿನಾಂಕ: 1–12–2021 । ಪುಟಗಳು: 16

# ಬಳಕೆ: ಬದಲಾವಣೆಯ ಪರ್ವ

## ಡಾ. ಎಚ್.ಆರ್. ಕೃಷ್ಣಮೂರ್ತಿ

ನಮ್ಮ ದೇಶದಲ್ಲಿ ಬಳಕೆಯಾಗುತ್ತಿರುವ ಪೆಟ್ರೋಲ್ ಮತ್ತು ವಾಹನಗಳಿಗೆ ಸಂಬಂಧಿಸಿದಂತೆ ಎರಡು ಮಹತ್ವದ ಬದಲಾವಣೆಗಳನ್ನು ಸದ್ಯದಲ್ಲೇ ತರುವ ಸೂಚನೆಯನ್ನು ಕೇಂದ್ರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ನೀಡಿದ್ದಾರೆ.

ಮೊದಲನೆಯದು, ಪೆಟ್ರೋಲ್‌ನೊಂದಿಗೆ ಹದವಾಗಿ ಬೆರೆಸುತ್ತಿರುವ ಎಥನಾಲ್ ಪ್ರಮಾಣವನ್ನು ಸದ್ಯದ ಶೇ 8.5ರಿಂದ ಹಂತ ಹಂತವಾಗಿ, 2023ರ ಏಪ್ರಿಲ್– 2025ರ ಏಪ್ರಿಲ್ ನಡುವೆ ಶೇ 20ಕ್ಕೆ ಏರಿಸುವುದು. ಎರಡನೆಯದಾಗಿ, ಆ ಅವಧಿಯೊಳಗಾಗಿಯೇ, ಒಂದಕ್ಕಿಂತ ಹೆಚ್ಚಿನ ಇಂಧನವನ್ನು ಬಳಸಬಲ್ಲ ಸಾಮರ್ಥ್ಯವಿರುವ ಎಂಜಿನ್‌ಗಳನ್ನು ಕಡ್ಡಾಯವಾಗಿ ವಾಹನಗಳಲ್ಲಿ ಅಳವಡಿಸುವುದು. 'ಫ್ಲೆಕ್ಸಿಬಲ್ ಫ್ಯೂಯೆಲ್ ವೆಹಿಕಲ್' (ಎಫ್‌ಎಫ್‌ವಿ) ಅಥವಾ ವಿವಿಧ ಇಂಧನಗಳನ್ನು ಬಳಸಬಲ್ಲ ವಾಹನಗಳ ಉತ್ಪಾದನೆಗೆ ಸಂಬಂಧಿಸಿದಂತೆ ವಿವರವಾದ ಮಾರ್ಗದರ್ಶಿ ಸೂಚನೆಗಳನ್ನು ಮುಂದಿನ ಆರು ತಿಂಗಳ ಒಳಗಾಗಿ ಪ್ರಕಟಿಸಲಾಗುವುದೆಂದು ಸಚಿವರು ತಿಳಿಸಿದ್ದಾರೆ.

ಎಥನಾಲ್ ಸಸ್ಯಮೂಲದಿಂದ ಪಡೆಯಬಹುದಾದ ಈಥೈಲ್ ಆಲ್ಕೊಹಾಲ್. ಪೆಟ್ರೋಲ್, ಡೀಸೆಲ್ ಮತ್ತು ಇತರ ಹೈಡ್ರೊಕಾರ್ಬನ್‌ಗಳಿಗಿಂತ ಶುದ್ಧವಾದ ಇಂಧನ. ಪೆಟ್ರೋಲ್‌ನೊಂದಿಗೆ ಎಥನಾಲನ್ನು ಸೇರಿಸುವ ಕ್ರಮ ನಮ್ಮ ದೇಶದಲ್ಲಿ ಪ್ರಾರಂಭವಾದದ್ದು 2003ರಲ್ಲಿ. 2007ರಲ್ಲಿ ಶೇ 5ರಷ್ಟು ಎಥನಾಲನ್ನು ಸೇರಿಸುವುದು ಕಡ್ಡಾಯವಾಯಿತು. ಇದೀಗ ಶೇ 8.5ರಷ್ಟು ಎಥನಾಲನ್ನು ಸೇರಿಸಿದ ಪೆಟ್ರೋಲ್ ದೇಶದಾದ್ಯಂತ ಮಾರಾಟವಾಗುತ್ತಿದೆ. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ನೇಮಿಸಿದ್ದ ಪರಿಣತರ ಸಮಿತಿ, ಶೇ 20ರಷ್ಟು ಎಥನಾಲನ್ನು ಪೆಟ್ರೋಲಿಗೆ ಸೇರಿಸಿ ಬಳಕೆಗೆ ತರುವುದರ ಜೊತೆಗೆ, ಅದನ್ನು ಸಾಧಿಸಲು ಈ ಮುಂಚೆ ನಿಗದಿಯಾಗಿದ್ದ ಕಾಲಮಿತಿಯನ್ನು 2030ರಿಂದ 2025ಕ್ಕೆ ಇಳಿಸಿದೆ.

ಸರ್ಕಾರ ತರಲು ಹೊರಟಿರುವ ಈ ಎರಡು ಬದಲಾವಣೆಗಳಿಗೆ ಹಲವಾರು ಕಾರಣಗಳಿವೆ. ಕೇಂದ್ರ ಸರ್ಕಾರದ ಮೂಲದಂತೆ ಕಚ್ಚಾ ತೈಲದ ಆಮದಿಗೆ ವಾರ್ಷಿಕ ವೆಚ್ಚ ಸುಮಾರು ?7 ಲಕ್ಷ ಕೋಟಿಯಿಂದ 8 ಲಕ್ಷ ಕೋಟಿ. ಮುಂದಿನ 5 ವರ್ಷಗಳಲ್ಲಿ ಇದು ?15 ಲಕ್ಷ ಕೋಟಿ ಆಗಲಿದೆ. 2025ರ ವೇಳೆಗೆ ದೇಶದಾದ್ಯಂತ ಶೇ 20ರಷ್ಟು ಎಥನಾಲನ್ನು ಸೇರಿಸಿರುವ ಪೆಟ್ರೋಲನ್ನು (ಇ 20 ಇಂಧನ) ಬಳಸುವುದು ಸಾಧ್ಯವಾದರೆ ಪ್ರತಿವರ್ಷ ?30,000 ಕೋಟಿ ಉಳಿತಾಯ ಸಾಧ್ಯವಾಗುತ್ತದೆ.

ಇ–20 ಇಂಧನದ ಬಳಕೆಯಿಂದ ಅಪಾಯಕಾರಿಯಾದ ಹಸಿರುಮನೆ ಅನಿಲಗಳ ಉತ್ಸರ್ಜನೆಯನ್ನು ಶೇ 16ರಷ್ಟು ತಗ್ಗಿಸಬಹುದು. ಸದ್ಯದಲ್ಲಿ ನಮ್ಮ ದೇಶದಲ್ಲಿ ಪೆಟ್ರೋಲ್‌ನೊಂದಿಗೆ ಬೆರೆಸಲು ಲಭ್ಯವಿರುವ ಎಥನಾಲ್ ಪ್ರಮಾಣ ಸುಮಾರು 150 ಕೋಟಿ ಲೀಟರ್‌ಗಳು. 2025ರ ವೇಳೆಗೆ ದೇಶದಾದ್ಯಂತ ಇ–20 ಇಂಧನ ದೊರೆಯಬೇಕಾದರೆ ಎಥನಾಲ್ ಉತ್ಪಾದನೆ 1000 ಕೋಟಿ ಲೀಟರ್‌ಗಳಾಗಬೇಕು. ಇದು ಸಾಧ್ಯವೆಂಬುದೇ ಸರ್ಕಾರದ ಉತ್ಸಾಹಕ್ಕೆ ಕಾರಣ.

2018ರವರಗೆ ನಮ್ಮ ದೇಶದ ಎಥನಾಲ್ ಉತ್ಪಾದನೆಯ ಶೇ 90 ಭಾಗ ಬರುತ್ತಿದ್ದುದು ಸಕ್ಕರೆ ಕಾರ್ಖಾನೆಗಳಿಂದ. 2018ರಲ್ಲಿ ಜಾರಿಗೆ ಬಂದ ರಾಷ್ಟ್ರೀಯ ಜೈವಿಕ ಇಂಧನ ನೀತಿಯ ಅನ್ವಯ ನಗರ, ಗ್ರಾಮೀಣ ಪ್ರದೇಶಗಳ ಜೈವಿಕ ಕಸ ಮತ್ತು ಸೆಲ್ಯುಲೋಸ್‌ಯುಕ್ತ ಸಸ್ಯಮೂಲಗಳ ಆರ್ಗ್ಯಾನಿಕ್ ಪದಾರ್ಥಗಳಿಂದಲೂ ಎಥನಾಲ್ ಉತ್ಪಾದನೆಗೆ ಪ್ರೋತ್ಸಾಹ ದೊರೆಯಿತು. ಹೀಗಾಗಿ ಜೋಳ, ಗೆಣಸು, ಕೊಳೆತ ಆಲೂಗೆಡ್ಡೆ, ಮುಗ್ಗಲಾದ ಮೆಕ್ಕೆಜೋಳ, ಅಕ್ಕಿ, ಗೋಧಿ, ಕಟಾವಿನ ನಂತರ ನೆಲದಲ್ಲಿ ಉಳಿಯುವ ಕೂಳೆ ಮುಂತಾದವುಗಳನ್ನೂ ಎಥನಾಲ್ ಉತ್ಪಾದನೆಯಲ್ಲಿ ಬಳಸುವ ಪ್ರಕ್ರಿಯೆ ನಿಧಾನವಾಗಿ ಪ್ರಾರಂಭವಾಯಿತು. ಇದರ ಜೊತೆಗೆ, ಸಕ್ಕರೆ ಕಾರ್ಖಾನೆಗಳಲ್ಲಿ ಹೆಚ್ಚುವರಿಯಾಗಿ ಗೋದಾಮುಗಳಲ್ಲಿರುವ ಸುಮಾರು 60 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಸಕ್ಕರೆಯ ದಾಸ್ತಾನಿನಿಂದ, ಅಗತ್ಯವಾದಷ್ಟನ್ನು ಬಳಸಿ ಎಥನಾಲನ್ನು ಉತ್ಪಾದಿಸಬಹುದೆಂದು ಗಡ್ಕರಿ ಸೂಚಿಸಿದ್ದಾರೆ.

ಈ ಎಲ್ಲ ಕ್ರಮಗಳಿಂದ ದೇಶದಾದ್ಯಂತ ಇ–20 ಇಂಧನ ಬಳಕೆಗೆ ಬಂದಾಗ ರೈತರ ಆರ್ಥಿಕ ಪರಿಸ್ಥಿತಿಯೂ ಸುಧಾರಿಸುವುದೆಂಬ ನಿರೀಕ್ಷೆಯಿದೆ. ಬೆಳೆ ಕೂಳೆಯಿಂದ ಎಥನಾಲನ್ನು ಉತ್ಪಾದಿಸುವ ತಂತ್ರಜ್ಞಾನ ಇಂದು ಲಭ್ಯವಿರುವುದರಿಂದ, ಕೃಷಿ ಉಳಿಕೆಯನ್ನು ದಹಿಸುವುದರಿಂದ ಆಗುತ್ತಿರುವ ಪರಿಸರ ಮಾಲಿನ್ಯವನ್ನೂ ತಡೆಯಬಹುದು.

ಸದ್ಯದಲ್ಲಿ ನಮ್ಮ ರಸ್ತೆಗಳಲ್ಲಿ ಸಂಚರಿಸುತ್ತಿರುವ ಪಟ್ರೋಲ್ ವಾಹನಗಳಲ್ಲಿ, ಶೇ 10ರಷ್ಟು ಎಥನಾಲನ್ನು ಸೇರಿಸಿರುವ ಇ–10 ಇಂಧನವನ್ನು ಯಾವುದೇ ತೊಂದರೆಯಿಲ್ಲದೆ ನೇರವಾಗಿ ಬಳಸಬಹುದೆಂದು ತಜ್ಞರ ಸಮಿತಿ ಶಿಫಾರಸು ಮಾಡಿದೆ. ಆದರೆ ಮುಂದಿನ ಹಂತದಲ್ಲಿ ಇ–20 ಇಂಧನವನ್ನು ಬಳಸಿದಾಗ ಇಂಧನ ದಕ್ಷತೆ (ಫ್ಯೂಯೆಲ್ ಎಫಿಶಿಯೆನ್ಸಿ), ನಾಲ್ಕು ಚಕ್ರದ ವಾಹನಗಳಲ್ಲಿ ಶೇ 6ರಿಂದ 7ರಷ್ಟು ಮತ್ತು ದ್ವಿಚಕ್ರ ವಾಹನಗಳಲ್ಲಿ ಶೇ 3ರಿಂದ 4ರಷ್ಟು ಕಡಿಮೆಯಾಗಲಿದೆ ಎಂಬುದು ತಜ್ಞರ ಅಭಿಪ್ರಾಯ. ಆದರೆ ಇಂಧನ ಸರಿಯಾದ ರೀತಿಯಲ್ಲಿ ದಹನಕ್ಕೆ ಒಳಗಾಗುವಂತೆ ಎಂಜಿನನ್ನು ಸರಿಹೊಂದಿಸುವುದರಿಂದ ಈ ನಷ್ಟವನ್ನು ಕಡಿಮೆ ಮಾಡಬಹುದು.

2023ರಿಂದ ಪ್ರಾಯೋಗಿಕವಾಗಿ ಪ್ರಾರಂಭಿಸಿ, 2023– 2025ರ ಅವಧಿಯಲ್ಲಿ ಫ್ಲೆಕ್ಸಿಬಲ್ ಫ್ಯೂಯೆಲ್ ಕಾರುಗಳನ್ನು ವ್ಯಾಪಕವಾಗಿ ಬಳಕೆಗೆ ತರುವುದು ಸರ್ಕಾರದ ಇನ್ನೊಂದು ಮುಖ್ಯ ಯೋಜನೆ. ಒಂದೇ ವಾಹನ, ಒಂದಕ್ಕಿಂತ ಹೆಚ್ಚಿನ ಇಂಧನದ ಮೇಲೆ ಓಡುವುದೇ ಈ ಎಫ್‌ಎಫ್ ವಾಹನಗಳ ವೈಶಿಷ್ಟ್ಯ. ಉದಾಹರಣೆಗೆ, ಬ್ರೆಜಿಲ್‌ನಲ್ಲಿ ವ್ಯಾಪಕವಾಗಿ ಬಳಕೆಯಲ್ಲಿರುವ ಇಂತಹ ವಾಹನಗಳು ಶುದ್ಧ ಪೆಟ್ರೋಲ್, ವಿವಿಧ ಪ್ರಮಾಣಗಳಲ್ಲಿ ಮಿಶ್ರವಾಗಿರುವ ಎಥನಾಲ್–ಪೆಟ್ರೋಲ್ ಹಾಗೂ ಸಂಪೂರ್ಣವಾಗಿ ಎಥನಾಲ್– ಈ ಮೂರೂ ಇಂಧನಗಳನ್ನು ಬಳಸಬಲ್ಲವು.

ಬ್ರೆಜಿಲ್‌ನ ರಸ್ತೆಗಳಲ್ಲಿ ಸಂಚರಿಸುತ್ತಿರುವ ಸುಮಾರು ನಾಲ್ಕು ಕೋಟಿಗೂ ಹೆಚ್ಚಿನ ಎಫ್‌ಎಫ್ ವಾಹನಗಳಿಗೆ ಮೂರು ರೀತಿಯ ಇಂಧನಗಳನ್ನು ಬಳಸುವ ಆಯ್ಕೆಯಿದೆ. ಕಬ್ಬಿನ ಇಳುವರಿ ಉತ್ತಮವಾಗಿ ಎಥನಾಲ್ ಉತ್ಪಾದನೆ ಹೆಚ್ಚಿ, ಬೆಲೆ ಕಡಿಮೆಯಾದಾಗ ಬಹುತೇಕ ವಾಹನಗಳು ಶುದ್ಧ ಎಥನಾಲನ್ನೇ ಇಂಧನವಾಗಿ ಬಳಸುತ್ತವೆ. ಫ್ಲೆಕ್ಸಿ ಇಂಧನದ ಬೆಲೆ, ಪೆಟ್ರೋಲ್‌ಗಿಂತ ಶೇ 30ರಷ್ಟು ಕಡಿಮೆಯಿದ್ದಾಗ ವಾಹನಗಳು ಶುದ್ಧ ಪೆಟ್ರೋಲನ್ನು ಬಳಸುವುದೇ ಇಲ್ಲ.

ಎಥನಾಲ್‌ನಲ್ಲಿರುವ ಶಕ್ತಿಯ ಪ್ರಮಾಣ ಪೆಟ್ರೋಲ್‌ಗಿಂತ ಶೇ 34ರಷ್ಟು ಕಡಿಮೆ. ಅದನ್ನು ಪೆಟ್ರೋಲ್‌ನೊಂದಿಗೆ ಬೆರೆಸಿದಾಗ ಸಹಜವಾಗಿಯೇ ವಾಹನ ನೀಡುವ ಮೈಲೇಜ್ ಕಡಿಮೆಯಾಗುತ್ತದೆ. ಆದರೆ ಫ್ಲೆಕ್ಸಿ ಇಂಧನದ ಬೆಲೆಯೂ ಪೆಟ್ರೋಲ್‌ಗೆ ಹೋಲಿಸಿದರೆ ಶೇ 35ರಿಂದ 40ರಷ್ಟು ಕಡಿಮೆ. ಈ ಕಾರಣದಿಂದಾಗಿ ಬ್ರೆಜಿಲ್, ಅಮೆರಿಕ, ಕೆನಡಾ, ಯುರೋಪ್ ಮತ್ತು ಸ್ವೀಡನ್‌ಗಳಲ್ಲಿ ಈ ರೀತಿಯ ವಾಹನಗಳಿಗೆ ಉತ್ತಮ ಮಾರುಕಟ್ಟೆಯಿದೆ. ಈ ಮಾದರಿಯನ್ನು ಅನುಸರಿಸಿ, ಅಲ್ಲಿನ ತಂತ್ರಜ್ಞಾನವನ್ನು ಮತ್ತಷ್ಟು ಉತ್ತಮಪಡಿಸಿ, ಫ್ಲೆಕ್ಸಿ ಇಂಧನ ವಾಹನಗಳನ್ನು 2023– 2025ರ ಕಾಲಮಿತಿಯಲ್ಲಿ ಭಾರತದ ಮಾರುಕಟ್ಟೆಗೆ ಪರಿಚಯಿಸಬೇಕೆಂದು ಉದ್ಯಮವನ್ನು ಗಡ್ಕರಿ ಕೋರಿದ್ದಾರೆ. ಈ ದಿಕ್ಕಿನಲ್ಲಿ ಕೆಲಸ ಪ್ರಾರಂಭಿಸಿರುವುದಾಗಿ ಮಾರುತಿ ಸುಜುಕಿ ಹೇಳಿಕೆ ನೀಡಿದೆ. ಉಳಿದ ಅನೇಕ ವಾಹನ ಉತ್ಪಾದಕರು ಸರ್ಕಾರ ಪ್ರಕಟಿಸಲಿರುವ ಮಾರ್ಗದರ್ಶಿ ಸೂಚನೆಗಳನ್ನು ಎದುರು ನೋಡುತ್ತಿದ್ದಾರೆ.

ಎಥನಾಲ್‌ಗೆ ಬೇಡಿಕೆ ಹೆಚ್ಚಾದಂತೆ, ಆಹಾರ ಧಾನ್ಯಗಳು ಬೆಳೆಯುವ ಕೃಷಿಭೂಮಿಯನ್ನು ಕಬ್ಬು

ಮುಂತಾದವುಗಳನ್ನು ಬೆಳೆಯಲು ಬಳಸುವ ಪ್ರವೃತ್ತಿ ಹೆಚ್ಚಾಗಿ, ಆಹಾರ ಸಾಮಗ್ರಿಗಳ ಬೆಲೆ ಏರಬಹುದೆಂಬ ಕಾಳಜಿ, ಟೀಕೆಗಳು ವ್ಯಕ್ತವಾಗಿವೆ. ಆದರೆ ಇತ್ತೀಚೆಗೆ ಅಭಿವೃದ್ಧಿಪಡಿಸಿರುವ ಹಲವಾರು ಜೈವಿಕ ತಂತ್ರಜ್ಞಾನಗಳಿಂದ ಎಲ್ಲ ರೀತಿಯ ಜೈವಿಕ ತ್ಯಾಜ್ಯಗಳಿಂದಲೂ ಎಥನಾಲನ್ನು ಉತ್ಪಾದಿಸಬಹುದಾದ್ದರಿಂದ ಈ ಸಮಸ್ಯೆ ಉದ್ಭವಿಸುವುದಿಲ್ಲ ಎಂಬ ವಾದವೂ ಇದೆ. ಕಚ್ಚಾ ತೈಲದ ಮೇಲಿನ ಅಪಾಯಕಾರಿ ಅವಲಂಬನೆಯನ್ನು ಕಡಿಮೆ ಮಾಡಿ, ಪರಿಸರ ಮಾಲಿನ್ಯವನ್ನು ನಿಯಂತ್ರಿಸಲು ನೆರವಾಗಿ, ಉದ್ಯೋಗಾವಕಾಶಗಳನ್ನು ಸೃಷ್ಟಿಸಿ, ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿ, ಬಳಕೆದಾರರಿಗೆ ಇಂಧನದ ಆಯ್ಕೆಯ ಅವಕಾಶ ನೀಡಲಿದೆಯೆಂದು ಸರ್ಕಾರ ಹೇಳುತ್ತಿರುವ ಈ ಬದಲಾವಣೆಗಳಿಗೆ ಎಂತಹ ಸ್ವಾಗತ ದೊರೆಯಲಿದೆ ಎಂಬುದನ್ನು ಕಾದು ನೋಡಬೇಕಿದೆ.

# ಕಸಾಪ ನೂತನ ರಾಜ್ಯಾಧ್ಯಕ್ಷರಾದ ಡಾ. ಮಹೇಶ ಜೋಷಿ ಅವರಿಗೆ ಅಭಿನಂದನೆಗಳು



ಗಂಗಾವತಿ: ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯದ ಕೇಂದ್ರ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ಇತಿಹಾಸದಲ್ಲಿಯೇ ಅತಿ ಹೆಚ್ಚು ಮತ ಪಡೆದು ಆಯ್ಕೆಯಾದ ನಾಡೋಜ ಡಾ. ಮಹೇಶ ಜೋಷಿ ಅವರಿಗೆ ಕನ್ನಡ ನಾಡಿನ ಸಾಹಿತ್ಯ, ಸಂಸ್ಕೃತಿ ಹಾಗೂ ಕಲೆಯ ಗೆಲುವಾಗಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಾಂತ ಸದಸ್ಯರಾದ ಅಶೋಕಕುಮಾರ ರಾಯ್ಕರ್ ಪ್ರಾಧಿಕಾರದ ಪರವಾಗಿ ಹಾಗೂ ವೈಯುಕ್ತಿಕವಾಗಿ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಿರುತ್ತಾರೆ.

ನಾಡೋಜ ಡಾ. ಮಹೇಶ ಜೋಷಿಯವರು ಚಂದನ ವಾಹಿನಿಯ ಮೂಲಕ ಜಗತ್ತಿನಾದ್ಯಂತ ಕನ್ನಡದ ಪರಿಮಳವನ್ನು ಹಾಗೂ ಮಕರಂದವನ್ನು ಪಸರಿಸಿದ್ದಾರೆ. ಮುಂದೆ ಬರುವಂತಹ ಅವರ ಅಧಿಕಾರದ ಅವಧಿಯಲ್ಲಿ ನಾಡು ಇನ್ನಷ್ಟು ಕಲೆ, ಸಂಸ್ಕೃತಿ ಹಾಗೂ ಸಾಹಿತ್ಯದಿಂದ ಸಮೃದ್ಧವಾಗಲಿ ಎಂದು ಈ ಸಂದರ್ಭದಲ್ಲಿ ಹಾರೈಸುತ್ತೇನೆ. ಹಾಗೆಯೇ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾದಂತಹ ಶ್ರೀ ಶರಣೇಗೌಡ ಪೊಲೀಸ್ ಪಾಟೀಲ್ ಅವರಿಗೂ ಸಹ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

## ಪುಕ್ಕಲು ಸಾರ್ವಜನಿಕರು

ಕಣ್ಗಳೊದ್ದೆಯಾಯಿತು ಎರಡು
ಅತ್ಯಾಚಾರದ ಸುದ್ದಿ ಕೇಳಿ
ಮನಸ್ಸು ಕುಗ್ಗಿ ಬಿದ್ದಿದೆ
ಎಲ್ಲಡೆ ಇದರದೇ ಸುದ್ದಿ ಕೇಳಿ

ಪುಟ್ಟ ಕಂದನಿಂದ ಮುದುಕಿಯವರೆಗೂ
ಬಿದ್ದಿದೆ ದರಿದ್ರ ಕಾಮ ಭಕ್ಷಕರ
ಕಣ್ಗಳೆರಡು
ಅಧಿಕಾರ, ಸ್ಥಾನ–ಮಾನದ ಶಕ್ತಿಯಿಂದ
ಅಧರ್ಮ ಗೆದ್ದು, ಧರ್ಮ
ಉಳಿಯದಂತಾಗಿಹುದು.

ಕಿವಿ, ಎದೆ, ಸರ್ವಾಂಗ ಕಚ್ಚಿ ಕಚ್ಚಿ
ಬಾಲೆಯ ಭವಿಷ್ಯ ತೊಳೆದರು ಉಪ್ಪಚ್ಚಿ
ಅರಳುವ ಹೂ ಮನಸು ಅರಳುವ
ಮುನ್ನವೇ ಬಾಡಿ ಹೋದವು

ಅಮಾಯಕರ ಮುಗುಳ್ನಗೆಯನ್ನೇ
ಕಸಿದುಕೊಂಡರು ಮೂರ್ಖರು
ಅಕ್ಕಾ–ತಂಗಿ, ಅಮ್ಮ–ಮಗಳ ಸಂಬಂಧ
ಅರಿಯದ ಪಾಪಿಷ್ಠ ಕಾಮಿಗಳು

ಎಲ್ಲಡೆ ಮೇಣದ ಬತ್ತಿ ಹಿಡಿದು
ನ್ಯಾಯ ಒದಗಿಸಲು ಇಳಿವರು
ಆದರೆ, ಕ್ಷಣಿಕ ಕಣೋ ಸಿಟ್ಟು
ನಮ್ಮ ಪುಕ್ಕಲು ಸಾರ್ವಜನಿಕರದ್ದು.



**–ಸಾಕು ಮಹಾರಾಜ್**
**(ಸಾಗರ್ ಕುಲಕರ್ಣಿ)**
**ತಾಂತ್ರಿಕ ವಿದ್ಯಾರ್ಥಿ, ವಿಜಯಪುರ**

# ನೈಜ ಅಭಿವೃದ್ಧಿ ಎಂದರೆ ಅದು ಗ್ರಾಮಗಳ ಅಭಿವೃದ್ಧಿ– ಮಹಾತ್ಮ ಗಾಂಧಿ




ಸ್ವತಂತ್ರ ಸಿಕ್ಕಾಗಿನಿಂದಲೂ ಗಡಿ ಭಾಗದ ಹಳ್ಳಿಗಳ ಬಗ್ಗೆ ಯಾವುದೇ ರೀತಿ ಅಭಿವೃದ್ಧಿಯು ಆಗಿಲ್ಲ ಅನಿಸುತ್ತದೆ. ಸರಕಾರವು ಹಳ್ಳಿಗಳನ್ನು ನಿರ್ಲಕ್ಷಿಸುತ್ತಿದೆ. ಎಷ್ಟು ಹಳ್ಳಿಗಳಲ್ಲಿ ಶಿಕ್ಷಣಕ್ಕಾಗಿ ನಗರಗಳಿಗೆ ತೆರಳುವಾಗ ಸಾರಿಗೆ ವ್ಯವಸ್ಥೆ ಸರಿಯಾಗಿ ಇರುವುದಿಲ್ಲ . ಇದರಿಂದ ಶಿಕ್ಷಣ ದಿಂದ ವಂಚಿತರಾಗುವ ಅಂಶವು ಕಂಡುಬರುತ್ತದೆ. ಇವತ್ತು ಗದಗ ಜಿಲ್ಲೆ ಶಿರಹಟ್ಟಿ ತಾಲೂಕು ಸ್ವತಂತ್ರ ಯೋಧರ ನಾಡು ಕೋಗನೂರು ಗಡಿಭಾಗದ ಹಳ್ಳಿ ಇಲ್ಲಿ ಶಿರಹಟ್ಟಿ ಪದವಿ ವಿದ್ಯಾರ್ಥಿಗಳು ಕಾಲೇಜಿಗೆ ಹೋಗುವಂತಹ ಸಂದರ್ಭದಲ್ಲಿ ಸಾರಿಗೆ ವ್ಯವಸ್ಥೆ ಸರಿ ಇಲ್ಲದೆ ಕೋಗನೂರು ನಿಂದ ಎರಡು ಕಿಲೋಮೀಟರ್ ದೂರವಿರುವ ತಂಗೋಡ ಗ್ರಾಮಕ್ಕೆ ನಡೆದುಕೊಂಡು ಹೋಗುವ ಸಂದರ್ಭದ ಒಂದು ದೃಶ್ಯ.. ಈ ಸಂದರ್ಭದಲ್ಲಿ ಸಮಯದ ಏರುಪೇರಿನಿಂದ ಬಸ್ಸುಗಳು ತಪ್ಪುವ ಸಂದರ್ಭವೂ ಉಂಟು. ಇಷ್ಟು ಎಲ್ಲದರಲ್ಲಿ ಮುಂದುವರೆಯುತ್ತಿರುವಾಗ ಗಡಿಭಾಗದ ಹಳ್ಳಿಗಳ ಬಗ್ಗೆ ಸರಕಾರ ಗಮನ ಕೊಡಬೇಕು. ಅವಾಗ ಗಾಂಧೀಜಿಯವರ ಕನಸುಗಳು ನನಸಾಗಲು ಸಾಧ್ಯ.

**–ರಾಕೇಶ್**

ಕರುನಾಡ ಕಂದ
ಸಂಪುಟ–1 । ಸಂಚಿಕೆ–3
ದಿನಾಂಕ: 1–12–2021 । ಪುಟಗಳು: 16

# ಮರಳು ದಂಧೆ ಕೋರರ ವಿರುದ್ದ ಜೇವರ್ಗಿಯಲ್ಲಿ ಶ್ರೀ ರಾಮ ಸೇನಾವತಿಯಿಂದ ಧರಣಿ ಸತ್ಯಾಗ್ರಹ




ಜೇವರ್ಗಿ ತಾಲೂಕಿನ ಹಲ್ಲೂರು ಗ್ರಾಮದ ಭೀಮಾನದಿಯಲ್ಲಿ 2016 2017 ಸಾಲಿನಲ್ಲಿ ಮರು ಟೆಂಡರ್ ಆಗಿದ್ದು ಶಿವಪ್ಪ ತಂದೆ ಬಸಪ್ಪ ಮರಡಿ ರಾಣೆಬೆನ್ನೂರು ತಾಲೂಕ ಹಾವೇರಿ ಜಿಲ್ಲೆ ಇವರು ಎರಡು ವರ್ಷ ರಾಯಲ್ಟಿ ಕಟ್ಟದೆ ಮರಳು ಸಾಗಾಟ ಮಾಡುವುದು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಗೊತ್ತಾಗಿ ಆಗಿನ ಡಿ.ಡಿ ರೇಣುಕಾ ದೇವಿಯವರು 79 ಲಕ್ಷ ದಂಡ ಹಾಕಿದರು ಹಾಗೂ ಇವರ ಮೇಲೆ ಕೇಸ್ ಕೂಡಾ ಹಾಕಿದರು ನಂತರ 2021ರಲ್ಲಿ ಬೇರೆಯವರು ನಡೆಸುವುದಕ್ಕೆ ಅವರೇ ಸುರೇಶ್ ಕೋಟಗೊಂಡ್ ಎಂಬುವರು ಇವರು ಸೋಲಾಪುರದ ಮೂಲದವರು ಅಕ್ರಮ ಮರಳುಗಾರಿಕೆಗೆ ಹೆಸರುವಾಸಿ ಠಿಛಿ2 ಪಿಎಸ್ಐ ಅವರಿಗೆ ಹಣದಾಸೆ ತೋರಿಸಿ ಅಕ್ರಮ ಮರಳು ಸಾಗಾಟ ಮಾಡುತ್ತಾರೆ ಇದೇ ರೀತಿ ಹುಲ್ಲುರಿ ನಲ್ಲಿ ಅಕ್ರಮವಾಗಿ 37 –35 ಮೆಟಲ್ ಸಂಗ್ರಾಮ್ ಆಡುತ್ತ ನಂತರ ಅದನ್ನು ಅಕ್ರಮವಾಗಿ ತಾಲೂಕು ಮರಳು ಸಮಿತಿಯಿಂದ ಸರಕಾರಿ ಲೆಕ್ಕದಲ್ಲಿ 3000 500 ತೋರಿಸಿ ಮರಳು ಸಮಿತಿಯಿಂದ ಜಪ್ತಿ ಮಾಡಿಸಿ ತನ್ನದೇ ಗುತ್ತಿಗೆದಾರ ಹೆಸ–ರಿನ ಮೇಲೆ ವಿಜಯಪುರಕ್ಕೆ ಸಾಗಾಣಿಕೆ ಮಾಡುತ್ತಾನೆ






ಇಷ್ಟೆಲ್ಲಾ ನಡೆದರೂ ಕೂಡ ಇಲ್ಲಿನ ತಾಲೂಕಿನ ಪಿಎಸ್ಐ ನೆಲೋಗಿ ಪಿಎಸ್ಐ ತಾಸಿಲ್ದಾರ್ ಮತ್ತು ಮತ್ತು ಜೇವರ್ಗಿ ತಹಶೀಲ್ದಾರರು ಯಾವುದೇ ಕ್ರಮ ಕೈಗೊಳ್ಳದೇ ನಿರ್ಲಕ್ಷಿಸುತ್ತಿದ್ದಾರೆ ಧರಣಿ ಕೂತು 19 ದಿವಸವಾದರೂ ಇಲ್ಲಿಯವರೆಗೆ ಯಾವುದೇ ಅಧಿಕಾರಿ ಇದರ ವಿರುದ್ಧ ಕಾನೂನು ಕ್ರಮ ಕೈಗೊಳ್ಳದೇ ಇರುವುದು ಹಲವಾರು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ಇನ್ನಾದರೂ ಸಂಬಂಧಿಸಿದ ಇಲಾಖೆಯ ಅಧಿಕಾ–ರಿಗಳು ಈ ಬಗ್ಗೆ ಗಮನ ಹರಿಸುವರೇ?

# ವಿದ್ಯಾರ್ಥಿಗಳಿಗೆ ಸಂಸ್ಕಾರಯುತ ಶಿಕ್ಷಣ ಅವಶ್ಯ: ಸುನೀತಾ ಹಳೆಮನಿ



ಗಂಗಾವತಿ: ಪ್ರಸಕ್ತ ದಿನಮಾನಗಳಲ್ಲಿ ವಿದ್ಯಾರ್ಥಿಗಳಿಗೆ ತಂದೆ–ತಾಯಿ, ಗುರು–ಹಿರಿಯರ ಬಗ್ಗೆ ಗೌರವ ಭಾವನೆ ಕುಂಟಿತವಾಗುತ್ತಿದೆ. ಇದು ಅತ್ಯಂತ ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಸಂಗೀತ ಕಲಾವಿದೆ ಸುನೀತಾ ಹಳೆಮನೆ ಹೇಳಿದರು.

ಅವರು ಸೋಮವಾರದಂದು ನಗರದ ಶರಣಬಸವೇಶ್ವರ ಕ್ಯಾಂಪಿನ ಶ್ರೀಶೈಲ ಪಬ್ಲಿಕ್ ಶಾಲೆಯಲ್ಲಿ ಜರುಗಿದ ಮಕ್ಕಳ ದಿನಾಚರಣೆಯ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು. ದೇಶದ ಸರ್ವತೋಮುಖ ಅಭಿವೃದ್ಧಿ ಶಿಕ್ಷಣದ ಮೇಲೆ ಅವಲಂಬಿತವಾಗಿದ್ದು, ಪಠ್ಯದೊಂದಿಗೆ ದೇಶಭಕ್ತಿ ಮಾನವೀಯ ಮೌಲ್ಯ ಸಂಸ್ಕಾರಯುತ ಶಿಕ್ಷಣಕ್ಕೆ ಶಿಕ್ಷಕರು ಮುಂದಾಗಬೇಕು. ಕಲಿಕೆ ಎಂಬುದು ಅಕ್ಷರದ ಗೂಡಾಗಿತ್ತು. ಈ ನಿಟ್ಟಿನಲ್ಲಿ ದೇಶಭಕ್ತರ ಜೀವನ ಸಾಧನೆ ಹಾಗೂ ಗಡಿಯಲ್ಲಿ ರಕ್ಷಣೆ ಮಾಡುವ ನಮ್ಮ ಸೈನಿಕರ ಬಗ್ಗೆ ತಿಳಿಹೇಳುವ ಕಾರ್ಯ ಮಾಡಿದಾಗ ಮಾತ್ರ ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಸಾಧನೆಯ ಜೀವನ ನಡೆಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಶಾಲಾ ಮುಖ್ಯೋಪಾಧ್ಯಾಯರಾದ ರೇಖಾ ಜೇಕಿನ್ ಮಾತನಾಡಿ, 2010 ರಿಂದ ಪ್ರಾರಂಭಗೊಂಡ ಶ್ರೀಶೈಲ ಪಬ್ಲಿಕ್ ಶಾಲೆ ಶ್ರೀ ಹೇಮರೆಡ್ಡಿ ಮಲ್ಲಮ್ಮ ಸಂಸ್ಥೆಯ ನೇತೃತ್ವದಲ್ಲಿ ಜರುಗುತ್ತಿದ್ದು, ಪ್ರಸ್ತುತ ಸಾಲಿನಲ್ಲಿ ಆರನೇ ತರಗತಿವರೆಗೆ ಶಿಕ್ಷಣ ಕಲಿಸಲಾಗುತ್ತಿದೆ. ಜೊತೆಗೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಸತಿ ಸಹಿತ ಶಾಲೆ ಇದಾಗಿದ್ದು ಕನ್ನಡ ಹಾಗೂ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡಲಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಟ್ರಸ್ಟ್ ಅಧ್ಯಕ್ಷ ನಿರುಪಾದಿ ಜೇಕಿನ ಉಪಸ್ಥಿತರಿದ್ದರು. ಮಕ್ಕಳ ದಿನಾಚರಣೆ ಪ್ರಯುಕ್ತ ಕೇಕ್ ಕತ್ತರಿಸಿ ಸಂಭ್ರಮಿಸಲಾಯಿತು. ಜೊತೆಗೆ ವಿದ್ಯಾರ್ಥಿಗಳಿಂದ ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬವ್ವ, ರಜಿಯಾ ಸುಲ್ತಾನ, ನೆಹರು ಸೇರಿದಂತೆ ಮತ್ತಿತರ ವೇ?ಭೂ?ಣಗಳಿಂದ ವಿದ್ಯಾರ್ಥಿಗಳು ಕಂಗೊಳಿಸಿದರು. ಶಿಕ್ಷಕರುಗಳಾದ ಪ್ರೇಮ, ಸುಧಾ, ಕಮಲ, ನಿರ್ಮಲ ಮತ್ತಿತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಸಂಗೀತ ಕ್ಷೇತ್ರದ ಸಾಧನೆಗೈದ ಸುನೀತ ಹಳೆಮನಿ ಇವರನ್ನು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು.

# ನೀಮಾಹೋಸಳ್ಳಿ ಗ್ರಾಮದ ರಸ್ತೆ ದುರಸ್ಥಿಗಾಗಿ ಆಗ್ರಹಿಸಿದ ಗ್ರಾಮಸ್ಥರು

ಕಲಬುರಗಿ : ಚಿಂಚೋಳಿ ನಗರದಿಂದ ನೀಮಾಹೊಸಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯು ಸಂಪೂರ್ಣ ಹದಗೆಟ್ಟಿದೆ. ಇದನ್ನು ಕೂಡಲೇ ದುರಸ್ಥಿಮಾಡಿ ಸಾರ್ವಜನಿಕ–ರಿಗೆ ಅನುಕೂಲ ಮಾಡಿಕೊಡಬೇಕೆಂದು ಗ್ರಾಮದ ಯುವ ಮುಖಂಡರುಗಳಾದ ಸಮೀರ ಪಟೇಲ್, ಸಂಜುಕುಮಾರ ಸುಗಂದಿ, ವಿನೋದ ವಾಲಿಕಾರ, ಆನಂದಿ ಸುಧಾಕಾರ ಅವರು ಆಗ್ರಹಿಸಿದ್ದಾರೆ.



ಗ್ರಾಮದ ಸಾರ್ವಜನಿಕರ ಹಿತಕ್ಕಾಗಿ ಕಳೆದ ಒಂದು ವರ್ಷದ ಹಿಂದೆ ಡಾಂಬರಿಕರಣ್ಣ ಮಾಡಿದ ರಸ್ತೆ ಕಳಪೆ ಕಾಮಗಾರಿಯಿಂದ ಸಂಪೂರ್ಣ ಕಿತ್ತುಹೊಗಿ ತಗ್ಗು ಗುಂಡಿಗಳು ನಿರ್ಮಾಣವಾಗಿದೆ. ಇದರಿಂದ ವೃದ್ಧರು, ಗರ್ಭಿಣಿಯರು ವಿಧ್ಯಾರ್ಥಿಗಳು ದಿನ ನಿತ್ಯವಾಗಿ ರಸ್ತೆಯ ಮುಖಾಂತರ ಹಾದು ಹೋಗುವುದರಿಂದ ಗ್ರಾಮದ ಎಲ್ಲಾ ಜನರಿಗೆ ಕಷ್ಟ ಅನುಭವಿಸುವ ಸ್ಥಿತಿ ನಿರ್ಮಾಣವಾಗಿದೆ.

ಗ್ರಾಮಸ್ಥರು ರೊಚ್ಚಿಗೇಳುವ ಮೊದಲು ಸಂಭಂದಿಸಿದ ಇಲಾಖೆ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಕೊನೆಗಾಣಿಸಬೇಕೆಂದು ಎಲ್ಲಾ ಗ್ರಾಮದ ಜನರು ತಿಳಿಸಿದ್ದಾರೆ

–ಹರೀಶ್







ಕರುನಾಡ ಕಂದ
ಸಂಪುಟ-1 । ಸಂಚಿಕೆ-3
ದಿನಾಂಕ: 1-12-2021 । ಪುಟಗಳು: 16

# ತುಂಗಭದ್ರಾ ಕಾಲುವೆಯ ಹಾಗೂ ಸರ್ಕಾರಿ ಇನಾಂ ಭೂಮಿಯನ್ನು ಅಕ್ರಮವಾಗಿ ಪಹಣಿ ಮಾಡಿಕೊಟ್ಟಿರುವುದು ಖಂಡನೀಯ



ಗಂಗಾವತಿ: ಕನಕಗಿರಿ ತಾಲೂಕಿನ ನವಲಿ ಹೋಬಳಿಯಲ್ಲಿ ದಿನೇ ದಿನೇ ಸಾಕಷ್ಟು ಅಕ್ರಮಗಳು ಬಯಲಿಗೆ ಬರುತ್ತಿವೆ. ಚಿಕ್ಕಡಂಕನಕಲ್ ಗ್ರಾಮದ ಸ.ನಂ: 77/*/* ಮತ್ತು 78/1/* ಜಮೀನುಗಳಲ್ಲಿ ತುಂಗಭದ್ರಾ ಕಾಲುವೆ ಹಾದುಹೋಗಿರುತ್ತದೆ. ಆದರೆ ಕನಕಗಿರಿಯ ತಹಶೀಲ್ದಾರರು, ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಿಗರು ಮತ್ತು ಭೂಮಿಕೇಂದ್ರದ ಸಿಬ್ಬಂದಿಗಳು ಸೇರಿಕೊಂಡು ಅರ್ಜಿದಾರರಾದ ಶ್ರೀಮತಿ ಲಕ್ಷ್ಮೀದೇವಿ ಗಂ. ಶಂಕರಗೌಡ, ಸಾ॥ ಹಿರೇಡಂಕನಕಲ್ ಇವರ ಹೆಸರಿನಲ್ಲಿದ್ದ ಸ.ನಂ: 77/*/* ವಿ: 2-30 ಎ-ಗುಂ ಭೂಮಿಯನ್ನು ಪಹಣಿ ತಿದ್ದುಪಡಿ ಮಾಡಿ ವಿಸ್ತೀರ್ಣ 5-16 ಎ-ಗುಂ ಜಮೀನು ಎಂದು ಮಾಡಿರುತ್ತಾರೆ. ಹಾಗೂ ಸ.ನಂ: 78/1/* ವಿ: 1-34 ಎ-ಗುಂ ಜಮೀನನ್ನು ಪಹಣಿ ತಿದ್ದುಪಡಿ ಮಾಡಿ ವಿ: 5-16 ಎ-ಗುಂ ಜಮೀನು ಎಂದು ಮಾಡಿರುತ್ತಾರೆ. ಅಸಲಿಗೆ ಸದ್ರಿ 77/*/* ಮತ್ತು 78/1/* ಸದ್ರಿ ಜಮೀನುಗಳಲ್ಲಿ ತುಂಗಭದ್ರಾ ಮುಖ್ಯ ಕಾಲುವೆ ಹಾದುಹೋಗಿದ್ದು, ಭೂಸ್ವಾಧೀನವಾಗಿರುತ್ತದೆ. ಇದು ಸರ್ಕಾರಿ ಇನಾಂ ಭೂಮಿಯಾಗಿರುತ್ತದೆ. ಭೂಸ್ವಾಧೀನವಾದ ಸರಕಾರಿ ಸರ್ವೇ ನಂಬರುಗಳ ಪಹಣಿ ತಿದ್ದುಪಡಿ ಅಧಿಕಾರ ಮಾನ್ಯ ಸಹಾಯಕ ಆಯುಕ್ತರುರವ-ರಿಗೆ ಮಾತ್ರ ಇರುತ್ತದೆ. ಆದರೆ ಈ ಎಲ್ಲಾ ವಿಷಯವು ಕಂದಾಯ ಅಧಿಕಾರಿಗಳು ಮತ್ತು ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಗೊತ್ತಿದ್ದರೂ ಹಣದ ಆಮಿಷಕ್ಕೆ ಒಳಗಾಗಿ ಕಾಯ್ದೆ, ಕಾನೂನುಗಳನ್ನು ಉಲ್ಲಂಘನೆ ಮಾಡಿ ಅಧಿಕಾರ ದುರುಪಯೋಗ ಮಾಡಿಕೊಂಡು ಸರ್ಕಾರಿ ಇನಾಂ ಭೂಮಿಯಾಗಿದ್ದು, ಚಿಕ್ಕಡಂಕನಕಲ್ ಗ್ರಾಮದ ಶ್ರೀ ಮಾರುತಿ ದೇವಸ್ಥಾನ ಎಂದು ಇರುತ್ತದೆ. ಈ ಭೂಮಿಯನ್ನು ಅನಧಿಕೃತವಾಗಿ ಖಾತಾ ವರ್ಗಾವಣೆ ಮಾಡಿರುತ್ತಾರೆ ಎಂದು ಬಹುಜನ ಸಮಾಜ ಪಾರ್ಟಿಯ ಗಂಗಾವತಿ ತಾಲೂಕ ಅಧ್ಯಕ್ಷರಾದ ಶಂಕರ ಸಿದ್ದಾಪುರ ಪ್ರಕಟಣೆಯಲ್ಲಿ ಖಂಡಿಸಿದರು.

ಅವರು ಅಕ್ರಮವಾಗಿ ನಕಲಿ ದಾಖಲೆ ಸೃಷ್ಟಿಸಿ, ಅನಧಿಕೃತವಾಗಿ ತುಂಗಭದ್ರಾ ಕಾಲುವೆ ಹಾಗೂ ಸರ್ಕಾರಿ ಇನಾಂ ಭೂಮಿಯನ್ನು ವರ್ಗಾವಣೆ ಮಾಡಿದ್ದರ ಕುರಿತು ನಂ 02 ಉಪಕಾಲುವೆಯ ಕಾರ್ಯಾಲಯದ ಕಾರ್ಯನಿರ್ವಾಹಕ ಅಭಿಯಂತರರಿಗೆ ದೂರು ಪತ್ರ ನೀಡುವ ಸಂದರ್ಭದಲ್ಲಿ ಮಾತನಾಡುತ್ತಿದ್ದರು.

ಮುಂದುವರೆದು ಅವರು ಮಾತನಾಡುತ್ತಾ, ಕನಕಗಿರಿಯ ಕಂದಾಯ ಅಧಿಕಾರಿಗಳು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ 2020-21ನೇ ಸಾಲಿನ ಎಂ.ಆರ್.ಸಂ: 12/ಪಹಣಿ ಬದಲಾವಣೆ/ ಆರ್.ಆರ್.ಟಿ/186/2019-20 ದಿನಾಂಕ: 16.11.2019 ರಂದು ಅರ್ಜಿದಾರರಿಗೆ ಅಂ-ದಾಜು ವಿ: 8-00 ಎ-ಗುಂ ಭೂಮಿಯನ್ನು ಹೆಚ್ಚಿಗೆ ಮಾಡಿಕೊಟ್ಟಿರುತ್ತಾರೆ. ತದನಂತರ ಪಹಣಿ ಕಾಲಂ ನಂ. 11 ರಲ್ಲಿ ಇರುವ ಟಿ.ಬಿ.ಪಿ ಕಾಲುವೆಗೆ ಭೂ ಸ್ವಾಧೀನ ಎಂಬುದನ್ನು ತೆಗೆದುಹಾಕಿರುತ್ತಾರೆ ಹಾಗೂ ಹೆಚ್.ಡಿ.ಎಫ್.ಸಿ ಬ್ಯಾಂಕ್ ಗಂಗಾವತಿಯಲ್ಲಿ ರೂ. 11,50,000/- ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಬ್ಯಾಂಕ್ ಸಾಲವನ್ನು ಪಡೆದು ಸರ್ಕಾರಿ ಬೊಕ್ಕಸಕ್ಕೆ ಭಾರಿ ಪ್ರಮಾಣದಲ್ಲಿ ವಂಚನೆ ಮಾಡಿರುತ್ತಾರೆ. ಮಾನ್ಯ ಘನ ನ್ಯಾಯಾಲಯವು ತುಂಗಭದ್ರಾ ಭೂ ಸ್ವಾಧೀನವಾದ ಭೂಮಿಗಳನ್ನು ಸ್ಥಳ ಪರಿಶೀಲನೆ ಮಾಡಿ ಪಹಣಿ ಪತ್ರಿಕೆಗಳಲ್ಲಿ ತುಂಗಭದ್ರಾ ಕಾಲುವೆ ಎಂದು ಹೊಸ ಪಹಣಿ ಪತ್ರಿಕೆಗಳನ್ನು ಸೃಷ್ಟಿ ಮಾಡಲು ಆದೇಶ ಮಾಡಿದ್ದು, ಈ ಆದೇಶವು ಗೊತ್ತಿದ್ದರೂ ನೀರಾವರಿ ಇಲಾಖೆಯ ಅಧಿಕಾರಿಗಳು ಜಾಣಕುರುಡರಂತೆ ಕಾಲುವೆ ಭೂಮಿಯು ತಿದ್ದುಪಡಿಯಾದರೂ ತಮಗೆ ಸಂಬಂಧವೇ ಇಲ್ಲ ಎಂಬಂತೆ ವರ್ತಿಸಿ, ಸದ್ರಿ ಹಗರಣಗಳಿಗೆ ಕಾರಣೀಭೂತರಾಗಿದ್ದಾರೆ. ಇದೇ ರೀತಿಯಾಗಿ ತುಂಗಭದ್ರಾ ಡ್ಯಾಮ್‌ನಿಂದ ಪ್ರಾರಂಭವಾಗಿ, ರಾಯಚೂರು ಜಿಲ್ಲೆಯ ಕೊನೆಯವರೆಗೂ ಇಂತಹ ಪ್ರಕರಣಗಳು ಅನೇಕ ನಡೆದಿರುತ್ತವೆ. ಕಾರಣ ನಂ: 02 ಉಪಕಾಲುವೆ ಕಾರ್ಯಾಲಯದ ಕಾರ್ಯನಿರ್ವಾಹಕ ಅಭಿಯಂತರರುಸದರಿ ಪ್ರಕರಣದ ಬಗ್ಗೆ ಸೂಕ್ತವಾದ ತನಿಖೆ ನಡೆಸಿ, ತಪ್ಪಿತಸ್ಥ ನೀರಾವರಿ ಇಲಾಖೆಯ ಸಿಬ್ಬಂದಿಗಳನ್ನು ಮತ್ತು ಕಂದಾಯ ಅಧಿಕಾರಿಗಳನ್ನು ಕೂಡಲೇ ಅಮಾನತ್ತುಗೊಳಿಸಿ, ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ತುಂಗಭದ್ರಾ ಉಪಕಾಲುವೆಯ ಜಮೀನನ್ನು ಭೂಗಳ್ಳರಿಂದ ರಕ್ಷಿಸಿ, ಸರ್ಕಾರದ ಆಸ್ತಿಯನ್ನು ಕಾಪಾಡುವಂತೆ ಎಲ್ಲಾ ರೈತರ ಪರವಾಗಿ ನಮ್ಮ ಬಹುಜನ ಸಮಜ ಪಾರ್ಟಿ ಒತ್ತಾಯಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಹುಜನ ಸಮಾಜ ಪಾರ್ಟಿಯ ಕನಕಗಿರಿ ಅಧ್ಯಕ್ಷರಾದ ಆದೆಪ್ಪ ಸಿಂಗನಾಳ, ದಲಿತ ಮುಖಂಡರಾದ ಗಂಗಾಧರ ಈಚನಾಳ, ಉಮೇಶ ಕಾಟಾಪುರ, ಯಮನೂರ ಈಳಿಗನೂರು, ಮಹಾದೇವ ಕಾಟಾಪುರ, ಪಂಪಾಪತಿ, ರವಿ, ದೇವರಾಜ, ಹೊನ್ನೂರ, ಹನುಮೇಶ ಮತ್ತಿತರರು ಉಪಸ್ಥಿತರಿದ್ದರು.

# ಕೇಜ್ರಿವಾಲ್ ಮಾದರಿ 50,000 ರೂ. ಪರಿಹಾರಕ್ಕೆ ಎಎಪಿ ಆಗ್ರಹ




ಗಂಗಾವತಿ: ರಾಜ್ಯ ಸರ್ಕಾರವು ಬೆಳೆ ಹಾನಿಗೆ ಬಿಡಿಗಾಸು ಪರಿಹಾರ ನೀಡಿ ಮೊಸಳೆ ಕಣ್ಣೀರು ಸುರಿಸುವ ಬದಲು ದೆಹಲಿಯ ಅರವಿಂದ್ ಕೇಜ್ರಿವಾಲ್ ಸರ್ಕಾರದ ಮಾದರಿಯಲ್ಲಿ ಹೆಕ್ಟೇರ್‌ಗೆ 50,000 ರೂಪಾಯಿ ಪರಿಹಾರ ನೀಡಬೇಕು ಎಂದು ಆಮ್ ಆದ್ಮಿ ಪಾರ್ಟಿ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷರಾದ ಹುಸೇನ್‌ಸಾಬ್ ಗಂಗನಾಳ ರವರು "ಅತಿವೃಷ್ಟಿಯಿಂದಾಗಿ ರಾಜ್ಯಾದ್ಯಂತ 10 ಲಕ್ಷ ಹೆಕ್ಟೇರ್ ಜಮೀನಿನಲ್ಲಿ ಬೆಳೆ ಹಾನಿಯಾಗಿದ್ದು, ರೈತರು ಅಕ್ಷರಶಃ ಕಂಗಾಲಾಗಿದ್ದಾರೆ. ರಾಜ್ಯ ಸರ್ಕಾರವು ಹೆಕ್ಟೇರ್ ನೀರಾವರಿ ಜಮೀನಿಗೆ 13,500 ರೂಪಾಯಿ, ಖುಷ್ಕಿ ಜಮೀನಿಗೆ 6,800 ರೂಪಾಯಿ ಹಾಗೂ ವಾಣಿಜ್ಯ ಬೆಳೆಗಳಿಗೆ 18,000 ಪರಿಹಾರ ನಿಗದಿಪಡಿಸಿರುವುದು ಅನ್ನದಾತರಿಗೆ ಮಾಡುವ ಅವಮಾನ. ಆರು ವರ್ಷದ ಹಿಂದೆ ಇದ್ದ ಪರಿಹಾರವನ್ನೇ ಈಗಲೂ ನೀಡುತ್ತಿರುವುದು ಖಂಡನೀಯ. ಈ ಮೊತ್ತವು ರೈತರು ಕೆಲಸಗಾರರಿಗೆ ನೀಡಿರುವ ಕೂಲಿಯನ್ನು ಕೂಡ ಭರಿಸುವುದಿಲ್ಲ. ಬೊಮ್ಮಾಯಿ ಸರ್ಕಾರಕ್ಕೆ ರೈತರ ಮೇಲೆ ನಿಜಕ್ಕೂ ಕಾಳಜಿಯಿದ್ದರೆ, ದೆಹಲಿಯ ಕೇಜ್ರಿವಾಲ್ ಸರ್ಕಾರದಂತೆ ಹೆಕ್ಟೇರ್‌ಗೆ 50,000 ರೂಪಾಯಿ ಪರಿಹಾರ ನೀಡಲಿ" ಎಂದು ಆಗ್ರಹಿಸಿದರು.

ಬೆಳೆಹಾನಿಯಿಂದ ಕಂಗೆಟ್ಟು ಇಬ್ಬರು ರೈತರು ಈಗಾಗಲೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸರ್ಕಾರವು ಇದೇ ರೀತಿ ನಿರ್ಲಕ್ಷ್ಯ ಮುಂದುವರಿಸಿದರೆ ಇನ್ನಷ್ಟು ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಅಪಾಯವಿದೆ. ಸರ್ಕಾರ ಕೊಡುವ ಅಲ್ಪ ಮೊತ್ತದ ಪರಿಹಾರಕ್ಕಾಗಿ ರೈತರು ಅನೇಕ ದಾಖಲೆಗಳನ್ನು ಒದಗಿಸಬೇಕಾಗಿದೆ. ಇದಕ್ಕಾಗಿ ಸರ್ಕಾರಿ ಕಚೇರಿಗಳಿಗೆ ರೈತರನ್ನು ಅನಾವಶ್ಯಕವಾಗಿ ಅಲೆದಾಡಿಸಲಾಗುತ್ತಿದೆ. ದಾಖಲೆಯಲ್ಲಿ ಸಣ್ಣ ಲೋಪವಿದ್ದರೂ ಪರಿಹಾರವನ್ನು ನಿರಾಕರಿಸಲಾಗುತ್ತಿದೆ. ಬೆಳೆ ಕೊಯ್ಲಿನ ಬಳಿಕ ಉಂಟಾದ ನಷ್ಟವನ್ನು ಕೂಡ ಪರಿಗಣಿಸಬೇಕು. ಆದರೆ ಅಧಿಕಾರಿಗಳು ಗಿಡ ಅಥವಾ ಮರದಲ್ಲಿದ್ದಾಗ ಹಾನಿಗೊಂಡ ಬೆಳೆಯ ನಷ್ಟವನ್ನಷ್ಟೇ ಲೆಕ್ಕ ಹಾಕುತ್ತಿದ್ದಾರೆ ಎಂದು ಹುಸೇನ್ ಸಾಬ್ ಗಂಗನಾಳ ರವರು ಹೇಳಿದರು.

ರೈತರಿಗೆ ಸೂಕ್ತ ಪರಿಹಾರ ತಲುಪುವವರೆಗೂ ಬ್ಯಾಂಕ್‌ಗಳು ಸಾಲ ವಸೂಲಿಗೆ ಸಂಬಂಧಿಸಿ ಒತ್ತಡ ಹೇರಬಾರದು. ಈ ಕುರಿತು ಸರ್ಕಾರವು ಎಲ್ಲ ಬ್ಯಾಂಕ್‌ಗಳಿಗೆ ಸ್ಪಷ್ಟ ಆದೇಶ ಹೊರಡಿಸಬೇಕು. ಇಲ್ಲದಿದ್ದರೆ, ಸಾಲಕ್ಕೆ ಹೆದರಿ ರೈತರ ಆತ್ಮಹತ್ಯೆ ಹೆಚ್ಚಾಗುವ ಸಾಧ್ಯತೆಯಿದೆ. ಶೀಘ್ರವೇ ಪರಿಹಾರ ಸಿಗುವಂತೆ ಮಾಡುವ ಮೂಲಕ ರೈತರ ವಿಶ್ವಾಸ ಹೆಚ್ಚಿಸುವ ಕೆಲಸವನ್ನು ಸರ್ಕಾರ ಮಾಡಬೇಕಿದೆ ಎಂದು ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷರು ಆಗ್ರಹಿಸಿದರು.

# ಅಕಾಲಿಕ ಮಳೆಯಿಂದ ನಷ್ಟಕ್ಕೊಳಗಾದ ರೈತರಿಗೆ ಕೂಡಲೇ ಪರಿಹಾರ ವಿತರಣೆ ಮಾಡುವ ಕುರಿತು ಹಾಗೂ ಗುತ್ತಿಗೆ ರೈತರಿಗೆ ನೇರವಾಗಿ ಅವರ ಬ್ಯಾಂಕ್ ಖಾತೆಗೆ ಪರಿಹಾರ ಹಾಕುವ ಕುರಿತು ಒತ್ತಾಯ




ಗಂಗಾವತಿ: ರಾಜ್ಯಾದ್ಯಂತ ಕಳೆದ ಹಲವು ದಿನಗಳಿಂದ ಸುರಿಯುತ್ತಿರುವ ಮಳೆಗೆ ಲಕ್ಷಾಂತರ ಹೆಕ್ಟೇರ್ ಜಮೀನಿಗೆ ನೀರು ನುಗ್ಗಿದೆ. ಭತ್ತ, ಹತ್ತಿ, ರಾಗಿ, ಜೋಳ, ಸಜ್ಜೆ, ಶೇಂಗಾ, ತೊಗರಿ, ಕಬ್ಬು, ಮೆಕ್ಕೆಜೋಳ, ಮೆಣಸಿನಕಾಯಿ, ಈರುಳ್ಳಿ, ಟೊಮ್ಯಾಟೊ ಸೇರಿದಂತೆ ತರಕಾರಿ ಬೆಳೆಗಳು ನೀರಿನಲ್ಲಿ ಕೊಳೆಯುತ್ತಿವೆ. ಸಾವಿರಾರು ಸಂಖ್ಯೆಯಲ್ಲಿ ಮನೆಗಳು ಕುಸಿದುಬಿದ್ದು, ಸಾವಿರಾರು ಜನರು ಬೀದಿಪಾಲಾಗಿದ್ದಾರೆ ಎಂದು ಆರ್ಯಾಲ ಹಾಗೂ ಎಐಕೆಎಂ ಕಾರ್ಯದರ್ಶಿಯಾದ ಸಣ್ಣ ಹನುಮಂತಪ್ಪ ಹುಲಿಹೈದರ ಅವರು ತಿಳಿಸಿದರು.


ಅವರು ಇಂದು ನಷ್ಟಕ್ಕೊಳಗಾದ ರೈತರಿಗೆ ಶೀಘ್ರ ಪರಿಹಾರ ನೀಡಲು ಒತ್ತಾಯಿಸಿ ತಹಶೀಲ್ದಾರರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಕಾರ್ಮಿಕ ಹಿರಿಯ ಮುಖಂಡ ಭಾರದ್ವಾಜ್ ಮಾತನಾಡಿ, ನೆರೆ ಪರಿಹಾರ ಒದಗಿಸುವ ಸಂದರ್ಭದಲ್ಲಿ ಸರ್ಕಾರವು ಗುತ್ತಿಗೆ ರೈತರನ್ನು ಗುರುತಿಸಿ, ಅವರ ಖಾತೆಗಳಿಗೆ ಪರಿಹಾರ ನೀಡಬೇಕು. ಆ ನಿಟ್ಟಿನಲ್ಲಿ ಭೂಮಾಲೀಕರಿಂದ ಗುತ್ತಿಗೆ ರೈತರಿಗೆ ಆಗುವ ತೊಂದರೆಯನ್ನು ತಪ್ಪಿಸಬೇಕು ಎಂದು ಸರ್ಕಾರಕ್ಕೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಪರಶುರಾಮ, ರಮೇಶ ಕೆ., ಆನಂದ, ಗಿಡ್ಡಪ್ಪ, ಅಂಬಣ್ಣ, ಬುದ್ದೆಪ್ಪ, ಶರಭಣ್ಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕರುನಾಡ ಕಂದ
ಸಂಪುಟ–1 । ಸಂಚಿಕೆ–3
ದಿನಾಂಕ: 1–12–2021 । ಪುಟಗಳು: 16

# ಆಫ್ರಿಕಾದ ಪುಟ್ಟ ರಾಷ್ಟ್ರ ಕೀನ್ಯಾದ ಬಗ್ಗೆ ಸಂಕ್ಷಿಪ್ತ ವರದಿ



ಕೋವಿಡ್ ವಿರುದ್ಧದ ಹೋರಾಟದಲ್ಲಿ ಭಾರತದ ಜೊತೆ ನಿಲ್ಲುತ್ತೇವೆ ಅಂತ ಹೇಳಿ ಸ್ವಯಂಪ್ರೇರಿತವಾಗಿ ನಮ್ಮ ದೇಶಕ್ಕೆ ಕೆಲವು ಆಹಾರ ಸಾಮಗ್ರಿಗಳು ಮತ್ತು ಟೀ ಪುಡಿ ನೀಡಿದ ಆಫ್ರಿಕಾದ ಪುಟ್ಟ ರಾಷ್ಟ್ರ ಕೀನ್ಯಾ ನಿಮ್ಮೆಲ್ಲಾ ಗೊತ್ತಿರಬೇಕು. ಈ ದೇಶಕ್ಕೂ ನಮಗೂ ಸ್ವಾತಂತ್ರ ಸಿಗುವ ಕ್ಕಿಂತ ಮುಂಚೆ ಆ ದೇಶದೊಂದಿಗೆ ಉತ್ತಮ ಸಂಬಂಧ ಇದೆ.ಈ ಬಗ್ಗೆ ಸಂಕ್ಷಿಪ್ತವಾಗಿ ತಿಳಿದುಕೊಂಡು ಬರೋಣ.

ಹಿಂದು ಮಹಾಸಾಗರದ ಕರಾವಳಿ ರಾಜ್ಯಗಳಂತೆ ಭಾರತ ಮತ್ತು ಕೀನ್ಯಾ ನಡುವಿನ ವ್ಯಾಪಾರ ಸಂಪರ್ಕಗಳು ಮತ್ತು ವಾಣಿಜ್ಯ ಸಂಬಂಧಗಳು ಶತಮಾನಗಳ ಹಿಂದಕ್ಕೆ ಹೋಗುತ್ತದೆ.ಕೀನ್ಯಾದಲ್ಲಿ ಹೆಚ್ಚಿನ ಸಂಖ್ಯೆಯ ಭಾರತೀಯ ಮೂಲದ ವ್ಯಕ್ತಿಗಳು ಇದ್ದಾರೆ. ಇವರು ಉಗಾಂಡ ರೈಲು ನಿರ್ಮಿಸಲು ಬ್ರಿಟಿಷರು ಭಾರತದಿಂದ ಕರೆತಂದ ವಂಶಸ್ಥರು.ಭಾರತದ ಸ್ವಾತಂತ್ರ್ಯದ ಮೊದಲು ಆಫ್ರಿಕಾದ ಭಾರತೀಯರ ಕಲ್ಯಾಣದತ್ತ ಇಲ್ಲಿನ ಸ್ವಾತಂತ್ರ್ಯ ಹೋರಾಟಗಾರರ ಗಮನ ಸೆಳೆಯಿತು.1924ರಲ್ಲಿ ಪೂರ್ವ ಆಫ್ರಿಕಾದ ಭಾರತೀಯ ಕಾಂಗ್ರೆಸ್ ಡೊಂಬಾಸಾ ಅಧಿವೇಶನದಲ್ಲಿ ಸರೋಜಿನಿ ನಾಯ್ಡು ಅವರು ಅಧ್ಯಕ್ಷತೆ ವಹಿಸಿದ್ದರು.1934ರಲ್ಲಿ ಕೆಪಿಎಸ್ ಮೇನನ್ ಸತ್ಯಶೋಧನಾ ಕಾರ್ಯಾಚರಣೆಯ ಅಧ್ಯಕ್ಷತೆ ವಹಿಸಿದ್ದರು.ಭಾರತದ ಸ್ವಾತಂತ್ರ್ಯ ನಂತರ1948ರಲ್ಲಿ ನೈರೋಬಿ ಯಲ್ಲಿ ಬ್ರಿಟಿಷ್ ಪೂರ್ವ ಆಫ್ರಿಕಾದ ಆಯುಕ್ತರ ಕಛೇರಿಯನ್ನು ಸ್ಥಾಪಿಸುತ್ತಾರೆ.ಕೀನ್ಯಾ ಮೂಲನಿವಾಸಿಗಳು ಮತ್ತು ಅಲ್ಲಿರುವ ಭಾರತೀಯ ಮೂಲದವ ರೊಂದಿಗೆ ಭಿನ್ನಾಭಿಪ್ರಾಯ ಉಂಟಾದಾಗ ಅದನ್ನು ನಿವಾರಿಸುವ ಪ್ರಯತ್ನವಾಗಿ ಹಿರಿಯ ರಾಜತಾಂತ್ರಿಕ ಅಪಾ ಪಂತ್ ಅವರನ್ನು ಹೈಕಮೀಷನರ್ ಆಗಿ ನೆಹರು ಅವರು ನೇಮಕ ಮಾಡುತ್ತಾರೆ.ನೆಹರು ಅವರು ಅಲ್ಲಿನ ಜೋಮೋ ಕೆನ್ಯಾಟ್ಟಾ ಮತ್ತು ಕೀನ್ಯಾ ಆಫ್ರಿಕನ್ ನ್ಯಾಷನಲ್ ಯೂನಿಯನ್ ಪಕ್ಷಕ್ಕೆ ಬೆಂಬಲ ಕೊಡುತ್ತಾರೆ.ಕೀನ್ಯಾದಲ್ಲಿರುವ ಭಾರತೀಯ ಮೂಲದವರಿಗೆ ಅಲ್ಲಿನ ಸ್ಥಳೀಯ ನಿವಾಸಿಗಳೊಂದಿಗೆ ಗುರುತಿಸಿಕೊಳ್ಳುವ ಕತೆ ಕೇಳಿಕೊಳ್ಳುತ್ತಾರೆ.1963ರಲ್ಲಿ ಕೀನ್ಯಾಕ್ಕೆ ಬ್ರಿಟಿಷರಿಂದ ಸ್ವಾತಂತ್ರ್ಯ ಸಿಕ್ಕಿದ ನಂತರ ನೈರೋಬಿ ಯಲ್ಲಿ ಭಾರತೀಯ ಹೈಕಮಿಷನರ್ ಕಛೇರಿ ಸ್ಥಾಪನೆಯಾಗುತ್ತದೆ.ಕೀನ್ಯಾ ಮತ್ತು ಭಾರತವು ವಿಶ್ವಸಂಸ್ಥೆ, ಅಲಿಪ್ತ ನೀತಿ,ಕಾಮನ್ ವೆಲ್ತ್ ರಾಷ್ಟ್ರಗಳು ಜಿ–77,ಜಿ–15 ಮತ್ತು ಪ್ರಾದೇಶಿಕ ಸಹಕಾರಕ್ಕಾಗಿ ಹಿಂದುಮಹಾಸಾಗರ ರಿಮ್ ಅಸೋಸಿಯೇಷನ್ ನಂತಹ ಅಂತರ್ ರಾಷ್ಟ್ರೀಯ ವೇದಿಕೆಗಳ ಸದಸ್ಯರಾಗಿದ್ದು ಈ ವೇದಿಕೆಗಳಲ್ಲಿ ಪರಸ್ಪರ ಸಹಕರಿಸುತ್ತದೆ.

ಇನ್ನು ಆರ್ಥಿಕ ಸಂಬಂಧಗಳ ಬಗ್ಗೆ ಹೇಳುವುದಾದರೆ ಎರಡೂ ದೇಶಗಳು ವ್ಯಾಪಾರ ಮತ್ತು ವಾಣಿಜ್ಯ ಸಂಬಂಧಗಳನ್ನು ಹೆಚ್ಚುಸುತ್ತಿದೆ.2010–2011ರಲ್ಲಿ ದ್ವಿಪಕ್ಷೀಯ ವ್ಯಾಪಾರವು 42.4ಬಿಲಿಯನ್.ಭಾರತವು ಕೀನ್ಯಾದ 6ನೇ ಅತಿದೊಡ್ಡ ವ್ಯಾಪಾರ ಪಾಲುದಾರ ಮತ್ತು ಅತಿದೊಡ್ಡ ರಫ್ತುದಾರ . ಕೀನ್ಯಾಕ್ಕೆ ಭಾರತದ ರಫ್ತುಗಳಲ್ಲಿ ಔಷಧಿಯ ವಸ್ತುಗಳು, ಉಕ್ಕು,ಯಂತ್ರೋಪಕರಣಗಳು ಮತ್ತು ವಾಹನಗಳು ಸೇರಿವೆ. ಭಾರತವು ಆಮದು ಮಾಡಿಕೊಳ್ಳುವ ವಸ್ತುಗಳೆಂದರೆ ಸೋಡಾ ಬೂದಿ,ತರಕಾರಿಗಳು ಮತ್ತು ಚಹದಂತಹ ಪ್ರಾಥಮಿಕ ಸರಕುಗಳಾಗಿವೆ. ಟಾಟಾಗ್ರೂಪ್, ಎಸ್ಸಾರ್, ರಿಲಯನ್ಸ್ ಇಂಡಸ್ಟ್ರೀಸ್ ನಂತಹ ಭಾರತೀಯ ಕಂಪೆನಿಗಳು ಕೀನ್ಯಾದಲ್ಲಿ ಗಮನಾರ್ಹ ಉಪಸ್ಥಿತಿಯನ್ನುಹೊಂದಿದೆ.ಮತ್ತುಭಾರತಿ ಏರಟೆಲ್ ಅಲ್ಲಿ ಕಾರ್ಯನಿರ್ವಹಿಸುತ್ತಿದೆ.ಭಾರತೀಯ ಸಾರ್ವಜನಿಕ ವಲಯದ ಬ್ಯಾಂಕುಗಳಾದ ಬ್ಯಾಂಕ್ ಆಫ್ ಬರೋಡ & ಬ್ಯಾಂಕ್ ಆಫ್ ಇಂಡಿಯಾ ಕೀನ್ಯಾದಲ್ಲಿ ಕಾರ್ಯಾಚರಣೆ ನಡೆಸುತ್ತಿದೆ. ಕೀನ್ಯಾ ತನ್ನನ್ನು ಭಾರತದಲ್ಲಿ ಪ್ರವಾಸಿ ತಾಣವಾಗಿ ಪ್ರಚಾರ ಮಾಡಲು ಭಾರಿ ಪ್ರಯತ್ನ ಮಾಡುತ್ತಿದೆ.ಆದಾಗ್ಯೂ ಉಭಯ ದೇಶಗಳ ನಡುವೆ ವಾಯುಸಂಪರ್ಕ ಸೀಮಿತವಾಗಿದೆ ಅಂತ ಹೇಳಬಹುದು.ಕೀನ್ಯಾ ಏರ್ವೇಸ್ ಮುಂಬೈ ಮತ್ತು ದೆಹಲಿ ನಡುವೆ ನೈರೋಬಿ ಗೆ ಸೇವೆ ಒದಗಿಸಿದೆ.ನಮ್ಮ ದೇಶದ ಏರ್ ಇಂಡಿಯಾ ನೈರೋಬಿಗೆ ತನ್ನ ಸೇವೆಯನ್ನು 1951ರಲ್ಲಿ ಆರಂಭಿಸಿದ್ದರೂ 2010ರಲ್ಲಿ ಸ್ಥಗಿತಗೊಳಿಸುತ್ತದೆ.2019ರಲ್ಲಿ ಏರ್ ಇಂಡಿಯಾ ನವೆಂಬರ್ ತಿಂಗಳಲ್ಲಿ ತನ್ನ ಸೇವೆಯನ್ನು ಪುನರಾಂಭಿಸಿದೆ.



ಇನ್ನು ಕೀನ್ಯಾದವರೆಗೆ ತಾಂತ್ರಿಕ ಕೌಶಲ್ಯಗಳಲ್ಲಿ ತರಬೇತಿ ನೀಡಲು ಭಾರತವು ತನ್ನ ಭಾರತೀಯ ತಾಂತ್ರಿಕ ಮತ್ತು ಆರ್ಥಿಕ ಸಹಕಾರದ ಕಾರ್ಯಕ್ರಮದಡಿ ವಾರ್ಷಿಕ 101 ಸಂಪೂರ್ಣವಾಗಿ ಅನುದಾನಿತ ವಿದ್ಯಾರ್ಥಿವೇತನವನ್ನು ನೀಡುತ್ತಿದೆ.ಭಾರತದ ಪ್ಯಾನ್–ಆಫ್ರಿಕನ್ ಇ–ನೆಟ್ ವರ್ಕ್ ಯೋಜನೆಯು ಕೀನ್ಯಾವು ಸೇರಿದಂತೆ ಆಫ್ರಿಕನ್ ದೇಶಗಳು ದೂರಸಂಪರ್ಕ ಮತ್ತು ಟೆಲಿಮಿಡಿಷನ್ ಸೌಲಭ್ಯಗಳು ಸುಲಭವಾಗಿ ದೊರಕುವಂತೆ ಪ್ರಯತ್ನಿಸುತ್ತೀವೆ.ಕೀನ್ಯಾದಲ್ಲಿ ಭಾರತೀಯ ಹೂಡಿಕೆ ಸುಮಾರು1.5ಬಿಲಿಯನ್ ಮೌಲ್ಯದಾಗಿದೆ.ಕೀನ್ಯಾದಲ್ಲಿ ಕೈಗೆಟುಕುವ ದರದಲ್ಲಿ ಅಗತ್ಯ ಔಷಧಿಗಳು ದೊರಕುವಲ್ಲಿ ಭಾರತದ ಔಷಧಿಯ ರಫ್ತು ಪ್ರಮುಖ ಪಾತ್ರ ವಹಿಸಿದೆ.

# ಭದ್ರಾವತಿ ನ್ಯೂಟೌನ್ : ಅಮಲೋದ್ಭವಿ ಮಾತೆ ದೇವಾಲಯ : ನ.28ರಿಂದ 83ನೇ ವಾರ್ಷಿಕೋತ್ಸವ

ಭದ್ರಾವತಿ: ನಗರದ ನ್ಯೂಟೌನ್ ಅಮಲೋದ್ಭವಿ ಮಾತೆಯ ದೇವಾಲಯದ 83ನೇ ವರ್ಷದ ವಾರ್ಷಿಕೋತ್ಸವ ನ.28 ರಿಂದ ಡಿ.8ರ ವರೆಗೆ ನಡೆಯಲಿದೆ.

ಜಗದ್ಗುರು ಪೋಪ್‌ರವರ ಕರೆಯೋಲೆಯಂತೆ 2023ರಲ್ಲಿ ನಡೆಯುವ ವಿಶ್ವ ಸಿನೋಡ್ ಸಭೆಯ ಸಿದ್ಧತಾ ಪ್ರಕ್ರಿಯೆಗಳಿಗೆ ಪೂರಕವಾಗಿರುವಂತೆ ಈ ಬಾರಿ ಹಲವು ಕಾರ್ಯಕ್ರಮಗಳೊಂದಿಗೆ 'ಅಮಲೋದ್ಭವಿ ಮಾತೆಯೊಡನೆ ಅನ್ಯೋನ್ಯತೆ, ಸಹಭಾಗಿತ್ವ ಮತ್ತು ಸುವಾರ್ತಾ ಸೇವೆಯೆಡೆಗೆ ಜೊತೆಯಾಗಿ ನಮ್ಮ ಪಯಣ' ಎಂಬ ಶೀರ್ಷಿಕೆಯೊಂದಿಗೆ ವಾರ್ಷಿಕೋತ್ಸವ ಅದ್ದೂರಿಯಾಗಿ ಆಚರಿಸಲಾಗುತ್ತಿದೆ. ಈ ಸಂಬಂಧ ಪ್ರತಿದಿನ ಸಂಜೆ 5–30 ರಿಂದ ಜಪಸರ ಪ್ರಾರ್ಥನೆ, ಪೂಜೆ ಮತ್ತು ಪ್ರಬೋಧನೆಗಳು ಜರುಗಲಿವೆ.

ನ.28ರಂದು ಸಂಜೆ 5–30ಕ್ಕೆ ಧ್ವಜಾರೋಹಣ, ಜಪಸರ ಪ್ರಾರ್ಥನೆ, ಪೂಜೆ ಮತ್ತು ಪ್ರಬೋಧನೆಯೊಂದಿಗೆ ವಾರ್ಷಿಕೋತ್ಸವಕ್ಕೆ ಚಾಲನೆ ದೊರೆಯಲಿದೆ. ಶಿವಮೊಗ್ಗ ಗುಡ್ ಶೆಪರ್ಡ್ ಧರ್ಮಕೇಂದ್ರದ ಗುರು ಫಾದರ್ ವಿರೇಶ್ ಮೋರಾಸ್ ಅಮಲೋದ್ಭವಿ ಮಾತೆ, ಅನ್ಯೋನ್ಯತೆ, ಸಹಭಾಗಿ–ತ್ವ ಮತ್ತು ಸುವಾರ್ತಾ ಸೇವೆಯೆಡೆಗೆ ಜೊತೆಯಾಗಿ ಸಾಗುವ ನಮ್ಮ ಪಯಣಕ್ಕೆ ದಾರಿದೀಪ ವಿಷಯ ಕು–ರಿತು ಮಾತನಾಡಲಿದ್ದಾರೆ.

ನ.29ರಂದು ನಡೆಯುವ ಕಾರ್ಯಕ್ರಮದಲ್ಲಿ ಅಮಲೋದ್ಭವಿ ಮಾತೆ ಜಪಸರ ಮಾಡಲು ಪ್ರೇರೆಪಿಸಿದ ತಾಯಿ ವಿಷಯ ಕುರಿತು ಮಾವಿನಕೆರೆ ಕಿರಿಯ ಪುಷ್ಪ ಸಂತ ತೆರೇಸಮ್ಮನವರ ಸುವಾರ್ತ ಕೇಂದ್ರದ ಧರ್ಮಗುರು ಫಾದರ್ ವೀನಸ್ ಪ್ರವೀಣ್, ನ.30ರಂದು ಅಮಲೋದ್ಭವಿ ಮಾತೆ ತಾಳ್ಮೆಯ ನಿಧಿ ವಿಷಯ ಕುರಿತು ಶಿವಮೊಗ್ಗ ಸೇಕೆರ್ಡ್ ಆರ್ಟ್ ಶಾಲೆ ಪ್ರಾಂಶುಪಾಲ ಫಾದರ್ ಲಾರೆನ್ಸ್, ಡಿ.1ರಂದು ಅಮಲೋದ್ಭವಿ ಮಾತೆ ವಿಧೇಯತೆಯ ಮಾಗದರ್ಶಿ ವಿಷಯ ಕುರಿತು ಹಿರಿಯೂರು ವಿಯಾನ್ನಿ ಪ್ರೇಷಿತರ ಗೃಹದ ನಿರ್ದೇಶಕ ಫಾದರ್ ಸಂತೋಷ್, ಡಿ.2ರಂದು ಅಮಲೋದ್ಭವಿ ಮಾತೆ ಪ್ರಾರ್ಥನೆ ಮಾಡಲು ಆದರ್ಶ ವಿಷಯ ಕುರಿತು ಕಾಗದನಗರ ಸಂತ ಜೋಸೆಫ್‌ರ ದೇವಾಲಯದ ಎಸ್‌ಡಿಬಿ ಫಾದರ್ ಡೊಮಿನಿಕ್, ಡಿ.3ರಂದು ಅಮಲೋದ್ಭವಿ ಮಾತೆ ಅಚಲ ವಿಶ್ವಾಸದ ರಾಣಿ ವಿಷಯ ಕುರಿತು ಉಜ್ಜನಿಪುರ ಡಾನ್ ಬೋಸ್ಕೋ ಐಟಿಐ ನಿರ್ದೇಶಕ ಎಸ್‌ಡಿಬಿ ಫಾದರ್ ಆರೋಗ್ಯರಾಜ್ ಮತ್ತು ಡಿ.4ರಂದು ಅಮಲೋದ್ಭವಿ ಮಾತೆ ದೇವರ ವಾಕ್ಯವನ್ನು ನಿಷ್ಠೆಯಿಂದ ಪಾಲಿಸಿದ ತಾಯಿ ವಿಷಯ ಕುರಿತು ಹಿರಿಯೂರು ಸ್ವರ್ಗ ಸ್ವೀಕೃತ ಮಾತೆಯ ದೇವಾಲಯದ ಧರ್ಮಗುರು ಫಾದರ್ ಫ್ರಾಂಕ್ಲಿನ್ ಡಿಸೋಜ ಮಾತನಾಡಲಿದ್ದಾರೆ.

ಡಿ.5ರಂದು ಫಾದರ್ ಫ್ರಾಂಕ್ಲಿನ್ ಡಿಸೋಜ ನೇತೃತ್ವದಲ್ಲಿ ಬ್ರದರ್ ಟಿ.ಕೆ ಜಾರ್ಜ್ ಮತ್ತು ತಂಡದವರಿಂದ ರೋಗಿಗಳಿಗೆ ವಿಶೇಷ ಪ್ರಾರ್ಥನೆ ಒಳಗೊಂಡಂತೆ ಧ್ಯಾನಕೂಟ, ಡಿ.6ರಂದು ಜೇಡಿಕಟ್ಟೆ ಆಶಾಕಿರಣ ನಿರ್ದೇಶಕ ಫಾದರ್ ಪ್ರಕಾಶ್ ನೇತೃತ್ವದಲ್ಲಿ ಅಮಲೋದ್ಭವಿ ಮಾತೆ ಭಕ್ತಿಯ ಸುಧೆ ಕಾರ್ಯಕ್ರಮ ನಡೆಯಲಿದ್ದು, ಡಿ.7ರಂದು ಕಡೂರಿನ ನಿತ್ಯಾಧಾರ ಮಾತೆ ದೇವಾಲಯದ ಧರ್ಮಗುರು ಫಾದರ್ ರಾಜೇಂದ್ರ ಅಮಲೋದ್ಭವಿ ಮಾತೆ ಕುಟುಂಬಗಳ ಮಹಾರಾಣಿ ವಿಷಯ ಕುರಿತು ಹಾಗೂ ಡಿ.8ರಂದು ಹಾಸನ ಸಂತ ಅಂತೋಣಿಯವರ ದೇವಾಲಯದ ಧರ್ಮಗುರು ಫಾದರ್ ಜೋನಾಸ್ ಪ್ಯಾಟ್ರಿಕ್ ರಾವ್ ಅಮಲೋದ್ಭವಿ ಮಾಥೆ ಉದಾರತೆಯ ಗಣಿ ವಿಷಯ ಕುರಿತು ಮಾತನಾಡಲಿದ್ದಾರೆ.

ಡಿ.7ರಂದು ಸಂಜೆ ಅಲೋದ್ಭವಿ ಮಾತೆಯ ಭವ್ಯ ತೇರಿನ ಮೆರವಣಿಗೆ, ಭಕ್ತರಿಗೆ ಆಶೀರ್ವಾದ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮಗಳು ಹಾಗು ಡಿ.8ರಂದು ಸಂಜೆ ಆಡಂಬರದ ಬಲಿ ಪೂಜೆ, ವಿಶೇಷ ದಾನಿಗಳ ಸರಣೆ ಮತ್ತು ಸನ್ಮಾನ ಕಾರ್ಯಕ್ರಮಗಳೊಂದಿಗೆ ವಾರ್ಷಿಕೋತ್ಸವ ಮುಕ್ತಾಯಗೊಳ್ಳಲಿದೆ. ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ದೇವಾಲಯದ ಧರ್ಮಗುರು ಫಾದರ್ ಲಾನ್ಸಿ ಡಿಸೋಜ ಮತ್ತು ಪಾಲನ ಪರಿಷತ್ ಕಾರ್ಯದರ್ಶಿ ಅಂತೋಣಿ ವಿಲ್ಸನ್ ಕೋರಿದ್ದಾರೆ.

## " ವಿಶ್ವಪರಂಪರೆ ಸಪ್ತಾಹ 2021"

# ಬೃಹತ್ ಶಿಲಾಯುಗದ ನೆಲೆ ಹಿರೇಬೆಣಕಲ್ ಬೆಟ್ಟಕ್ಕೆ "ವಿಶ್ವಪರಂಪರಾ ನಡಿಗೆ"



ಗಂಗಾವತಿ: ಭಾರತೀಯ ಪುರಾತತ್ವ ಇಲಾಖೆ ಹಂಪಿ ವಲಯ ಕಮಲಾಪುರ ವತಿಯಿಂದ ವಿಶ್ವಪರಂಪರಾ ಸಪ್ತಾಹದ ಅಂಗವಾಗಿ ವಿಶ್ವ ಪರಂಪರಾ ನಡಿಗೆ , ತಾಣ ವೀಕ್ಷಣೆ ಮತ್ತು ಉಪನ್ಯಾಸ ಕಾರ್ಯಕ್ರಮ ನೆರವೇರಿತು.

ಹಂಪಿ ಪುರಾತತ್ವ ಇಲಾಖೆಯ ಅಧೀಕ್ಷಣ ಪುರಾತತ್ವಧರಾದ ನಿಖಿಲ್ ದಾಸ್‌ರವರು ಮಕ್ಕಳನ್ನುದ್ದೇಶಿಸಿ ಮಾತನಾಡಿದರು , ಯುನೆಸ್ಕೋ ವಿಶ್ವ ಪರಂಪರೆ ತಾತ್ಕಾಲಿಕ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವ ಹಿರೇಬೆಣಕಲ್ ಬೃಹತ್ ಶಿಲಾಯುಗದ ನೆಲೆ ವೈಶಿಷ್ಟ್ಯತೆಯನ್ನು ಹೊಂದಿದೆ, ಪ್ರವಾಸಿಗರ ಕಾಳಜಿ ತುಂಬ ಅವಶ್ಯವಾದುದು. ನೆಲೆ ನೋಡಲು ಹೋದಾಗ ವರ್ಣಚಿತ್ರ ಮತ್ತು ಶಿಲಾಕೋಣೆಗಳನ್ನು ಮುಟ್ಟುವುದಾಗಲಿ, ಮೇಲೆ ಹತ್ತುವುದಾಗಲಿ ಮಾಡಕೂಡದು. ಇಲಾಖೆ ಸಂರಕ್ಷಣೆ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ ಎಂದರು.

ನಂತರ ಸಹಾಯಕ ಪುರತತ್ವಧರಾದ ಹೆಚ್ ಆರ್ ದೇಸಾಯಿಯವರು ಮಾತನಾಡಿ ಸ್ಮಾರಕಗಳಲ್ಲಿ ಯಾವುದೇ ನಿಧಿ ಇಟ್ಟಿರುವುದಿಲ್ಲ, ತಪ್ಪು ಭಾವಿಸಿ ಸುಮ್ಮನೇ ಸ್ಮಾರಕಗಳನ್ನು ಒಡೆದು ಹಾಳುಮಾಡಿ ಇತಿಹಾಸವನ್ನು ನಶಿಸುವಂತೆ ಮಾಡುತ್ತಿದ್ದಾರೆ ಇದು ಅಪರಾಧವಾದ ಕೆಲಸ, ಮುಂದಿನ ದಿನಗಳಲ್ಲಿ ಕಡಿವಾಣ ಹಾಕಲಾಗುವುದು ಎಂದರು.

ಈ ವೇಳೆ ಪುರಾತತ್ವಧರಾದ ಡಾ.ರವಿಕುಮಾರ ಜೆ, ಸಂರಕ್ಷಣಾಧಿಕಾರಿ ವಿ. ಪ್ರಶಾಂತ, ಶ್ರೀಕೊಲ್ಲಿನಾಗೇಶ್ವರರಾವ್ ಗಂಗಯ್ಯ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಕ ಡಾ.ಸೆಲ್ವರಾಜ್, ಚಾರಣ ಬಳಗದ ಮಂಜುನಾಥ ಗುಡ್ಲಾನೂರ, ವೀರೇಶ ಅಂಗಡಿ, ಪಂಪಾಪತಿ, ಪ್ರವಾಸಿ ಮಿತ್ರ ನಿರುಪಾದಿ, ಶ್ರೀಕೊಲ್ಲಿನಾಗೇಶ್ವರರಾವ್ ಗಂಗಯ್ಯ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಾದ ಅಶೋಕಕುಮಾರ,ನಾಗರಾಜ, ಕಾಳಿಂಗರಾಜ, ದೊಡ್ಡಬಸುವ, ಬಸವರಾಜ, ಲಕ್ಕೀ, ಪ್ರೇಮ, ಗ್ರೇಸ್ ಹುಲಿಗೆಮ್ಮ, ಭೀಮಾಂಬಿಕಾ, ಮಾಸಮ್ಮ, ದೇವಮ್ಮ ಸೇರಿದಂತೆ ಸುಮಾರು 40 ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

ಕರುನಾಡ ಕಂದ
ಸಂಪುಟ–1 | ಸಂಚಿಕೆ–3
ದಿನಾಂಕ: 1–12–2021 | ಪುಟಗಳು: 16

# ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರಿಗೆ ಆಗ್ರಹ ಪತ್ರ ಸಲ್ಲಿಕೆ



ಗದಗ:ರಾಜ್ಯದ ಮಹಾನಗರಪಾಲಿಕೆ ನಗರಸಭೆ ಪುರಸಭೆ ಪಟ್ಟಣ ಪಂಚಾಯಿತಿಗಳಲ್ಲಿ ಹೊರಗುತ್ತಿಗೆ ನೌಕರರಾಗಿ ಕಾರ್ಯನಿರ್ವಹಿಸುತ್ತಿರುವ ತ್ಯಾಜ್ಯ ಸಾಗಿಸುವ ವಾಹನ ಚಾಲಕರು, ವಾಟರ್ ಮೆನ್, ಡಾಟ ಆಪರೇಟರುಗಳನ್ನು, ಯುಜಿಡಿ ಕಾರ್ಮಿಕರು ಹಾಗೂ ಸಾಹಾಯಕರನ್ನು ಗುತ್ತಿಗೆ ಪದ್ದತಿ ಬದಲು ನೇರ ವೇತನಕ್ಕೆ ಒಳಪಡಿಸುವಂತೆ ಆಗ್ರಹಿಸಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರಿಗೆ ಆಗ್ರಹ ಪತ್ರ ಸಲ್ಲಿಕೆ.

ರಾಜ್ಯದ ಮಹಾನಗರಪಾಲಿಕೆ ನಗರಸಭೆ ಪುರಸಭೆ ಪಟ್ಟಣ ಪಂಚಾಯಿತಿಗಳಲ್ಲಿ ಹೊರಗುತ್ತಿಗೆ ನೌಕರರಾಗಿ ಕಾರ್ಯನಿರ್ವಹಿಸುತ್ತಿರುವ ತ್ಯಾಜ್ಯ ಸಾಗಿಸುವ ವಾಹನ ಚಾಲಕರು, ವಾಟರ್ ಮೆನ್, ಡೇಟಾ ಆಪರೇಟರುಗಳನ್ನು, ಯುಜಿಡಿ ಕಾರ್ಮಿಕರು ಹಾಗೂ ಸಾಹಾಯಕರನ್ನು ಗುತ್ತಿಗೆ ಪದ್ದತಿ ಬದಲು ನೇರ ವೇತನಕ್ಕೆ ಒಳಪಡಿಸುವಂತೆ ಆಗ್ರಹಿಸುತ್ತೇವೆ, ಕರೋನಾ ಸಂದರ್ಭದಲ್ಲಿ ತಮ್ಮ ಪ್ರಾಣದಹಂಗು ತೊರೆದು ಕರ್ತವ್ಯ ನಿರ್ವಹಿಸಿದ ನಗರ ಸ್ಥಳೀಯ ಸಂಸ್ಥೆಗಳ ಹೊರಗುತ್ತಿಗೆ ನೌಕರರಿಗೆ ಸಕಾಲಕ್ಕೆ ಕನಿಷ್ಠ ವೇತನವೂ ಕೈಗೆ ಸಿಗದೆ ಗುತ್ತಿಗೆ ಏಜೆನ್ಸಿಗಳ ಶೋಷಣೆಗೆ ಸಿಲುಕಿಸಲಾಗಿದೆ.

ಕಳೆದ 2017ರಲ್ಲಿ ಪೌರಕಾರ್ಮಿಕರನ್ನು ವಿಶೇಷ ನೇಮಕಾತಿಯಡಿ ಖಾಯಂಗೊಳಿಸಿದ ಸರಕಾರ ಪೌರಕಾರ್ಮಿಕರೊಟ್ಟಿಗೆ ಕೆಲಸ ನಿರ್ವಹಿಸುವ ಈ ನೌಕರರನ್ನು ಗಮನಿಸಲೆಯಿಲ್ಲ, ಬಹುತೇಕ ಸ್ಥಳೀಯ ಸಂಸ್ಥೆಗಳಲ್ಲಿ ಸಕಾಲಕ್ಕೆ ವೇತನ ನೀಡದಿರುವುದು, ಕನಿಷ್ಠ ವೇತನ ಭವಿಷ್ಯ ನಿಧಿ ನೀಡದೆ ಗುತ್ತಿಗೆ ಏಜೆನ್ಸಿಗಳು ವಂಚಿಸುವುದು ಸರ್ವೆ ಸಾಮಾನ್ಯವಾಗಿದೆ, ಈ ಬಗ್ಗೆ ಪ್ರಶ್ನಿಸುವ ನೌಕರರಿಗೆ ಇನ್ನಿಲ್ಲದ ಕಿರುಕುಳ ನೀಡಿ ಕೆಲಸದಿಂದ ಕೈಬಿಡಲಾಗುತ್ತಿದೆ.

ದಾವಣಗೆರೆ ನಗರಪಾಲಿಕೆಯಲ್ಲಿ ಹೊರಗುತ್ತಿಗೆ ನೌಕರರ ಸಂಘದ ಮುಖಂಡ ದುರ್ಗೇಶ್ ಸೇರಿದಂತೆ ಹತ್ತಕ್ಕೂ ಹೆಚ್ಚು ಮಂದಿ ಹೊರಗುತ್ತಿಗೆ ನೌಕರರನ್ನು ಕನಿಷ್ಠ ಪಕ್ಷ ನೋಟಿಸ್ ಸಹ ನೀಡದೆ ಕೆಲಸದಿಂದ ಕಿತ್ತುಹಾಕಲಾಗಿದೆ, ನಗರಗಳ ಸ್ಥಳೀಯ ಸಂಸ್ಥೆಗಳಲ್ಲಿನ ಈ ವರ್ತನೆ ಬ್ರಿಟಿಷ್ ಆಡಳಿತವನ್ನು ನೆನಪಿಸುತ್ತದೆ.

ಕೂಡಲೆ ಈ ದೌರ್ಜನ್ಯ ನಿಲ್ಲಬೇಕು.ಹೊರಗುತ್ತಿಗೆ ನೌಕರರಿಗೆ ನೇರ ವೇತನ ಜಾರಿಗೊಳಿಸಬೇಕು, ನೇರ ವೇತನ ಜಾರಿಯಿಂದಾಗಿ ಸರಕಾರ ಅನಗತ್ಯ ನೀಡುವ ಶೇ18ರಷ್ಟು ಜಿಎಸ್ ಟಿ ಹಣ ಹಾಗೂ ಗುತ್ತಿಗೆ ಏಜೆನ್ಸಿಗಳಿಗೆ ನೀಡುವ ಶೇ5ರಷ್ಟು ಸೇವಾಶುಲ್ಕ ಸೇರಿ ಶೇ25ರಷ್ಟು ಹಣ ಉಳಿತಾಯವಾಗಲಿದೆ, ರಾಜ್ಯ ಸರಕಾರ ನಗರ ಸ್ಥಳೀಯ ಸಂಸ್ಥೆಗಳ ಹೊರಗುತ್ತಿಗೆ ನೌಕರರ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸದಿದ್ದರೆ ಮುಂದಿನ ವಿಧಾನಸಭೆ ಸಾರ್ವತ್ರಿಕ ಚುನಾವಣೆಯಲ್ಲಿ ಇದೊಂದು ಚುನಾವಣಾ ಅಜೆಂಡಾವಾಗಿ ರೂಪುಗೊಳ್ಳುವ ಸಂಭವವಿದ್ದು ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಆಗ್ರಹಗಳನ್ನು ಜಾರಿಗೊಳಿಸುವಂತೆ ಮನವಿ ಸಲ್ಲಿಸಿದರು.

1. ಹಾಸನ ಜಿಲ್ಲೆಯ ಹೊಳೆ ನರಸೀಪುರದಲ್ಲಿ ಅಘಘಾತಕ್ಕೀಡಾಗಿ ಸಾವನ್ನಪ್ಪಿದ ಹೊರಗುತ್ತಿಗೆ ವಾಹನ ಚಾಲಕ ಕುಮಾರ ಹಾಗೂ ವಿಜಯಪುರ ಜಿಲ್ಲೆಯಲ್ಲಿ ಮೃತಪಟ್ಟ ಪಾಲಿಕೆ ಹೊರಗುತ್ತಿಗೆ ಚಾಲಕನ ಕುಟುಂಬಕ್ಕೆ ಸರಕಾರ ರೂ.25ಲಕ್ಷ ಪರಿಹಾರ ಹಾಗೂ ಮೃತರ ಕುಟುಂಬಕ್ಕೆ ಸರಕಾರಿ ನೌಕರಿ ನೀಡಬೇಕು.

2. ಹೊರಗುತ್ತಿಗೆ ನೌಕರರಿಗೆ ಕೆಲಸದಿಂದ ಕಿತ್ತುಹಾಕುವ, ಸಕಾಲಕ್ಕೆ ವೇತನ ನೀಡದೆ ಕಿರುಕುಳ ನೀಡುವ ಪ್ರವೃತ್ತಿ ನಿಲ್ಲಬೇಕು, ದಾವಣಗರೆಯಲ್ಲಿ ಯಾವುದೇ ಕಾರಣ ನೀಡದೆ ಕೆಲಸದಿಂದ ಕಿತ್ತುಹಾಕಿರುವ ಹತ್ತು ಮಂದಿ ಹೊರಗುತ್ತಿಗೆ ನೌಕರರು ಸೇರಿದಂತೆ ರಾಜ್ಯದ ಎಲ್ಲೆಡೆ ವಿನಾಕಾರಣ ಕೆಲಸದಿಂದ ಕಿತ್ತೋಗೆಯಲ್ಪಟ್ಟ ಹೊರಗುತ್ತಿಗೆ ನೌಕರರನ್ನು ಮರು ನಿಯೋಜಿಸಬೇಕು.

3. ನಗರ ಸ್ಥಳೀಯ ಸಂಸ್ಥೆಗಳ ಹೊರಗುತ್ತಿಗೆ ನೌಕರರನ್ನು ನೇರ ವೇತನಕ್ಕೆ ಒಳಪಡಿಸಬೇಕು.

4. ಪೌರಾಡಳಿತ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಗತ್ಯಕ್ಕನುಗುಣವಾಗಿ ಪರಿಷ್ಕರಿಸಬೇಕು.

5. ಹೊರಗುತ್ತಿಗೆ ನೌಕರರ ನೇಮಕಾತಿಯನ್ನು ಪರೋಕ್ಷವಾಗಿ ನಿಯಂತ್ರಿಸುತ್ತ ರೂ. 2ಕೋಟಿಗೂ ಹೆಚ್ಚು ಅವ್ಯವಹಾರ ನಡೆಸಿರುವ ದಾವಣಗೆರೆ ಪಾಲಿಕೆ ಆಯುಕ್ತ ವಿಶ್ವನಾಥ್ ಮುದ್ದಜ್ಜಿ ವಿರುದ್ಧ ಕ್ರಮ ಜರುಗಿಸಬೇಕು.

ಈ ಆಗ್ರಹಗಳ ಜಾರಿಗಾಗಿ ನ.25ರಂದು ರಾಜ್ಯಾದ್ಯಂತ 288 ನಗರ ಸ್ಥಳೀಯ ಸಂಸ್ಥೆಗಳ ಹೊರಗುತ್ತಿಗೆ ನೌಕರರು ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರಿಗೆ ಆಗ್ರಹ ಪತ್ರ ಸಲ್ಲಿಸಿದರು.

ಗದಗ ನಗರದ ಹೊರಗುತ್ತಿಗೆ ನೌಕರರ ಸಂಘದ ಅಧ್ಯಕ್ಷರಾದ ಶಿವು ಎಚ್ ಜಂಬಲದಿನ್ನಿ ಇವರ ನೇತೃತ್ವದಲ್ಲಿ ಗದಗ ಜಿಲ್ಲಾ ತಹಶೀಲ್ದಾರರ ಮುಖಾಂತರ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಗದಗ ನಗರದ ಹೊರಗುತ್ತಿಗೆ ನೌಕರರ ಸಂಘದ ಉಪಾಧ್ಯಕ್ಷರಾದ ರಮೇಶ ಬಾರಕೇರ, ಸಂಘಟನಾ ಕಾರ್ಯದರ್ಶಿ ಅನ್ನಪ್ಪ ಜಂಬಲದಿನ್ನಿ, ಕಾರ್ಯದರ್ಶಿ ನಾರಾಯಣ ಎಸ್ ಬಳ್ಳಾರಿ, ಗುಡ್ಡೆಸಾಬ್ ಅರಳಿಗಿಡದ, ಶ್ರೀಪಾದ ಹೊಸಳ್ಳಿ, ಬಸವರಾಜ ಮುಂಡರಗಿ, ಸದ್ದಾಂ ಅಂಗಡಿ, ವಿಜಯ ಖಾಖಿ, ಬಸವರಾಜ ದಾನ್ನುರ, ಸಂತೋಷ ಹೊನ್ನಮ್ಮನವರ, ನೀಲಕಂಠ ಹಾದಿಮನಿ, ಬಸಯ್ಯಾ ಸಂಗನಾಲ ಮಠ ಉಪಸ್ಥಿತರಿದ್ದರು.

**– ಮಹಾಂತೇಶ್ ಕಾಳಗಿ**

# ಸರ್ವಂ ರಾಮ ಮಯಂ ಜನ್ಮಭೂಮಿಯಲ್ಲೇ ರಾಮನ ಭವ್ಯ ದೇಗುಲ ನಿರ್ಮಾಣ

ಸರ್ವಂ ರಾಮ ಮಯಂ ಜನ್ಮಭೂಮಿಯಲ್ಲೇ ರಾಮನ ಭವ್ಯ ದೇಗುಲ ನಿರ್ಮಾಣ ಇದು ಕಲಿಯುಗದಲ್ಲಿ ರಾಮನ ಇತಿಹಾಸ ತಿಳಿಯುತ್ತಾ ಬಂದ್ರೆ ರಾಮಾಯಣ ಹಿಂದೂಗಳ ಪವಿತ್ರ ಗ್ರಂಥ ವಾಲ್ಮೀಕಿ ಮಹರ್ಷಿ ರಚಿಸಿದ ಗ್ರಂಥ ತತ್ಪುರುಷ ಸಮಾಸವಾಗಿ ವಿಭಜಿಸಿದೆ. (ರಾಮನ +ಅಯನ )=ರಾಮಾಯಣ" ರಾಮನ ಕಥೆ" ಎಂಬ ಅರ್ಥ ಬರುತ್ತದೆ. ರಾಮಾಯಣವು 24000 ಶ್ಲೋಕಗಳಿಂದ ಉಂಟಾದ 7 ಕಾಂಡಗಳಿಂದ ಕೂಡಿದೆ. ರಾಮಾಯಣದ ಕಥೆಯೂ ಅಯೋಧ್ಯೆಯ ಸೂರ್ಯವಂಶದ ರಾಜಪುತ್ರ ರಾಮ, ಆತನ ಮಡದಿ ಸೀತೆ ಹಾಗೂ ಸೀತೆಯನ್ನು ಅಪಹರಣ ಮಾಡಿದ ರಾವಣನ ಸಂಹಾರ ಕುರಿತಾಗಿದೆ.

ಆದರೆ ರಾಮಾಯಣದ ಇತಿವೃತ್ತ ನೋಡಿದಾಗ ಇತ್ತೀಚಿನ ಸಂಶೋಧನೆಗಳ ರಾಮಾಯಣದ ರಚನಾ ಕಾಲ ಕ್ರಿ.ಪೂ 5 ನೇ ಶತಮಾನದಿಂದ ಕ್ರಿ .ಪೂ 1 ನೇ ಶತಮಾನವೆಂದು ನಿರ್ಧರಿಸಲು ಆಗಿದೆ . ಈ ಕಾಲವು ಮಹಾಭಾರತದ ಮೊದಲ ಆವೃತ್ತಿಗಳಿಗೆ ಹತ್ತಿರವಾದ ಕಾಲ ಎಂದು ಹೇಳಲಾಗುತ್ತದೆ .ಆದರೆ ಬೇರೆ ಪೌರಾಣಿಕ ಗಳಂತೆ ಈ ಕಾವ್ಯವು ಅನೇಕ ಮಾರ್ಪಾಡುಗಳಿಗೆ ಒಳಗಾಗಿರುವುದರಿಂದ ಇದರ ನಿಖರವಾದ ಕಾಲ ಊಹಿಸುವುದು ಕಷ್ಟಕರವಾಗಿದೆ. ಆದರೆ ಅಡ್ವಾಣಿ ರಥಯಾತ್ರೆಗೆ ಮೋದಿಯ ಸಾರಥಿ ರಾಮನ ಜನ್ಮಸ್ಥಳ ಅಯೋಧ್ಯೆಯಲ್ಲಿ ಮಂದಿರ ನಿರ್ಮಾಣವಾಗಬೇಕೆ? ಎಂಬುದು ಹಿಂದೂಗಳ ನ್ಯಾಯಬದ್ಧ ಹಕ್ಕು ಒತ್ತಾಯವಾಗಿತು.

ಇದಕ್ಕೆ ಹೋರಾಟದ ದಿಕ್ಕು ನೀಡಿದ ಶ್ರೇಯಸ್ಸು ವಿಎಚ್ ಪಿಯ ಅಶೋಕ್ ಸಿಂಘಾಲ್ ಅವರಿಗೆ ಸಲ್ಲಿಸಲು ಬೇಕು . ಮೂರು ದಶಕಗಳ ಹಿಂದೆಯೇ ಅವರ ಹೋರಾಟ ಇಡೀ ದೇಶದಲ್ಲಿ ವಿದ್ವತ್ ಸಂಚಲನವನ್ನು ಉಂಟು ಮಾಡಿತು . ಪ್ರತಿಯೊಬ್ಬ ಭಾರತೀಯರಲ್ಲಿ ಮಂದಿರ ನಿರ್ಮಾಣದ ಕನಸು ಬಿತ್ತಿ ಆ ಮಹಾನ್ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಮಾಡಿದ್ದು ಅವ ಸ್ಮರಣೀಯ ಆದರೆ ಆ ಹೋರಾಟ ತೀವ್ರಗೊಳ್ಳಲು ಹಾಗೂ ಫಲಪ್ರದವಾಗಲು ಬಿಜೆಪಿಯ ಕೊಡುಗೆ ಸಾಕಷ್ಟಿದೆ ಆಗ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಎಲ್ ಕೆ ಅಡ್ವಾಣಿಯವರು ಆರ್ ಎಸ್ ಎಸ್ ಸರಸಂಘಚಾಲಕ ಬಾಳಾಸಾಹೇಬ್ ದೇವರಸ ಅವರ ಸೂಚನೆಯಂತೆ ಅಯೋಧ್ಯೆಯ ಹೋರಾಟಕ್ಕೆ ಧುಮುಕಿದರು . ದೇಶದ ಇತಿಹಾಸದಲ್ಲಿ ಅಡ್ವಾಣಿಯವರ ರಥಯಾತ್ರೆಯ ಒಂದು ಅಚ್ಚಳಿಯದ ವಿದ್ಯಮಾನ . ಹಿಂದೂಗಳನ್ನು ಒಗ್ಗೂಡಿಸಲೆಂದೆ ಸಂಘಟಿಸಿದ ಕಲಿಯುಗದ ಅಶ್ವಮೇಧ ಯಾತ್ರೆಯಾಗಿತ್ತು . 1990 ರಲ್ಲಿ ಸೋಮನಾಥದಿಂದ ರಥಯಾತ್ರೆ ಪ್ರಾರಂಭವಾದಾಗ ನರೇಂದ್ರ ಮೋದಿ ಗುಜರಾತ್ ನ ಬಿಜೆಪಿ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿದ್ದರು . ಆ ಸಂದರ್ಭದಲ್ಲಿ ಒಂದೊಂದು ನಗರದಲ್ಲಿ ಸಾವಿರ ಜನ ಸೇರುವುದೇ ಅನುಮಾನವಾಗಿದ್ದು ಸಂದರ್ಭದಲ್ಲಿ ಜುನಾಗಡದಲ್ಲಿ ಐವತ್ತು ಸಾವಿರದಿಂದ ಅರುವತ್ತು ಸಾವಿರ ವರೆಗೆ ಜನರು ಸೇರಿ ಮೋದಿ ಎಲ್ಲರ ಗಮನ ಸೆಳೆದಿದ್ದರು . ಅವರ ಸಂಘಟನಾ ಕೌಶಲವನ್ನು ಅಡ್ವಾಣಿಯವರು ಗುರುತಿಸಿ ಬೆನ್ನು ತಟ್ಟಿದರು .ರಥಯಾತ್ರೆಯ ನೇತೃತ್ವ ವಹಿಸಲು ಅಡ್ವಾಣಿಯವರೇ ಆಗಿದ್ದರು ಅವರ ರೂಪರೇಷೆ ರಚಿಸಿ ಜವಾಬ್ದಾರಿ ಹೊತ್ತು ಯಶಸ್ವಿಯಾಗುವಂತೆ ಮಾಡಿದ್ದು ನರೇಂದ್ರ ಮೋದಿ.ರಥಯಾತ್ರೆ ಉದ್ದಕ್ಕೂ ಯಶಸ್ವಿ ಸೂತ್ರಧಾರಿಯ ಪಾತ್ರ ವಹಿಸಿದ್ದ ಮೋದಿ ಕೌಶಲ್ಯ ಈಗಲೂ ಕೌತುಕ ವಿಷಯವಾಗಿ ಕಾಡುತ್ತದೆ .ಇಷ್ಟೇ ಅಲ್ಲ ರಥಯಾತ್ರೆಯಲ್ಲಿ ಮುಂಚೂಣಿ ದ್ದ ಮೋದಿ ಅವರ ಫೋಟೋ ತೆಗೆದ ಮಹೇಂದ್ರ ತಿಪಾಟಿ ಎಂಬುವರು" ಮೋದಿಜಿ ನೀವು ಯಾವಾಗ ಮತ್ತೆ ಅಯೋಧ್ಯೆಗೆ ಬರುತ್ತೀರಿ?" ಎಂದು ಪ್ರಶ್ನಿಸಿದರು .ಮೋದಿ ಜಿ ಈಗ ಬಿಜೆಪಿಯ ಸರ್ಕಾರ ಕೊನೆಗೆ ಅಯೋಧ್ಯೆಯಲ್ಲಿ ಭವ್ಯ ರಾಮ ಮಂದಿರ ನಿರ್ಮಿಸುವ ಕೋಟ್ಯಂತರ ಭಾರತೀಯರ ಶತಮಾನಗಳ ಕನಸು ನನಸಾಗುವ ಕಾಲ ಬಂದೇ ಬಿಟ್ಟಿದೆ .500ವರ್ಷಗಳಿ0ದ ನಡೆಯುತ್ತಿದ್ದ ಸಾತ್ವಿಕ ಸಂಘರ್ಷ ಮತ್ತು 134ವರ್ಷಗಳ ಕಾನೂನು ಹೋರಾಟದ ಬಳಿಕ ಸಿಕ್ಕಿದ ನ್ಯಾಯದಾನ ಜನ್ಮಭೂಮಿಯಲ್ಲಿ ಶ್ರೀರಾಮನ ದಿವ್ಯ ಮಂದಿರ ನಿರ್ಮಾಣಕ್ಕೆ ಹಾದಿ ಮಾಡಿದೆ .ಹಲವು ಪೀಳಿಗೆಗಳ ಕನಸಿನ ಮಂಟಪ ಬುಧವಾರ ಮಧ್ಯಾಹ್ನ ಅಡಿಗಲ್ಲು ಇಡಲಾಗುತ್ತೆ . ಕೇವಲ ಶುಭಗಳಿಗೆ ಮೂವತ್ತೆರಡು (32) ಸೆಕೆಂಡ್ ವಿಘ್ನ ನಿವಾರಣೆಗೆ ಹೆಸರಾದ "ಅಭಿಜಿನ್ " ಮುಹೂರ್ತದಲ್ಲಿ ಭೂಮಿ ಪೂಜೆ ನಡೆಯಲಿದೆ .ಆದರೆ ಈ ಶುಭ ಮಹೂರ್ತವು ಕೇವಲ 32 ಸೆಕೆಂಡ್ ಕಾಲ ಮಾತ್ರ ಇರಲಿದ್ದು .ಅಷ್ಟರಲ್ಲಿ ಶಿಲಾನ್ಯಾಸ ನೆರವೇರಲಿದೆ ಎಂದು ಕಾರ್ಯಕ್ರಮದ ಉಸ್ತುವಾರಿ ನೋಡಿಕೊಳ್ಳುವ ಅರ್ಚಕರು ಹೇಳಿದ್ದಾರೆ .ಇಷ್ಟೇ ಅಲ್ಲದೇ ಮುಸ್ಲಿಮರಾದಿಯಾಗಿ ಸರ್ವಧರ್ಮೀಯರ ಬೆಂಬಲ ದೊಂದಿಗೆ ನಡೆಯುತ್ತಿರುವ ಈ ಕಾರ್ಯವನ್ನು ಭಾರತದ ಭಾವೈಕ್ಯತೆಯ ಸಂಕೇತ ಎಂದೇ ಬಣ್ಣಿಸಲಾಗಿದೆ . ಉಗ್ರರ ದಾಳಿ ಭೀತಿ , ಕೋರೋನ ಸೋಂಕಿನ ಹಿನ್ನೆಲೆಯಲ್ಲಿ ಸಾಕಷ್ಟು ಬಿಗಿ ಭದ್ರತೆ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ . ಐತಿಹಾಸಿಕ ಕಾರ್ಯಕ್ರಮಕ್ಕೆ ಕ್ಷಣಗಣನೆ ಆರಂಭವಾಗಿದ್ದು ,ದಿವ್ಯ ಕ್ಷಣವೂ ಕಣ್ತುಂಬಿಕೊಳ್ಳಲು ಇಡೀ ದೇಶವೇ ಕಾಯುತ್ತಿದೆ .ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ಮನೆ ಮಂದಿ ರಂಗೋಲಿ ಹಾಕಿ ದೀಪ ಹಚ್ಚಿ ,ಮನೆಯಲ್ಲಿ ಆಚರಿಸಿ ,ಪಟಾಕಿ ಹಚ್ಚಬೇಡಿ ,ಆಯಾ ರಾಜ್ಯದ ಎಲ್ಲ ದೇವಾಲಯಗಳಲ್ಲಿ ವಿಶೇಷ ಪೂಜೆ ಪ್ರಾರ್ಥನೆ ಧಾರ್ಮಿಕ ದತ್ತಿ ಇಲಾಖೆ ಅದೇಶ ,ತೋರಣ ಕಟ್ಟಿ ,ಭಗವಾಧ್ವಜ ಏರಿಸಿ : ವಿಹಿ0ಪ ಸಲಹೆ , ಎಲ್ಲ ರಾಜ್ಯಗಳಲ್ಲಿ ಸರಳವಾಗಿ ಆಚರಣೆ .ಐದು ಶತಮಾನಗಳ ಕನಸು ನನಸು ದೇಶದ ದೇಶದೆಲ್ಲೆಡೆ ಹಬ್ಬದ ವಾತಾವರಣ . ಇಷ್ಟೇ ಅಲ್ಲ ಇವತ್ತಿನ ಪೀಳಿಗೆಗೆ ಅಂದು ರಾವಣ ಸಂಹಾರ ಕಲಿಯುಗದಲ್ಲಿ ಮತ್ತೆ ಅಯೋಧ್ಯದಲ್ಲಿ ಹುಟ್ಟಿದ "ರಾಮ" ಅಸತ್ಯ (ಕ್ರೂರಿ )ಯನ್ನು ನಾಶವನ್ನು ಮಾಡುವುದಕ್ಕೆ ಜನ್ಮ ಪಡೆಯುತ್ತಿದ್ದನೆ. ರಾಮಮಂದಿರ ಕೇವಲ ಕಲ್ಲು ,ಇಟ್ಟಿಗೆಗಳ ಕಟ್ಟಡವಲ? . ಅದು ನಮ್ಮ ದೇಶದ ಒಟ್ಟಾರೆ ಮೌಲ್ಯಗಳ ಪ್ರತಿಕ . ಕೋಟ್ಯಂತರ ಹಿಂದೂಗಳ ಪವಿತ್ರ ಹಾಗೂ ಪಾವನ ಸ್ಥಳವಾಗಿ ಅಯೋಧ್ಯೆಯು ಗುರುತಿಸಲ್ಪಟ್ಟು ತ್ತದೆ . ಅದರಂತೆ ಶ್ರೀರಾಮನ ಜೀವನ ಸೌಹಾರ್ದತೆಗೆ ಅತ್ಯುತ್ತಮ ಉದಾಹರಣೆಯೂ ಆಗಿದೆ .ಮನುಷ್ಯರು ಮಾತ್ರವಲ್ಲದೆ ,ಸಕಲ ಪಶು ಪ್ರಾಣಿಗಳು ಸಾಮರಸ್ಯ '

ಸೌಹಾರ್ದತೆ ಯ ಜೀವನವೂ ಸಾಧ್ಯವಾಗುತ್ತದೆ .ಅಷ್ಟೇ ಅಲ್ಲದೇ ಶ್ರೀರಾಮನ ಮಹೋನ್ನತ ವ್ಯಕ್ತಿತ್ವದ ,ಉದಾತ್ತ ಚಿಂತನೆ 'ಉದಾತ್ತವಾದ ಆದರ್ಶ ,ರಾಮ ಮಂದಿರವು ಸಮರಸದ ಮೌಲ್ಯವನ್ನು ಪ್ರತಿಪಾದಿಸಲಿದೆ .ಜೊತೆಗೆ ಕಲಿಯುಗದಲ್ಲಿ ದಿನದಿಂದ ದಿನಕ್ಕೆ ಮನುಷ್ಯ ಮತ್ತು ಮನುಷ್ಯನ ನಡುವೆ ಒಂದು ರೀತಿ ದ್ವೇಷ, ಅಸೂಯೆ, ಅಸಭ್ಯತೆ ,ಅಸತ್ಯತೆ ಹೆಚ್ಚಾಗ್ತಾತದೆ , ಅಂದು ರಾಮಾಯಣದಲ್ಲಿ ರಾವಣ ವ್ಯಾಮೋಹಕ್ಕೆ ಒಳಗಾಗಿ ರಾಮನಿಂದ ಸಂಹಾರ ನಾಗಿ ರಾಮಾಯಣ ಸಂಪೂರ್ಣವಾಗಿ ಕಂಡುಬರುತ್ತೆ .ಆದರೆ ಈ ಕಲಿಯುಗದ ಆದರೆ ಬರುವ ಪೀಳಿಗೆ ಸತ್ಯದ ಕಡೆ ಮುಖ ಅಲ್ಲ ಅಸತ್ಯದ ಕಡೆ , ಮೋಹದ ಹಾಗೂ ವ್ಯಾಮೋಹದ ಕಡೆ , ಹೆಚ್ಚು ಹೆಚ್ಚು ಮುಖ ಮಾಡುತ್ತಿದ್ದಾರೆ . ಹೀಗಾದರೆ ಇಡೀ ಬ್ರಹ್ಮಾಂಡವು ನಾಶವಾಗಬಹುದು ಅದೊಂದು ದಿನ ಇಲ್ಲಿ ಮನುಷ್ಯ ಕುಲವೆಂಬುದು ಇತ್ತೋ ಇಲ್ಲವೋ ಎಂಬುದೇ ಅರಿವು ಅರ್ಥವಾಗುವುದು ಇಲ್ಲ .ಹೀಗಿರುವಾಗ ಈ ಯಾರು ಮಾಡಿದ ಪುಣ್ಯದ ಫಲವೋ ಕಲಿಯುಗದಲ್ಲಿ ಮತ್ತೆ ಹುಟ್ಟಿ ಬರುವನು ಅಯೋಧ್ಯೆಯಲ್ಲಿ ರಾಮ ಎಷ್ಟರಲ್ಲಿ ? 5– 08–2020 ಪೂಜೆಯ ಕಾರ್ಯ ನೆರವೇರಿಲ್ಲ ದ್ದು .ಸುಮಾರು 2023ರೊಳಗಾಗಿ ರಾಮ ಅಯೋಧ್ಯೆಯಲ್ಲಿ ರಾಮಮಂದಿರದಲ್ಲಿ ನೆಲೆಸಿರುವನು . ಈ ದೇಶದ ಭಕ್ತರ ಕಷ್ಟ ಕಾರ್ಪಣ್ಯಗಳಿಗೆ ತೊಡಗಿಸುವನು. ಆದ್ದರಿಂದ ಭಾರತೀಯ ಶುಭ ಫಲ ತಂದು ಕೊಡುವ ಪುಣ್ಯ ಕ್ಷೇತ್ರವಾಗಿ ಅಯೋಧ್ಯೆ ಜಗತ್ತಿನ ಗಮನ ಸೆಳೆಯುವುದು ನಿಶ್ಚಿತ ಹಾಗೂ ಮುಂದೊಂದು ದಿನ ಭಾರತ ದೇಶದ ಜನರಲ್ಲಿ "ಸರ್ವಂ ರಾಮ ಮಯಂ" ಒಂದು ಸಲ ಆದರೂ ಪ್ರತಿಯೊಬ್ಬ ಇವತ್ತಿನ ಪೀಳಿಗೆಯು "ಶ್ರೀರಾಮನ ಚರಿತ್ರೆಯನ್ನು " ಒಂದೊಮ್ಮೆ ಓದಿ ತಿಳಿಯಿರಿ ರಾಮ ,ರಾಮ..........!ಕೊನೆ ಇಲ್ಲ.

**– ಬರಹಗಾರ :– ಕೆ.ಮಹೇಂದ್ರ ಶಿಕ್ಷಕ ಬಳ್ಳಾರಿ**

ಕರುನಾಡ ಕಂದ
ಸಂಪುಟ–1 | ಸಂಚಿಕೆ–3
ದಿನಾಂಕ: 1–12–2021 | ಪುಟಗಳು: 16

# ಶ್ರೀ ಶ್ರೀ ಕಾಳಿಕಾದೇವಿಯ 7ನೇ ಜಾತ್ರಾ ಮಹೋತ್ಸವ ಹಾಗೂ ಮೂರ್ತಿ ಸ್ಥಾಪನೆ ಕಳಸಾರೋಹಣ



ಚಿಂಚೋಳಿ ತಾಲೂಕಿನ ಹೂವಿನಭಾವಿ ತಾಂಡಾದಲ್ಲಿ ನಡೆದ ಶ್ರೀ ಶ್ರೀ ಕಾಳಿಕಾದೇವಿಯ 7ನೇ ಜಾತ್ರಾ ಮಹೋತ್ಸವ ಹಾಗೂ ಮೂರ್ತಿ ಸ್ಥಾಪನೆ ಕಳಸಾರೋಹಣ* ಕಾರ್ಯಕ್ರಮದಲ್ಲಿ. *ಚಿಂಚೋಳಿ ಕಾಂಗ್ರೆಸ್ ಪಕ್ಷದ ಮುಖಂಡರಾದ ಶ್ರೀ ಸುಭಾಷ ರಾಠೋಡ* ರವರು ಭಾಗವಹಿಸಿ ಮಾತನಾಡಿದರು. ಕಾರ್ಯಕ್ರಮ ದಲ್ಲಿ *ಶ್ರೀ ಧನಸಿಂಗ್ ಮಹಾರಾಜ, ಶ್ರೀ ಪರ್ವತಲಿಂಗ ಪರಮೇಶ್ವರ್ ಮಹಾರಾಜ, ಶ್ರೀ ಜೇಮಸಿಂಗ್ ಮಹಾರಾಜ, ಶ್ರೀ ಬಳಿರಾಮ ಮಹಾರಾಜ,ಶ್ರೀ ವಿಠಲ ಮಹಾರಾಜ, ಶ್ರೀ ಲೋಕೇಶ ಮಹಾರಾಜ ಶ್ರೀ ಲತಾದೇವಿ, ಶ್ರೀ ಮಾತಾ ಗೀತಾ ದೇವಿ.* ದಿವ್ಯ ಸಾನಿಧ್ಯ ವಹಿಸಿದರು

ಈ ಸಂಧರ್ಭದಲ್ಲಿ *ಬಂಜಾರ ಸಮಾಜದ ಖ್ಯಾತ ಗಾಯಕಿ ಕು. ಮಂಗಲಿಬಾಯಿ ಸಾಧನಾ ಕೋಚಿಂಗ್ ಸೆಂಟರ್ ನ ನಿರ್ದೇಶಕಿ ಡಾ. ಜ್ಯೋತಿ ರಾಠೋಡ* ಮುಖಂಡರುಗಳಾದ ಸಿದ್ದು ಪೂಜಾರಿ, ರವಿ ರಾಠೋಡ ಸುಲೇಪೇಟ, ಮೋತಿರಾಮ ಚವ್ಹಾಣ, ಆನಂದ ಜಾಧವ, ರಾಜು ರಾಠೋಡ, ಒಆ ಇಮ್ರಾನ್, ಹಾನು ಮಿಯ್ಯಾ, ಗೌಡಪ್ಪ ಪಾಟೀಲ್, ರಮೇಶ ಜಾಧವ, ಹಾಗೂ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರು, ಯುವ ನಾಯಕರು, ಹಾಲಿ – ಮಾಜಿ ಚುನಾಯಿತ ಜನಪ್ರತಿನಿದಿಗಳು, ವಿವಿಧ ಘಟಕದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕರ್ತರು, ಅಭಿಮಾನಿಗಳು, ತಾಂಡಾದವರು,ಗ್ರಾಮಸ್ಥರೆಲ್ಲರೂ ಉಪಸ್ಥಿತರಿದ್ದರು.

# ಪಬ್ಲಿಕ್ ಸ್ಕೂಲ್ ನಲ್ಲಿ ಸಂವಿಧಾನ ದಿನಾಚರಣೆ ಕಾರ್ಯಕ್ರಮ



ದೇಶದ ಮೂಲಭೂತ ಕಾನೂನೇ ಸಂವಿಧಾನವಾಗಿದೆ ಜಗತ್ತಿನಲ್ಲಿಯೇ ಭಾರತ ಸಂವಿಧಾನವು ದೊಡ್ಡದಾದ ಸಂವಿಧಾನ. ನವೆಂಬರ್ 26 1949 ರಂದು ನಮ್ಮ ಸಂವಿಧಾನವು ಅಂಗೀಕಾರವಾಯಿತು ಅದರ ಸ್ಮರಣಾರ್ಥ ನವೆಂಬರ್ 26 ನ್ನು "ಸಂವಿಧಾನ ದಿನ" ವಾಗಿ ಆಚರಿಸಲಾಗುತ್ತದೆ.

ಕರ್ನಾಟಕ ಪಬ್ಲಿಕ್ ಶಾಲೆ ಬಿ.ಮಟಕೆರೆಯಲ್ಲಿ ಸಂವಿಧಾನ ದಿನವನ್ನು ಬಹಳ ಅರ್ಥಪೂರ್ಣವಾಗಿ ಆಚರಿಸಲಾಯಿತು, ಸಮಾಜ ವಿಜ್ಞಾನ ಶಿಕ್ಷಕರಾದ ಪ್ರಸಾದ್ ರವರು ಸಂವಿಧಾನದ ರಚನೆ , ಹಿನ್ನಲೆ ,ಮಹತ್ವ ತಿಳಿಸಿದರು ಜೊತೆಗೆ ಸಂವಿಧಾನ ದ ಪ್ರಸ್ತಾವನೆಯ ಪ್ರಮಾಣ ವಚನ ಬೋಧಿಸಿದರು.ಪ್ರಾಂಶುಪಾಲರಾದ ಶ್ರೀಯುತ ಡಾ/ ಸಂತೋಷ ಚೊಕ್ಕಾಡಿರವರು ಮಾತನಾಡಿ ವಿದ್ಯಾರ್ಥಿಗಳಿಗೆಸಂವಿಧಾನದರಚನೆಯಲ್ಲಿಅಂಬೇಡ್ಕರರ ಪಾತ್ರ ಹಾಗೂ ಸಂವಿಧಾನದ ಮೌಲ್ಯಗಳನ್ನು ತಿಳಿಸಿ ಅಳವಡಿಸಿಕೊಳ್ಳಲು ತಿಳಿಸಿದರು.ಸಂವಿಧಾನದಿನದ ಅಂಗವಾಗಿ ಹಮ್ಮಿಕೊಂಡಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು .ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ವಿತರಿಸಲಾಯಿತು.ಈ ಸಂಧರ್ಭದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಯ ಹಿರಿಯ ಉಪನ್ಯಾಸಕಿಯಾದ ಶ್ರೀಮತಿ ಜುಡಿತ್ ಸ್ವಿಕೇರಾ , ಉಪಪ್ರಾಂಶುಪಾಲರಾದ ಶ್ರೀಯುತ



ಹಣಮಂತ ಟಿಂಗಾಣಿ ರವರು, ಪ್ರಾಥಮಿಕ ಶಾಲಾ ವಿಭಾಗದ ಮುಖ್ಯೋಪಧ್ಯಾಯರಾದ ಶ್ರೀಯುತ ಎ.ಬಿ ಸೂರ್ಯವಂಶಿ ರವರು ಹಾಗೂ ಶಾಲೆಯ ಎಲ್ಲಾ ಶಿಕ್ಷಕರು ,ಉಪನ್ಯಾಸಕರು,ಭೋಧಕೇತರ ವರ್ಗದವರು ಉಪಸ್ಥಿತರಿದ್ದರು. ಈ ಸಂಧರ್ಭದಲ್ಲಿ ಜಿಲ್ಲಾಮಟ್ಟದ ಚುನಾವಣಾ ಸಾಕ್ಷರತಾ ಸಂಘದ ರಸಪ್ರಶ್ನೆ

# ಕೊಪ್ಪಳ ಲೋಕಸಭಾ ಕ್ಷೇತ್ರವನ್ನು ಕಿಷ್ಕಿಂಧ ಲೋಕಸಭಾ ಎಂದು ನಾಮಕರಣ ಮಾಡಲು ಹಾಗೂ ಸುಗ್ರೀವನ ಪ್ರತಿಮೆ ಸ್ಥಾಪನೆಗೆ ಮನವಿ

ಗಂಗಾವತಿ: ಕೊಪ್ಪಳ ಲೋಕಸಭಾ ಕ್ಷೇತ್ರವನ್ನು ಕಿಷ್ಕಿಂಧ ಲೋಕಸಭಾ ಕ್ಷೇತ್ರವನ್ನಾಗಿ ಮಾಡಿ, ಐತಿಹಾಸಿಕ ಇತಿಹಾಸವುಳ್ಳ ನಮ್ಮ ಕ್ಷೇತ್ರ, ವಾಲಿ, ಸುಗ್ರೀವ, ಕೇಸರಿ ನಂದಾ ಆಳಿದ ಕಿಷ್ಕಿಂಧ, ಹನುಮಂತ ಜನಿಸಿದ ಕಿಷ್ಕಿಂಧ, ಶಬರಿ ವಾಸವಿದ್ದ ಕಿಷ್ಕಿಂಧ, ದೇಶದ ಪಂಚ ಸರೋವರಗಳಲ್ಲಿ ಪಂಪಾ ಸರೋವರ ಕೂಡ ಹೊಂದಿರುವ ಕಿಷ್ಕಿಂಧ ಇವುಗಳೆಲ್ಲ ನಮ್ಮ ರಾಜ್ಯದಲ್ಲಿ ಇರುವುದು ಹೆಮ್ಮೆಯ ವಿಷಯ. ಕಿಷ್ಕಿಂಧ ರಾಮ, ಲಕ್ಷ್ಮಣ ಮತ್ತು ಸೀತಾ ಮಾತೆ ಭೇಟಿ ನೀಡಿರುವ ಐತಿಹಾಸಿಕ ಕಿಷ್ಕಿಂಧ, ಭೌಗೋಳಿಕವಾಗಿ, ಚಾರಿತ್ರಿಕವಾಗಿ, ಪೌರಾಣಿಕವಾಗಿ ಅತ್ಯಂತ ಮಹತ್ವ ಸ್ಥಳವಾಗಿದೆ. ಈ ಸ್ಥಳ ಅಂದೇ ರಾಮಾಯಣ ಕಾಲದಲ್ಲಿ ಕಿಷ್ಕಿಂಧೆ ಎಂದು, ವಾಲ್ಮೀಕಿ ರಾಮಾಯಣ ಕಾವ್ಯದಲ್ಲಿ ಉಲ್ಲೇಖವಾಗಿದೆ ಹಾಗೂ ಅಂದೇ ಕಿಷ್ಕಿಂಧಾ ರಾಜ್ಯವಾಗಿತ್ತು ಮತ್ತು ದೇಶದ ಎಲ್ಲಾ ರಾಜಮನೆತನಗಳು ಈ ಕ್ಷೇತ್ರಕ್ಕೆ ತಮ್ಮದೇ ಕೊಡುಗೆಯನ್ನು ನೀಡಿದ್ದಾರೆ ಅಲ್ಲದೇ ಅಯೋಧ್ಯೆಗೂ ಕಿಷ್ಕಿಂಧಾಕ್ಕೂ ಭಾವನಾತ್ಮಕ ಸಂಬಂಧವಿರುತ್ತದೆ. ಆದ್ದರಿಂದ ಎಲ್ಲರ ಒಪ್ಪಿಗೆಯಂತೆ ಅಯೋಧ್ಯೆಗೆ ಕೊಟ್ಟ ಪ್ರಾಮುಖ್ಯತೆಯನ್ನು ಈ ಕ್ಷೇತ್ರಕ್ಕೆ ಕೊಟ್ಟು, ಈ ಕ್ಷೇತ್ರವನ್ನು ಕಿಷ್ಕಿಂಧ ಎಂದು ಮರುನಾಮಕರಣಗೊಳಿಸಬೇಕೆಂದು ಮತ್ತು ಈ ದೇಶದಲ್ಲಿ ಒಂದು ಮಾದರಿ ಕ್ಷೇತ್ರವನ್ನಾಗಿಸಿ, ನಮ್ಮ ನಾಡಿಗೂ ಹೆಮ್ಮೆಯಾಗುತ್ತದೆ, ಪ್ರವಾಸೋಧ್ಯಮಕ್ಕೂ ಅನುಕೂಲವಾಗುತ್ತದೆ. ಈ ಮೂಲಕ 'ಕಿಷ್ಕಿಂಧ' ಎಂದು ಸುಗ್ರೀವನ ನಾಡಿಗೆ ಸುಗ್ರೀವಾಜ್ಞೆ ಹೊರಡಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಹಾಗೂ ನಮ್ಮ ದೇಶಕ್ಕೆ ಸುಗ್ರೀವಾಜ್ಞೆ ಗೊತ್ತು. ಆದರೆ ಕಿಷ್ಕಿಂಧ ದೊರೆ ಸುಗ್ರೀವನ ಬಗ್ಗೆ ತಿಳಿಯದಿರುವುದು ವಿಷಾದನೀಯ ಸಂಗತಿ. ಆದ್ದರಿಂದ ಸುಗ್ರೀವನ ಬಗ್ಗೆ ದೇಶ ಅಲ್ಲದೇ ಜಗತ್ತಿಗೆ ಸುಗ್ರೀವನ ಬಗ್ಗೆ ತಿಳಿಯಬೇಕಾದರೆ ಸುಗ್ರೀವನ ಪ್ರತಿಮೆ ಸ್ಥಾಪನೆ ಆಗಬೇಕು. ಸುಗ್ರೀವಾಜ್ಞೆಯನ್ನು ಘನತೆವೆತ್ತ ಭಾರತ ಸರ್ಕಾರ ತುರ್ತು ಸಂದರ್ಭದಲ್ಲಿ ಆದೇಶ ಹೊರಡಿಸುತ್ತದೆ, ಆದರೆ ಎಲ್ಲಾ ಆಜ್ಞೆಗಳಿಗೆ ದೊಡ್ಡ ಆಜ್ಞೆ ಎಂದರೆ ಸುಗ್ರೀವಾಜ್ಞೆ ಆಗಿದೆ. ಸರ್ಕಾರ ಮಹತ್ವದ ಕಾಯ್ದೆ ಕಾನೂನು ಜಾರಿಗೊಳಿಸುವ ಸಂದರ್ಭದಲ್ಲಿ ಸುಗ್ರೀವಾಜ್ಞೆ ಹೊರಡಿಸುತ್ತದೆ. ಈಗ ಸುಗ್ರೀವನ ಕೊಟ್ಟ ಆಜ್ಞೆ ನಮಗೆ ದೊಡ್ಡ ಕೊಡುಗೆ ಆಗಿದೆ. ಸುಗ್ರೀವನ ಆಡಳಿತ ನೇರನುಡಿ, ನಡತೆ, ವ್ಯಕ್ತಿತ್ವ ಎಲ್ಲವನ್ನು ಕಿಷ್ಕಿಂಧ ವಾನರರು ಸುಗ್ರೀವನ ಆಜ್ಞೆಯನ್ನು ಪಾಲಿಸುತ್ತಿದ್ದರು. ಆಗ ನಾವು ಕೂಡ ಸರ್ಕಾರದ ಮಹತ್ವ ನಿರ್ಣಯದಲ್ಲಿ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಆಜ್ಞೆಯನ್ನು ಪಾಲಿಸುತ್ತೇವೆ. ಆದ್ದ–ರಿಂದ ಸುಗ್ರೀವನ ಪ್ರತಿಮೆಯನ್ನು ಸುಪ್ರೀಮ್ ಕೋರ್ಟ್ ಮುಂದೆ, ಲೋಕಸಭೆಯ ಮುಂದೆ, ಎಲ್ಲಾ ರಾಜ್ಯಗಳ ಹೈಕೋರ್ಟ್‌ಗಳ ಮುಂದೆ, ವಿಧಾನಸಭೆಗಳ ಮುಂದೆ ಸ್ಥಾಪನೆ ಮಾಡಿ ರಾಷ್ಟ್ರದ ಪ್ರತಿಯೊಬ್ಬ ನಾಗ–ರಿಕನಿಗೂ ಸುಗ್ರೀವನ ಆಡಳಿತ ಮತ್ತು ಆಜ್ಞೆ ಮನವ–



ರಿಕೆ ಮಾಡಿಸಲು ಒತ್ತಾಯಿಸಿ ಇಂದು ಕೊಪ್ಪಳಕ್ಕೆ ಆಗಮಿಸಿದ್ದ ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರಿಗೆ ಗಂಗಾವತಿಯ ಕೇಂದ್ರೀಯ ವಿದ್ಯಾಲಯದ 5ನೇ ತರಗತಿ ವಿದ್ಯಾರ್ಥಿನಿ ಸಿಂಧು ಡಿ. ಮನವಿ ಪತ್ರ ಸಲ್ಲಿಸಿದಳು.

## ಕವಿತೆಯ ಮೂಲಕ ಕವಿ ಜೀವಂತ' ಡಾ.ಪ್ರಕಾಶ ಜಹಗೀರದಾರ್

ವಿಜಯಪುರ : 'ಕವಿಗೆ ಯಾವತ್ತು ಸಾವಿಲ್ಲ, ಭೌತಿಕವಾಗಿ ಕವಿ ನಮ್ಮೊಂದಿಗಿರದಿದ್ದರೂ ಅವರ ಸಾಹಿತ್ಯದಿಂದ ಅಜರಾಮರವಾಗಿರುತ್ತಾರೆ' ವಿಶ್ವನಾಥ ಹೇಳಿದರು. ರವಿವಾರ ದಿನಾಂಕ 16 ರಂದು ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ, ಸಮೀರ್ ಪ್ರಕಾಶನ ಕನಕಗಿರಿ ಹಾಗು ಪ್ರಗತಿ ಸಾಹಿತ್ಯ ವೇದಿಕೆ ವಿಜಯಪುರ ಇವರ ಸಹಯೋಗದಲ್ಲಿ ಹಟ್ಟಿ ಚಿನ್ನದ ಗಣಿಯ ಕ್ರೀಡಾ ಸಂಸ್ಥೆಯ ಆವರಣದಲ್ಲಿ ನಡೆದ , ದಿವಂಗತ ಕವಿ ರವಿ ಎಲ್.ವಾಯ್ ಯ 'ರವಿಯ ಕವಿತೆಗಳು' ಕವನಸಂಕಲನ ಲೋಕಾರ್ಪಣೆ ಮತ್ತು ರಾಜ್ಯಮಟ್ಟದ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಉದ್ಘಾಟನೆ ಮಾಡಿದ ವಿಶ್ವನಾಥ ಮಾತಾಡಿದರು.

'ಸುಲಭವಾಗಿ ಯಾವ ಕವಿತೆಗಳು ಮನಮುಟ್ಟುವುದಿಲ್ಲ ಆದರೆ ದಿವಂಗತ ರವಿಯ ಕವಿತೆಗಳು ಎಲ್ಲರ ಮನಮುಟ್ಟುವಂತೆ ಇವೆ , ಕವಿಯ ಕವಿಗೆ ಸಾವಿಲ್ಲ ಕವಿತೆ ಮೂಲಕ ಆತ ಜೀವಂತನಾಗಿರುತ್ತಾನೆ' ಎಂದು ಮುಖ್ಯಾ ಅತಿಥಿಗಳಾದ ವಿಜಯಪು–ರಿನ ಸಾಹಿತಿ ಡಾ.ಪ್ರಕಾಶ ಜಹಗೀರದಾರ್ ಹೇಳಿದರು.



ಕೃತಿ ಪರಿಚಯಿಸಿದ ಹಿರಿಯ ಸಾಹಿತಿ ಅಲ್ಲಾಗಿರಿರಾಜ 'ಸಾಹಿತ್ಯ ರಚನೆ ಅಷ್ಟು ಸುಲಭವಲ್ಲ ಭಾವನೆಗಳೊಂದಿಗೆ ಬೆರೆತು ಭಾವತುಂಬಿ ಬರೆದಾಗ ಓದುಗರ ಮನ ಮುಟ್ಟುತ್ತವೆ,ಇಂತಹ ಮನಮುಟ್ಟುವ ಕವಿತೆಗಳು ಈ ಸಂಕಲನದಲ್ಲಿವೆ ಎಂದು' ಅಭಿಪ್ರಾಯ ಪಟ್ಟರು.

ಪುಸ್ತಕ ಬಿಡುಗಡೆ ನಂತರ ಕವಿಗೋಷ್ಠಿ ಜರುಗಿ–ತು. ಕವಿತಾ ಎಲ್.ವೈ.ಸ್ವಾಗತಿಸಿದರು.ಶ್ರೀಹರಿ ದ್ರಾವಿಡ ಕಾರ್ಯಕ್ರಮ ನಿರೂಪಿಸಿದರು.ದೇವಿ ಬಳಗಾನೂರ ವಂದನಾರ್ಪಣೆ ಮಾಡಿದರು

**ವರದಿ – ಶ್ರೀರಂಗ ಪುರಾಣಿಕ ವಿಜಯಪುರ**

ಕರುನಾಡ ಕಂದ
ಸಂಪುಟ–1 । ಸಂಚಿಕೆ–3
ದಿನಾಂಕ: 1–12–2021 । ಪುಟಗಳು: 16

# ಶಾಲೆಯ ಸ್ಥಿತಿ ಆದೋ ಗತಿ



ಹೊನ್ನಾಳಿ:ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲೂಕಿನ ತ್ಯಾಗದಕಟ್ಟೆ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ದುಸ್ಥಿತಿ ಹೇಳಿದರೂ ಕೇಳುವ ಅಧಿಕಾರಿಗಳು ಯಾರೂ ಇಲ್ಲ ರಾಜಕೀಯ ಮುಖಂಡರು ಇಲ್ಲಾ ಹಲವು ಬಾರಿ ಶಾಲೆಯ ಸ್ಥಿತಿಯ ಬಗ್ಗೆ ಮಾಹಿತಿ ನೀಡಿದರೂ ಸಹ ಯಾವುದೇ ಪ್ರಯೋಜನವಾಗಿಲ್ಲ ಖಆಒಅ ಸದಸ್ಯರು ಹಾಗೂ ಶಿಕ್ಷಕರು ಶಾಲೆಯ ಬಗ್ಗೆ ಶಿಕ್ಷಣ ಇಲಾಖೆಗೆ ತಿಳಿಸಿದರು ಯಾವುದೇ ಪ್ರಯೋಜನವಾಗಿಲ್ಲ,

ಮಕ್ಕಳು ಶಾಲೆಯಲ್ಲಿ ಕೂತು ಪಾಠ ಕೇಳಲು ಭಯಗೂಳ್ಳುವ ಸ್ಥಿತಿ ನಿರ್ಮಾಣವಾಗಿದೆ.

ಶಾಲೆಯ ಮೆಲ್ಚಾವಣಿ ಕುಸಿಯುವ ಹಂತದಲ್ಲಿವೆ ಹಾಗೂ ಶೌಚಾಲಯದ ಮೇಲ್ಚಾವಣಿ ಇಲ್ಲದಿರುವುದು

ಈ ಬಗ್ಗೆ ಸರ್ಕಾರ ಎಚ್ಚೆತ್ತುಕೊಂಡು ಶಾಲೆಯ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನವನ್ನು ಆದಷ್ಟು ಬೇಗ ನೀಡಬೇಕಾಗಿ ತ್ಯಾಗದಕಟ್ಟೆ ಗ್ರಾಮಸ್ಥರು ಹಾಗೂ ಶಿಕ್ಷಕರು ಹಾಗೂ ಎಸ್ಡಿಎಂಸಿ ಸದಸ್ಯರು ಮನವಿ ಮಾಡಿಕೊಂಡರು.

# ಜಿಲ್ಲಾ ಶಸ್ತ್ರಚಿಕಿತ್ಸಕರು ಹುದ್ದೆಗೆ ಪ್ರಭಾರಿಯಾಗಿ ನಿಯೋಜನೆಗೊಂಡ ಡಾ॥ ಈಶ್ವರ ಸವಡಿಗೆ ತಾಲೂಕಿನ ಮುಖಂಡರಿಂದ ಸನ್ಮಾನ



ಗಂಗಾವತಿ: ಡಾ॥ ಈಶ್ವರ ಸವಡಿ ಅವರಲ್ಲಿರುವ ನಾಯಕತ್ವ ಗುಣ, ನಾಯಕನ ಕರ್ತವ್ಯ ನಿಷ್ಠೆ ಹಾಗೂ ಪ್ರಾಮಾಣಿಕತ್ವ, ಸಮಯಪ್ರಜ್ಞೆ, ತಾಳ್ಮೆ, ಲೌಕಿಕ ಗುಣವನ್ನು ಸ್ವೀಕರಿಸುವ ಮತ್ತು ಅರ್ಥೈಸಿಕೊಳ್ಳುವ, ಭವಿಷ್ಯತ್ತಿನ ಯೋಜನೆಗಳನ್ನು ಸಾಕಾರಗೊಳಿಸುವ, ಸರ್ಕಾರದ ಯೋಜನೆಗಳನ್ನು ಆರ್ಥಿಕ ಮತ್ತು ಭೌತಿಕ ಸದುಪಯೋಗಪಡಿಸಿಕೊಳ್ಳುವ ಗುಣ, ಕನಸು ಮತ್ತು ನನಸುಗಳ ನಡುವೆ, ಸಂಘರ್ಷದ ನಡುವೆ ಸಕಾರಾತ್ಮಕ, ಭಾವನಾತ್ಮಕ ಜಾರಿ ಮಾಡುವ ಗುಣ, ಚಾಣಾಕ್ಷತನ, ಚತುರರಾಗಿರುವ ಡಾ॥ ಈಶ್ವರ ಸವಡಿ ಅವರನ್ನು ಗುರುತಿಸಿ, ಕೊಪ್ಪಳ ಜಿಲ್ಲಾಡಳಿತವು ಕೊಪ್ಪಳ ಜಿಲ್ಲೆಯಲ್ಲಿ ಖಾಲಿ ಇರುವ ಜಿಲ್ಲಾ ಶಸ್ತ್ರ ಚಿಕಿತ್ಸಕರ ಹುದ್ದೆಯ ಪ್ರಭಾರವನ್ನು ಹೆಚ್ಚುವರಿಯಾಗಿ ವಹಿಸಿ ಮುಂದಿನ ಆದೇಶದವರೆಗೆ ಕಾರ್ಯನಿರ್ವಹಿಸಲು ನಿರ್ದೇಶಿಸಿದೆ. ಪ್ರಯುಕ್ತ ಡಾ॥ ಈಶ್ವರ ಸವಡಿಯವರಿಗೆ ಗಂಗಾವತಿ ನಗರದ ಹಾಗೂ ತಾಲೂಕಿನ ಹಲವು ಗ್ರಾಮಗಳ ಸಾರ್ವಜನಿಕರು ಸನ್ಮಾನ ಮಾಡಿದರು.



ಈ ಶುಭ ಸಂದರ್ಭದಲ್ಲಿ ಮಾತನಾಡಿದ ಗುತ್ತಿಗೆದಾರ ಎಂ. ರವಿಚಂದ್ರ ಮಾತನಾಡಿ, 2016–17 ರಲ್ಲಿ ನವೀಕರಣಗೊಂಡ ಆಸ್ಪತ್ರೆಗೆ ಮುಖ್ಯ ವೈದ್ಯಾಧಿಕಾರಿಗಳಾಗಿ ಆಗಮಿಸಿದ ಡಾ॥ ಈಶ್ವರ ಸವಡಿಯವರು ತಮ್ಮ ತನುಮನದಿಂದ ಆಸ್ಪತ್ರೆಯ ಅಭಿವೃದ್ಧಿಗಾಗಿ, ಸಮಸ್ತ ಆಸ್ಪತ್ರೆಯ ಎಲ್ಲಾ ವೈದ್ಯ ಸಿಬ್ಬಂದಿಗಳ ಆತ್ಮವಿಶ್ವಾಸವನ್ನು ಬೆಳೆಸುತ್ತಾ ಆಸ್ಪತ್ರೆಯ ಹೆಸರು ಇತಿಹಾಸದ ಪುಟದಲ್ಲಿ ಸೇರಬೇಕು ಎಂಬ ಸಂಕಲ್ಪದೊಂದಿಗೆ ತಮ್ಮ ಕಾರ್ಯಪ್ರವೃತ್ತಿಯಿಂದ ನಮ್ಮ ಉಪವಿಭಾಗ ಆಸ್ಪತ್ರೆಗೆ ಸತತವಾಗಿ 2017–18 ಮತ್ತು 2018–19 ನೇ ಸಾಲಿನಲ್ಲಿ ಸ್ವಚ್ಛತೆಯ ಪ್ರತೀಕವಾಗಿ ರಾಜ್ಯ ಸರ್ಕಾರದಿಂದ ಕಾಯಕಲ್ಪ ಪ್ರಶಸ್ತಿಯನ್ನು ದೊರಕಿಸಿಕೊಟ್ಟರು.

ಈ ಸಂದರ್ಭದಲ್ಲಿ ಸಮಾಜ ಸೇವಕ ನಾಗರಾಜ ಸಂಗಾಪುರ, ಹೇರೂರು ಗ್ರಾ.ಪಂ ಉಪಾಧ್ಯಕ್ಷರಾದ ರಾಜೇಶ್, ಪರಮಾನಂದ ರಾಂಪುರ, ಪ್ರೇಮ್ರಾಜ್ ಗಾಳೆಮ್ಮಕ್ಯಾಂಪ್, ಬಿ. ರವಿಕುಮಾರ, ಡಿ. ಸುರೇಶ, ಹಂಪೇಶ ಹರಿಗೋಲ, ಸುಧಾಕರ ಬಾಪಿರೆಡ್ಡಿಕ್ಯಾಂಪ್, ಪ್ರಕಾಶ ಚಂದ್ರಕರ್, ಬಿ. ತಿಮ್ಮಪ್ಪ, ಬಿ. ಯಂಕೋಬ, ಬಿ. ಬಂಡಾರಿ, ನವೀನ್, ಬಾಬು, ರಾಜು ಹಾಗೂ ಉಪವಿಭಾಗ ಆಸ್ಪತ್ರೆಯ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

# ಕಲಬುರಗಿ:ಚಿಂಚೋಳಿ ತಾಲೂಕಿನ ಚಂದಾಪೂರ ತಹಶೀಲ್ದಾರರ ಕಛೇರಿಗೆ ಚಿಂಚೋಳಿ ಕ್ರೈಸ್ತರ ಹಿತರಕ್ಷಣೆ ಮತ್ತು ಅಭಿವೃದ್ಧಿ ಸಂಘ (ರಿ)




ಮತಾಂತರ ನಿಷೇಧಕಾಯ್ದೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಆದೇಶಿಸಿರುವ ಕ್ರೈಸ್ತ ಸಮುದಾಯದ ಚರ್ಚುಗಳು ಮತ್ತು ಚಿಂಚೋಳಿ ಕ್ರೈಸ್ತ ಹಿತರಕ್ಷಣೆ ಮತ್ತು ಅಭಿವೃದ್ಧಿ ಸಂಘ (ರಿ) ಸಂಸ್ಥೆಗಳ ಗಣತಿಯ ಕುರಿತು ಚಿಂಚೋಳಿ ತಾಲೂಕ ತಹಶೀಲ್ದಾರರ ಅಂಜುಮ್ ತಬಸ್ಸುಮ್ ಅವರಿಂದ ಸನ್ಮಾನ್ಯ ಶ್ರೀ ಮುಖ್ಯಮಂತ್ರಿಗಳಿಗೆ ಮನವಿ ಪತ್ರ.

ರಾಜ್ಯದಲ್ಲಿ ಸರ್ಕಾರ ಜಾರಿಗೆತರಲಿಚ್ಛಿಸುವ 'ಮತಾಂತರ ನಿಷೇಧ ಕಾಯ್ದೆ'ಯನ್ನು ಜಾರಿಗೊಳಿಸಲು ಚಿಂತನೆ ನಡೆಸುತ್ತಿದೆ. ಇದಕ್ಕೆ ಕರ್ನಾಟಕದ ಸಮಸ್ತ ಕ್ರೈಸ್ತ ಸಮುದಾಯವು ಒಮ್ಮನಿಸಿನಿಂದ ವಿರೋಧಿಸುತ್ತದೆ. ಈಗಾಗಲೇ ನಮ್ಮ ಸಂವಿಧಾನವು ತನ್ನ ಪ್ರಜೆಗಳಿಗೆ ಯಾವುದೆ ಧರ್ಮವನ್ನು ಪ್ರತಿಪಾಧಿಸಲು, ಆಚರಿಸಲು ಮತ್ತು ಅದನ್ನು ಪ್ರಕಟಿಸಲು ಹಕ್ಕುಗಳನ್ನು ನೀಡಿದೆ. ಪರಿಚ್ಛೇದ 25 (ಧಾರ್ಮಿಕ ಸ್ವಾತಂತ್ರ್ಯದ ಹಕ್ಕು): ಇತರ ಮೂಲಭೂತ ಹಕ್ಕುಗಳಿ, ಸಾರ್ವಜನಿಕ ಸ್ವಾಸ್ಥ್ಯ ಹಾಗೂ ನೈತಿಕತೆ ಸಂರಕ್ಷಿಸಿ ಅಂತ:ಕಾರಣದ ಸ್ವಾತಂತ್ರ್ಯ ಮತ್ತು ಧರ್ಮವನ್ನು ಸ್ವೀಕರಿಸುವ, ಅನುಸರಿಸುವ ಮತ್ತು ಪ್ರತಿಪಾದಿಸುವ ಸ್ವಾತಂತ್ರ್ಯ ಪರಿಚ್ಛೇದ 26 (ಧರ್ಮ ಸಂಬಂಧಿ ವ್ಯವಸ್ಥೆ ನಿರ್ವಹಿಸುವ ಸ್ವಾತಂತ್ರ್ಯ): ಧಾರ್ಮಿಕ ಹಾಗೂ ಸೇವಾ ಕಾರ್ಯಾಗಳಿಗಾಗಿ ಸಂಸ್ಥೆಗಳನ್ನು ಸ್ಥಾಪಿಸಿ, ನಡೆಸಿಕೊಂಡು ಹೋಗುವುದು. ಹೀಗಿರುವಲ್ಲಿ ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆಯ ಅಗತ್ಯವಾದರೂ ಏನು? ಯಾವುದೋ ಒಂದೆರಡು ಘಟನೆಗಳನ್ನು ಆಧಾರವಾಗಿಟ್ಟುಕೊಂಡು, ಇಡೀ ಕ್ರೈಸ್ತ ಸಮುದಾವನ್ನು ದೂರುವುದು ಸರಿಯಲ್ಲ.

ಇನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ತನ್ನ ಸಭೆಯೊಂದರಲ್ಲಿ ರಾಜ್ಯದಲ್ಲಿನ ಕ್ರೈಸ್ತ ಸಮುದಾಯದ ಚರ್ಚುಗಳ ಮತ್ತು ಧಾರ್ಮಿಕ ಸಂಘ–ಸಂಸ್ಥೆಗಳ ಗಣತಿಯನ್ನು ನಡೆಸಬೇಕೆಂದು ಆದೇಶಿಸಿದೆ. ಈ ಗಣತಿಯ ಉದ್ದೇಶವಾದರೂ ಏನೂ? ಸರ್ಕಾರವು ಗಣತಿ ಮಾಡಬೇಕೆಂದರೆ ಮಾಡಲಿ. ಅದಕ್ಕೆ ನಮ್ಮ ಆಕ್ಷೇಪಣೆ ಇಲ್ಲ. ಆದರೆ ನಮ್ಮ ಸಮುದಾಯವನ್ನು ಮಾತ್ರ ಗುರಿಯಾಗಿಸಿ ಗಣತಿಯನ್ನು ನಡೆಸಲು ಆದೇಶಿಸಿರುವುದೇಕೆ? ಅದಲ್ಲದೆ, ನಮ್ಮ ಚರ್ಚುಗಳ ವಿವರಗಳೆಲ್ಲವೂ ಈಗಾಗಲೇ ಮೊದಲ ಜನಗಣತಿಯಿಂದ ಇಲ್ಲಿಯವರೆಗೂ ಸಹ ದೇಶದಲ್ಲಿ ಕ್ರೈಸ್ತ ಸಮುದಾಯದ ಜನಸಂಖ್ಯೆಯ ಅಂಕಿ ಅಂಶಗಳು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಬಳಿ ಇವೆ. ಭಾರತದ ದೊಡ್ಡ ಮಟ್ಟಿಗೆ ಮತಾಂತರ ನಡೆಯುತ್ತದೆ ಎಂದು ಆರೋಪಿಸುವವರು ಈ ಅಂಕಿ ಅಂಶಗಳನ್ನು ಒಮ್ಮೆ ಪರೀಶಿಲಿಸಿದರೆ ಎಲ್ಲರಿಗೂ ಸತ್ಯಾಂಶವು ಅರಿವಾಗುವುದು. ಮತಾಂತರವು ನಿಜವೇ ಆಗಿದ್ದರೆ, ನಮ್ಮ ಸಮುದಾಯದ ಸಂಖ್ಯೆ ಇಷ್ಟೊತ್ತಿಗೆ ಅಧಿಕವಾಗಿರಬೇಕಿತ್ತು. ಆದರೆ, ದೇಶದ ಸ್ವಾತಂತ್ರ್ಯದ ನಂತರವೂ ಸಹ ಜನಸಂಖ್ಯೆಯಲ್ಲಿ ನಮ್ಮ ಸಂಖ್ಯೆ ಕೇವಲ ಶೇ. 1.8 ರಷ್ಟು ಮಾತ್ರವಿದೆ.

ಇಂದು ನಮ್ಮ ರಾಜ್ಯ ಹಾಗೂ ರಾಷ್ಟ್ರದಲ್ಲಿ ಕ್ರೈಸ್ತ ಸಮುದಾಯವು ಸಾವಿರಾರು ಶಾಲಾ ಕಾಲೇಜುಗಳ ಮತ್ತು ಆಸ್ಪತ್ರೆಗಳ ಮೂಲಕ ತನ್ನ ನಿಸ್ವಾರ್ಥ ಸೇವೆಯನ್ನು ಮಾಡುತ್ತಿದೆ. ಇತಿಹಾಸದಲ್ಲಿ ಕ್ರೈಸ್ತ ಶಾಲಾ ಕಾಲೇಜುಗಳಲ್ಲಿ ಓದಿದವರು, ಅಥವಾ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡು ಕ್ರೈಸ್ತತರರಲ್ಲಿ ಯಾರಾದರೂ ಒಬ್ಬರು ತನ್ನನ್ನು ಮತಾಂತರಗೊಳಿಸಲಾಗಿಲ್ಲ.

ಈ ನಿಟ್ಟಿನಲ್ಲಿ ಮತಾಂತರ ನಿಷೇಧಕಾಯ್ದೆ ಎಂಬುದು ಜಾರಿಯಾದರೆ, ಅದು ಯಾವ ಒಳಿತನ್ನೂ ಮಾಡುವುದಿಲ್ಲ. ಮಾಡುವುದಿಲ್ಲ. ಆ ಕಾಯಿದೆ ಕೋಮುವಾದಿಗಳ ಕೈಗೆ ಸಿಕ್ಕಿ, ಅದನ್ನು ಅವರು ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯವೆಸಗಳು ಸಾಧ್ಯವಾಗಬಹುದು ಮತ್ತು ಆ ಮೂಲಕ ಸಮಾಜದಲ್ಲಿ ಶಾಂತಿಯನ್ನು ಕದಡಿಸಲು ಪ್ರಯತ್ನಿಸಬಹುದು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಈ ಮೇಲಿನ ಎಲ್ಲಾ ಕಾರಣಗಳಿಂದ ಸರ್ಕಾರದ ಹಿಂದುಳಿದ ವರ್ಗಗಳ ಇಲಾಖೆಯ ಶದೇಶವನ್ನು ಹಿಂಪಡೆಯಬೇಕೆಂದು ಹಾಗೂ ಮತಾಂತರ ನಿಷೇಧಕಾಯ್ದೆಯ ಜಾರಿಯ ಚಿಂತನೆಯನ್ನು ಕೈಬಿಡಬೇಕೆಂದು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಕಳಕಳಿಯಿಂದ ಕ್ರೈಸ್ತ ಸಮುದಾಯವು ವಿನಂತಿಸಿಕೋಳ್ಳುತ್ತಿದೆ.

ಈ ಸಂದರ್ಭದಲ್ಲಿ ಚಿಂಚೋಳಿ ತಾಲೂಕಿನ ತಹಶೀಲ್ದಾರರ ಅಂಜುಮ್ ತಬಸ್ಸುಮ್ ಅವರು ಮತ್ತು ಮಾದಿಗ ಸಮಾಜದ ಹೀರಿಯ ಮುಂಖಡರು ಗೋಪಾಲರಾವ ಕಟ್ಟಿಮನಿ, ಕರ್ನಾಟಕ ಕ್ರೈಸ್ತ ಹಿತ ರಕ್ಷಣ ಸಮೀತಿ ಸುರೇಶ ಬಳಂಕಾರ, ಹಾಗೂ ಚಿಂಚೋಳಿ ಕ್ರೈಸ್ತ ಹಿತರಕ್ಷಣೆ ಮತ್ತು ಅಭಿವೃದ್ಧಿ ಸಂಘದ ಅಧ್ಯಕ್ಷರಾದ ಪಾಸ್ಟರ್ ರಮೇಶ ಭಾಂಗ್ಯೆ, ಲೀಟ್ಲಫ್ಲವರ್ ಚರ್ಚ ಪಾಸ್ಟರ ಜಾರ್ಜ, ಪಾಸ್ಟರ ಚಂದ್ರಕಾಂತ ಖ.ಕ.ಅ, ಪಾಸ್ಟರ ಸುರೇಶ, ಪಾಸ್ಟರ ಫ್ರಭಾಕರ, ಪಾಸ್ಟರ ಕಮಲಕಾರ, ಪಾಸ್ಟರ ರಾಬರ್ಟ್, ಪಾಸ್ಟರ ನಾಗಪ್ಪಾ, ಪಾಸ್ಟರ ಲಕ್ಷ್ಮಣ, ಪಾಸ್ಟರ ಭೀಮರಾಮ, ಪಾಸ್ಟರ ಶಿವಪುತ್ರ, ಪಾಸ್ಟರ, ರಮೇಶ ಟಿ, ಪಾಸ್ಟರ ಪ್ರಭಾಕರ ರೆಡ್ಡಿ, ಪಾಸ್ಟರ ರಮೇಶ ಎಲ್, ಮತ್ತು ಎಲ್ಲಾ ಕ್ರೈಸ್ತ ಸಮುದಾಯದ ಮಾರುತಿ ನೀಮಾಹೋಸಳ್ಳಿ ಇವರು ಉಪಸ್ಥಿತರಿದ್ದರು.

# ದೇವಸ್ಥಾನ ಜೀರ್ಣೋದ್ಧಾರಕ್ಕೆ ಲಕ್ಷ ರೂಪಾಯಿ ಸಹಾಯಧನ

ಗಂಗಾವತಿ–ತಾಲೂಕಿನ ಹೊಸಳ್ಳಿ ಗ್ರಾಮದಲ್ಲಿರುವ ಮರಿಯಮ್ಮದೇವಿ ದೇವಸ್ಥಾನ ಜೀರ್ಣೋದ್ಧಾರಕ್ಕೆ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ 1 ಲಕ್ಷ ರೂಪಾಯಿ ಸಹಾಯಧನವನ್ನು ಶುಕ್ರವಾರ ನೀಡಲಾಯಿತು. ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಯೋಜನಾಧಿಕಾರಿ ಬಾಲಕೃಷ್ಣ ಮಾತನಾಡಿ, ಹೊಸಳ್ಳಿ ಗ್ರಾಮದಲ್ಲಿರುವ ಜನರು ಮರಿಯಮ್ಮದೇವಿ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಅರ್ಜಿಯನ್ನು ಸಲ್ಲಿಸಿದರು. ಅರ್ಜಿಯನ್ನು ಪರಿಶೀಲನೆ ನಡೆಸಿದ ವೀರೇಂದ್ರ ಹೆಗ್ಗಡೆಯವರು ಒಂದು ಲಕ್ಷ ರೂಪಾಯಿ ಸಹಾಯಧನವನ್ನು ನೀಡಿದ್ದಾರೆ. ಅದನ್ನು ದೇವಸ್ಥಾನದ ಸೇವಾ ಟ್ರಸ್ಟ್‌ಗೆ ವಿತರಣೆ ಮಾಡಲಾಗಿದ್ದು, ದೇವಸ್ಥಾನ ಟ್ರಸ್ಟ್ ಅವರು ದೇವಸ್ಥಾನದ ಜೀರ್ಣೋದ್ಧಾರಕ್ಕೆ ಮಾತ್ರ ಹಣ ಬಳಕೆ ಮಾಡಬೇಕು. ಯಾವುದೇ ಕಾರಣ–ಕ್ಕೂ ಹಣವನ್ನು ದುರ್ಬಳಕೆ ಮಾಡಿಕೊಳ್ಳಬಾರದು ಎಂದು ಹೇಳಿದರು. ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ





ತಾಲೂಕು ಮೇಲ್ವಿಚಾರಕಿ ಸವಿತಾ, ಪ್ರತಿನಿಧಿಗಳಾದ ಮ–ರಿಯಮ್ಮ, ಸುಮಿತ್ರಾ, ಹೊಸಳ್ಳಿ ಗ್ರಾಮದ ಮಾದಿಗ ಸಮಾಜದವರು ಹಾಗೂ ಇತರರಿದ್ದರು. ಕೆಪಿಎಲ್20ಸಿ–ಎಂ,01. ಗಂಗಾವತಿ ತಾಲೂಕಿನ ಹೊಸಳ್ಳಿ ಗ್ರಾಮದ ಮ–ರಿಯಮ್ಮದೇವಿ ದೇವಸ್ಥಾನ ಜೀರ್ಣೋದ್ಧಾರಕ್ಕೆ ಧರ್ಮಸ್ಥಳ ಸಂಸ್ಥೆಯ ವತಿಯಿಂದ 1 ಲಕ್ಷ ರೂಪಾಯಿ ಸಹಾಯಧನ ನೀಡಲಾಯಿತು.

ಕರುನಾಡ ಕಂದ
ಸಂಪುಟ–1 । ಸಂಚಿಕೆ–3
ದಿನಾಂಕ: 1–12–2021 । ಪುಟಗಳು: 16

# ಕೂಡ್ಲಿಗಿ:ಅಡಿಗೆ ಅನಿಲ ವಿತರಕರು ಜನರ ಜೀವ ಜೀವನದೊಂದಿಗೆ ಚೆಲ್ಲಾಟ–ಕರವೇ ಆರೋಪ




ವಿಜಯನಗರ ಜಿಲ್ಲೆ ಕೂಡ್ಲಿಗಿ ಪಟ್ಟಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಘಟಕದಿಂದ, ಅಡಿಗೆ ಅನಿಲವನ್ನು ಕಾಳಸಂತೆಯಲ್ಲಿ ಹಾಗೂ ನಿಗಧಿತ ದರಕ್ಕಿಂತ ಅತಿ ಹೆಚ್ಚು ಧರದಲ್ಲಿ ಮಾರಾಟದಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದು ತಾಲೂಕಾಡಳಿತಕ್ಕೆ ದೂರು ನೀಡಲಾಯಿತು.ಕರವೇ ಅಧ್ಯಕ್ಷ ಕಾಟೇರ ಹಾಲೇಶ ನೇತೃತ್ವದಲ್ಲಿ ವಿವಿದ ಸಂಘಟನೆಗಳ ಮುಖಂಡರು ಹಾಗೂ ಕರವೇ ಕಾಯಕರ್ತರು ತಹಶಿಲ್ದಾರರಾದ ಟಿ ಜಗಧೀಶರವ–ರಿಗೆ ಮನವಿ ಪತ್ರನೀಡಿದರು. ಈ ಸಂದರ್ಭದಲ್ಲಿ ಕಾಟೇರ ಹಾಲೇಶ ಮಾತನಾಡಿ,ಅನಿಲ ಸಿಲಿಂಡರ್ ಕಾಳಸಂತೆಯಲ್ಲಿ ಮಾರಾಟಮಾಡಲಾಗುತ್ತಿದೆ ಹಾಗೂ ನಿಗಧಿತ ದರಕ್ಕಿಂತ ಅತಿಹೆಚ್ಚು ಧರಕ್ಕೆ ಮಾರಾಟಮಾಡಲಾಗುತ್ತಿದೆ ಸಂಬಂಧಿಸಿದ ಇಲಾಖಾಧಿಕಾರಿಗಳು ಕ್ರಮ ಜರುಗಿಸಿಲ್ಲ ಎಂದು ದೂರಿದ್ದಾರೆ. ಪಟ್ಟಣ ಸೇರಿದಂತೆ ತಾಲೂಕಿನ ಬಹುತೇಕ ಗ್ರಾಮಗಳಲ್ಲಿ ಅನಿಶಿಕೃತವಾಗಿ ಅನಿಲ ತುಂಬಿದ ಸಿಲಿಂಡರ್ ಗಳನ್ನು ದಾಸ್ತಾನು ಮಾಡಲಾಗುತ್ತಿದೆ,ಈ ಮೂಲಕ ಜನರ ಜೀವದ ಜೊತೆ ಚೆಲ್ಲಾಟವಾಡಲಾಗುತ್ತಿದೆ ಎಂದು ಹೋರಾಟಗಾರರು ಆರೋಪಿಸಿದ್ದಾರೆ.ಅನಿಲ ಸಿಲಿಂಡರ್ ಅಕ್ರಮ ದಾಸ್ತಾನು ಮತ್ತು ಮಾರಾಟ ಸಾಗಾಣಿಕೆ ಪಟ್ಟಣ ಸೇರಿದಂತೆ ತಾಲೂಕಿನ ಬಹುತೇಕ ಗ್ರಾಮಗಳಲ್ಲಿ ಜರುಗುತ್ತಿದ್ದು, ಸಂಬಂಧಿಸಿದಂತೆ ಇಲಾಖಾಧಿಕಾರಿಗಳು ಬೆಧರು ಗೊಂಬೆಗಳಂತೆ ವರ್ತಿಸುತ್ತಿದ್ದಾರೆ ಎಂದು ಹಾಲೇಶ ದೂರಿದ್ದಾರೆ. ಅಡಿಗೆ ಅನಿಲ ಹೋಟೆಲ್ ಹಾಗೂ ಡಾಬಾ ಮತ್ತು ಖಾಸಗೀ ಯಾಗಿ ಬಳಕೆಗೆ ಮಾರಾಟ ಮಾಡಲಾಗುತ್ತಿದೆ,ಮೆನಗಳಲ್ಲಿ ಅಕ್ರಮವಾಗಿ ದಾಸ್ತಾನು ಮಾಡಲಾಗುತ್ತಿದೆ.ಅಕ್ರಮವಾಗಿ ಸಾಗಿಸಲಾಗುತ್ತಿದೆ ಹಾಗೂ ಕಾಳಸಂತೆಯಲ್ಲಿ ಮಾರಲಾಗುತ್ತಿದೆ ಎಂದು ಹೋರಾಟಗಾರರು ಆರೋಪಿಸಿದ್ದಾರೆ.

ಹಾಡು ಹಗಲೇ ಅನಿಲ ಸಿಲಿಂಡರ್ ಅಕ್ರಮ ಸಾಗಿಸುತ್ತಿದ್ದರೂ ಯಾರೂ ಕ್ರಮ ಜರುಗಿಸಲಾಗುತ್ತಿಲ್ಲ.ಈ ವಿಷಯದಲ್ಲಿ ಅವರು ಅಕ್ರಮ ಅನಿಲ ಸಿಲಿಂಡರ್ ದಾಸ್ತಾನು ಸಾಗಾಣಿಕೆ ಮಾರಾಟದಲ್ಲಿ ಜಾಣ ಕುರುಡುತನ ತೋರಿದ್ದು,ಈ ಮೂಲಕ ಅವರೂ ಈ ದಂಧೆಗೆ ಮೌನ ಸಮ್ಮತಿ ಸೂಚಿಸಿದ್ದಾರೆ ಅದನ್ನು ಪರೋಕ್ಷವಾಗಿ ಅವರು ಒಪ್ಪಿಕೊಂಡಂತಾಗಿದೆ ಎಂದು ಹೋರಾಟಗಾರರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪಟ್ಟಣ ಸೇರಿದಂತೆ ತಾಲೂಕಿನೆಲ್ಲೆಡೆಗಳಲ್ಲಿ ಗಲ್ಲಿ ಗಲ್ಲಿಗಳಲ್ಲಿ,ಅನಿಲ ತುಂಬಿರುವ ಸಿಲಿಂಡರ್ ಗಳನ್ನು ಎಗ್ಗಿಲ್ಲದೇ ಸಾಗಿಸಲಾಗುತ್ತಿದೆ ಮತ್ತು ಅಕ್ರಮವಾಗಿ ದಾಸ್ತಾನು ಮಾಡಲಾಗುತ್ತಿದೆ.ಯಾವುದೇ ಸುರಕ್ಷತಾ ಕ್ರಮಗಳನ್ನು ಪಾಲಿಸದೇ ದಾಸ್ತಾನು ಮಾಡಲಾಗುತ್ತಿದ್ದು,ಇದು ಬಲು ಅಪಾಯಕಾರಿಯಾದ ಅಕ್ರಮ ದಂಧೆಯಾಗಿದೆ ಇಂತಹವರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕಿದೆ ಎಂದು ದಲಿತ ಮುಖಂಡರಾದ ಗೆದ್ದಲಗಟ್ಟೆ ಹನುಮೇಶ ಒತ್ತಾಯಿಸಿದ್ದಾರೆ.ಮಾಜಿ ಸೈನಿಕ ರಮೇಶ ಸೇರಿದಂತೆ ತಾಲೂಕಿನ ವಿವಿದ ಭಾಗದ ವಿವಿದ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಬಿ.ಎಡ್ ಪರೀಕ್ಷೆಯಲ್ಲಿ ಹುಸೇನಬಿ 6ನೇ ರ‍್ಯಾಂಕ್



ಗಂಗಾವತಿ: ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ ಇವರು ಇತ್ತೀಚೆಗೆ ನಡೆಸಿದ ಬಿ.ಎಡ್ ಪರೀಕ್ಷೆಯಲ್ಲಿ ನಗರದ ಟಿ.ಎಂ.ಎ.ಇ ಸೊಸೈಟಿಯು ಬಿ.ಎಡ್ ಕಾಲೇಜಿನ ವಿದ್ಯಾರ್ಥಿಯಾದ ಹುಸೇನಬಿ ಅವರು 6ನೇ ರ‍್ಯಾಂಕ್ ಪಡೆದಿದ್ದು, ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶ್ರೀ ಶ್ರೀ ವರಸದ್ಯೋಜಾಶಿವಾಚಾರ್ಯ ಮಹಾಸ್ವಾಮಿಗಳು, ಕಾರ್ಯದರ್ಶಿಗಳಾದ ಟಿ.ಎಂ. ಚಂದ್ರಶೇಖರಯ್ಯ ಹಾಗೂ ಪ್ರಾಚಾರ್ಯರು/ಬೋಧಕ/ ಬೋಧಕೇತರ ವೃಂದದವರು ಮತ್ತು ಸ್ನೇಹಿತರು ವಿದ್ಯಾರ್ಥಿಗೆ ಅಭಿನಂದನೆ ಸಲ್ಲಿಸಿರುತ್ತಾರೆ.

# ‘ನವಿಲುಗರಿ’ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ



ಗದಗ.’ನವಿಲುಗರಿ’ ಸಾಹಿತ್ಯ ಸಾಂಸ್ಕೃತಿಕ ವೇದಿಕೆ(ರಿ)ಧಾರವಾಡ’ ಕರ್ನಾಟಕ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆಯ ಪ್ರಯುಕ್ತ ಧಾರವಾಡದಲ್ಲಿ ಹಮ್ಮಿಕೊಂಡಿರುವ ಕನ್ನಡ ಹಬ್ಬದ ಅಂಗವಾಗಿ ಕೊಡಮಾಡಲ್ಪಡುವ 2021ರ ರಾಜ್ಯೋತ್ಸವ ಪ್ರಶಸ್ತಿಗೆ ನೂರಾರು ಶಿಕ್ಷಣ ಸಂಸ್ಥೆಗಳ ಮೂಲಕ ಸಹಸ್ರಾರಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಜನಪದ ಕೂಗು ಶಿಕ್ಷಣ ನೀಡಿದ ಖ್ಯಾತ ಜನಪದ ಕಲಾವಿದ ಮುಂಡರಗಿ ತಾಲೂಕಿನ ಜಂತಲಿ ಶಿರೂರು ಗ್ರಾಮದ ಶ್ರೀ ಗವಿಶಿದ್ಧಯ್ಯ ಜ ಹಳ್ಳಿಕೇರಿಮಠ ರವರನ್ನು ಆಯ್ಕೆ ಮಾಡಲಾಗಿದೆ.

# ಮಾದಾಪುರ ಬಸ್ ತಡೆದು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಪ್ರತಿಭಟನೆ



ಹಾವೇರಿ ಜಿಲ್ಲೆ ರಟ್ಟಿಹಳ್ಳಿ ತಾಲೂಕಿನ ಗುಡ್ಡದ. ಮಾದಾಪುರ ಬಸ್ ತಡೆದು ದಿ–26–11–2021ರಂದು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಪ್ರತಿಭಟನೆ ಮಾಡಿದರು .ಪ್ರತಿನಿತ್ಯ ಸರಿಯಾದ ಸಮಯಕ್ಕೆ ಬಸ್ ಬಾರದಿರುವುದು ಮತ್ತು ಬಸ್ ಗಳು ತುಂಬಾ ರಶ್ ಆಗಿ ಹೆಚ್ಚಿನ ಪ್ರಯಾಣಿಕರು ಪ್ರಯಾಣಲಾಗುತ್ತಿಲ್ಲ ಮತ್ತು ಒಂದು ಬಸ್ಸಿನಿಂದ ಮತ್ತೊಂದು ನಡುವೆ 2:00 ಗಂಟೆಯ ಸಮಯದ ಅಂತರವಿದೆ ಆದಕಾರಣ ಸರಿಯಾಗಿ ಬರುವ ಹಾಗೆ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಮಾಸೂರು ನಿಂದ ಹೊನ್ನಾಳಿ ಗೆ ಹೋಗುವ ಬಸ್ ಮತ್ತು ಹೊನ್ನಾಳಿಯಿಂದ ಮಾಸೂರಿಗೆ ಬರುವ ಬಸ್ಸನ್ನು ತಡೆದು ಹಿರೇಕೆರೂರು ಡಿಪೋದ ಅಧಿಕಾ–ರಿಗಳ ಬರೋವರೆಗೂ ಬಸ್ ಬರದಿಲ್ಲ ಮತ್ತು ಅವರು ನಮ್ಮ ಕರಾರುಗಳಿಗೆ ಒಪ್ಪಿಕೊಳ್ಳುವ ವರೆಗೂ ಬಿಡುವುದಿಲ್ಲ ಎಂದು ಅಲ್ಲಿನ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಅನಿಸಿಕೆಯನ್ನು ವ್ಯಕ್ತಪಡಿಸಿದರು

# ಗ್ರಾಮ ಪಂಚಾಯ್ತಿ ವ್ಯಾಪ್ತಿಯ, ಹೊಸಕೇರಿ ಗ್ರಾಮದ ಅಂಬೇಡ್ಕರ್ ಕಾಲೋನಿಯ ದುಸ್ಥಿತಿ ಹೇಳತೀರದಾಗಿದೆ



ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕು ದಶಮಾಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಯ, ಹೊಸಕೇರಿ ಗ್ರಾಮದ ಅಂಬೇಡ್ಕರ್ ಕಾಲೋನಿಯ ದುಸ್ಥಿತಿ ಹೇಳತೀರದಾಗಿದೆ. ಇದು ಕೇವಲ ಇಲ್ಲಿಮಾತ್ರವಲ್ಲ ಗ್ರಾಮದ ಕೆಲ ಗಲ್ಲಿಗಳು ಕೂಡ ಇದೇ ದುಸ್ಥಿತಿಯಲ್ಲಿವೆ ಎನ್ನುತ್ತಾರೆ ಗ್ರಾಮಸ್ಥರು, ಇದು ಸುಮಾರು ನಾಲ್ಕು ವರ್ಷದ ಗೋಳಾಗಿದ್ದು ಗ್ರಾಮ ಪಂಚಾಯ್ತಿ ಅಧ್ಯಕ್ಷರ ವಾಸಸ್ಥಾನದಲ್ಲಿಯೇ,ಈ ದುರ್ಘತಿ ಎಂದರೆ ಊಹಿಸಿ ಗ್ರಾಮ ಪಂಚಾಯ್ತಿಯ ಕಾರ್ಯವೈಕರಿ ಎಂತಹದ್ದು. ಕೆಲ ಗ್ರಾಮಸ್ಥರು ಜನಪ್ರತಿನಿಧಿಗಳ ಪರ ವಕಾಲತ್ತು ವಹಿಸಿದರೆ ಹಲವರು ಅವರ ನಿರ್ಲಕ್ಷ್ಯ ಧೋರಣೆಗೆ ಕನ್ನಡಿ ಎಂದು ಆರೋಪಸಿದ್ದಾರೆ. ದಲಿತರ ಕೇರಿ ಎಂಬ ಕಾರಣಕ್ಕೆ ಶೋಷಿಸಲಾಗುತ್ತಿದೆ ಎಂಬ ಗಂಭೀರ ಆರೋಪ ಗ್ರಾಪಂ ಆಡಳಿತದ ಮೇಲಿದೆ, ನಾಲ್ಕ ವರ್ಷದಿಂದ ಬಗೆಹರಿಯದೇ ಇರೋ ಈ ಸಮಸ್ಯೆ ಆರೋಪಕ್ಕೆ ಪುಷ್ಠಿನೀಡುತ್ತಿದೆ.ಗ್ರಾಮದಲ್ಲಿ ನಿರ್ಮಿಸಿರುವ ಅವೈಜ್ಞಾನಿಕ ಚರಂಡಿ ನಿರ್ಮಾಣದಿಂದಾಗಿ ಈ ಸಮಸ್ಯೆ ತಲೆದೋರಿರುವುದಾಗಿ ಮೇಲ್ನೋಯಟಕ್ಕೆ ಸಾಬೀತಾಗಿದೆ,ಬಚ್ಚಲ ಮೋರಿ ನೀರು ಹಾಗೂ ಮನೆ ಬಳಕೆಯಿಂದಾಗುವ ತ್ಯಾಜ್ಯನೀರು ಬಚ್ಚಲ ನೀರು ರಸ್ಥೆಯಲ್ಲಿ ನಿಂತು. ಕೆಸರು ಗದ್ದೆಯಾಗಿ ಕೊಳೆತು ನಾರುತ್ತಿದೆ ದಲಿತ ಕಾಲೋನಿ ಗಬ್ಬೆದ್ದು ನಾರುತ್ತಿದೆ ಎಂದು ಕಾಲೋನಿ ಜನ ದೂರಿದ್ದಾರೆ.ತಾವು ವಾರಕ್ಕೊಮ್ಮೆ ಆಸ್ಪತ್ರೆಗೆ ಅಲೆದಾಡೋದು ಸಾಮಾನ್ಯವಾಗಿದ್ದು, ನಿತ್ಯ ನರಳುವಂತಾಗಿದೆ ಎಂದು ಕಾಲೋನಿಯವರು ತಮ್ಮ ಅಳಲು ತೋಡಿಕೊಂಡಿದ್ದಾರೆ. ನಾಗರೀಕ ಸಮಾಜ ನಾಚಿಕೆ ಪಡುವಂತಹ ಮನೋಭಾವದ





ಕೆಲ ಜನಪ್ರತಿನಿಧಿಗಳಿಂದಾಗಿ, ತಮ್ಮ ಬದುಕು ನಿತ್ಯ ನರಕದಲ್ಲಿದೆ ನರಳುವಂತಾಗಿದೆ ಕಾರಣ ಶೀಘ್ರವೇ ಹಗ–ರಿಬೊಮ್ಮನಹಳ್ಳಿ ತಾಪಂ ಕಾರ್ಯನಿರ್ವಹಣಾಧಿಕಾರಿ. ಅತೀ ಶೀಘ್ರವಾಗಿ ಸ್ಥಳಕ್ಕಾಗಮಿಸಿ ದುಸ್ಥಿತಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ, ನಿತ್ಯ ಕೊಳೆತ ಕೆಸರು ಗದ್ದೆಯ ಮಧ್ಯದಲ್ಲಿಯೇ ನಿತ್ಯ ವಾಸವಾಗಿದೆ ಗಲೀಜು ನೀರಿನಲ್ಲಿಯೇ ನಿತ್ಯ ನಡೆದಾಡಬೇಕಿದೆ, ನಾಲ್ಕು ವರ್ಷದಿಂದ ದುರ್ನಾಥ ನೀರಿನಲ್ಲಿ ಲ್ಲಿಯೇ ನಡೆದಾಡಬೇಕು ಬಚ್ಚಲ ಮೋರಿ ನೀರಿನೊಂದಿಗೆ ಜೀವನ ಸಾಗಿಸಬೇಕಿದೆ. ರಸ್ಥೆ ಪಾಚಿಯಿದ ಕೂಡಿದ್ದು ಹಲವು ಜನ ಬಿದ್ದು ಅಂಗಹೂನರಗಿದ್ದಾರೆ ಮತ್ತು ಆಸ್ಪತ್ರೆ ಸೇರಿದ್ದಾರೆ,ಬಚ್ಚಲ ಮೋರಿ ನೀರಿನಲ್ಲಿಯೇ ನಡೆದಾಡುವಂತಾಗಿದೆ. ರೋಗ ಖುಜನಿಗಳಿಂದ ಕಾಲೋನಿ ಜನ ನಿತ್ಯ ಆಸ್ಪತ್ರೆಗೆ ಅಲೆಯದಾಡುವಂತಾಗಿದೆ. ಇದು ಕೆಲ ಮೂರ್ಖ ಹಾಗೂ ಮೂಢ ಜನಪ್ರತಿನಿಧಿಗಳಿಂದ, ಹಾಗೂ ಗ್ರಾಪಂ ಭ್ರಷ್ಟ ಅಧಿಕಾರಿಯಿಂದ ದಲಿತರಿಗೆ ಆಗುತ್ತಿರುವ ಶೋಷಣೆಗೆ ಜೀವಂತ ಸಾಕ್ಷಿಯಾಗಿದೆ ಎಂದು ಕಾಲೋನಿ ಜನ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೆಲ ಮೂರ್ಖ ಮುಖಂಡರ ವಣ ಪ್ರತಿಷ್ಠೆಗೆ ತಮ್ಮ ನೆಮ್ಮದಿ ಹಾಳು ಮಾಡಲಾಗುತ್ತಿದೆ, ಅಧಿಕಾ–ರಿಗಳು ಶೀಘವೇ ಈ ನರಕದಿಂದ ತಮ್ಮನ್ನು ಮುಕ್ತ ಮಾಡಬೇಕಿದೆ ಮತ್ತು ನೈರ್ಮಲ್ಯತೆ ಕಾಪಾಡಬೇಕಿದೆ. ಮೂಲಭೂತ ಸೌಕರ್ಯಗಳನ್ನು ಕೂಡಲೇ ಸಮರ್ಪಕವಾಗಿ ಕಾಲೋನಿಗೆ ಒದಗಿಸಬೇಕೆಂದು, ಕಾಲೋನಿಯ ವಾಸಿಗಳು ಒತ್ತಾಯಿಸಿದ್ದಾರೆ ಈ ಮೂಲಕ ತಾಪಂ ಕಾರ್ಯನಿರ್ವಹಣಾಧಿಕಾ–ರಿಗೆ ಒತ್ತಾಯಿಸಿದ್ದಾರೆ.ನಿರ್ಲಕ್ಷ್ಯ ತೋರಿದ್ದಲ್ಲಿ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳಲ್ಲಿ,ಹಾಗೂ ಜಿಲ್ಲಾಪಂಚಾಯ್ತಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಲ್ಲಿ ದೂರು ನೀಡಲಾಗುವುದು. ಇದು ಕೇವಲ ಹೊಸಕೇರಿ ಗ್ರಾಮದಲ್ಲಿನ ದುರವಸ್ಥೆ ಮಾತ್ರವಲ್ಲ ಹಲವೆಡೆಯ ಗ್ರಾಮಗಳಲ್ಲಿನ ದಲಿತ ಕಾಲೋನಿಗಳ ಗೋಳಾಗಿದ್ದು, ಕೆಲ ಗ್ರಾಮ ಪಂಚಾಯ್ತಿ ಆಡಳಿತದಿಂದ ದಲಿತ ಕೇರಿಗಳನ್ನ ಕೆಲ ಮೂರ್ಖ ಜನಪ್ರತಿನಿಧಿಗಳು ಹಾಗೂ ಕೆಲ ಭಷ್ಟ ಹಾಗೂ ಮೂಢ ಗ್ರಾಪಂ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು,ದ್ಧಲಿತ ಕಾಲೋನಿಗಳನ್ನು ನಿಕೃಷ್ಟವಾಗಿ ಕಾಣುತ್ತಿದ್ದಾರೆ.ಹಲವೆಡೆ ಮೂಲಭೂತ ಸೌಕರ್ಯಗಳನ್ನು ಈವರೆಗೂ ಒದಗಿಸಿಲ್ಲ,ಅಂತಹ ನೀಚರ ವಿರುದ್ಧ ಶೀಘ್ರವೇ ಕಾನೂನು ಹೋರಾಟ ನಡೆಸಲಾಗುವುದೆಂದು ದಲಿತ ಮುಖಂಡರು ತಿಳಿಸಿದ್ದಾರೆ.ಜಿಲ್ಲಾಧಿಕಾರಿ ಹಾಗೂ *ಜಿಪಂ ಅಧಿಕಾರಿ ಕ್ರಮ ಕೈಗೊಳ್ಳಲಿ*– ಕಳೆದ ನಾಲ್ಕು ವರ್ಷದಿಂದ ದಲಿತ ಕಾಲೋನಿಯ ಜನರ ಜೀವ ಹಿಂಡುತ್ತಿರುವ ಈ ಸಮಸ್ಯೆಯನ್ನು, ತಾಪಂ ಅಧಿಕಾರಿಗಳು ಖುದ್ದಾಗಿ ಪರಿಹರಿಸಬೇಕಿದೆ.ಈ ನಿಟ್ಟಿನಲ್ಲಿ ಸಂಬಂಧಿಸಿದ ಜಿಲ್ಲಾ ಪಂಚಾಯ್ತಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,ವಸ್ಥುಸ್ಥಿತಿ ಅರಿತು ನಿರ್ಲಕ್ಷ್ಯ ಧೋರಣೆಯ ಗ್ರಾಪಂ ಅಧಿಕಾ–ರಿಯ ವಿರುದ್ಧ ಶಿಸ್ಥು ಕ್ರಮ ಜರುಗಿಸಬೇಕಿಸಬೇಕಿದೆ. ಜಿಲ್ಲಾಧಿಕಾರಿಗಳು ದಲಿತ ಕೇರಿಗಳ ಇಂತಹ ದುರಾವಸ್ಥೆಯನ್ನರಿತು ಅಗತ್ಯ ಕ್ರಮಗಳನ್ನು ಜರುಗಿಸಬೇಕಿದೆ, ಕೆಲ ಮೂಢ ಹಾಗೂ ಮೂರ್ಖ ಜನಪ್ರತಿನಿಧಿಗಳಿಗೆ ಮತ್ತು ಗ್ರಾಮ ಪಂಚಾಯ್ತಿ ಅಧಿಕಾ–ರಿಗಳಿಗೆ ಬುದ್ಧಿಕಲಿಸಬೇಕೆಂದು ದಲಿತ ಕೇರಿಯ ಜನತೆ ಈ ಮೂಲಕ ಜಿಲ್ಲಾಧಿಕಾರಿಯಲ್ಲಿ ಕೋರಿದ್ದಾರೆ.

ಕರುನಾಡ ಕಂದ
ಸಂಪುಟ–1 । ಸಂಚಿಕೆ–3
ದಿನಾಂಕ: 1–12–2021 । ಪುಟಗಳು: 16

# ಭಕ್ತಿ ಮುಕ್ತಿಯನ್ನು ಮೀರಿನಿಲ್ಲುವ ದೇವನಿಲಯ – ಸಂಸ್ಥಾನ ಶ್ರೀಗವಿಮಠ ಕೊಪ್ಪಳ



ಎರಡು ಸಾವಿರ ವರ್ಷಗಳಲ್ಲಿ ಅನೇಕ ಏಳುಬೀಳುಗಳನ್ನು ಕಂಡು ಕೊಪ್ಪಳದ ಹೆಸರನ್ನು ಇನ್ನೂ ಹಸಿರಾಗಿ ಉಳಿಸಿದ ಕೀರ್ತಿ ಮಠಕ್ಕೆ ಸಲ್ಲಿಸುತ್ತದೆ.ಶ್ರೀ ಮಠಕ್ಕೂ ಒಂದು ಸಾವಿರ ವರ್ಷದ ಇತಿಹಾಸವಿದೆ ಭವ್ಯ ಪರಂಪರೆಯಿದೆ, ಅಪಾರ ಶಿಷ್ಯ ಸಂಪತ್ತಿದೆ.ಈ ನಾಡಿನ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿರುವ ಗೌರವವಿದೆ. ಸರ್ವಧರ್ಮ ಸಮನ್ವತೆಯ ರಚಿಸುತ್ತಾ ಬಂದಿರುವ ದವಳಗಿರಿ ನಗರಕ್ಕೆ ಕಳಸಪ್ರಾಯವಾಗಿರುವುದೇ ಶ್ರೀಗವಿಮಠ..

ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಯಲ್ಲಿ ಮಠಮಾನ್ಯಗಳ ಕೊಡುಗೆ ಸ್ಮರಣೀಯ. ಅಸಮಾನತೆ,ಅಸ್ಪೃಶ್ಯತೆ ಹೋಗಲಾಡಿಸಲು ಮಠಗಳು ಅವಿರತವಾಗಿ ಕಾರ್ಯನಿರ್ವಹಿಸುತ್ತಿವೆ. ಶೈಕ್ಷಣಿಕ ಕ್ಷೇತ್ರದಲ್ಲಿ ಸರ್ಕಾರಕ್ಕೆ ಪರ್ಯಾಯವಾಗಿ ಕಾರ್ಯಗಳನ್ನು ಮಾಡುವುದರಲ್ಲಿ ಸಂಸ್ಥಾನ ಶ್ರೀ ಗವಿಮಠ ಒಂದಾಗಿದೆ. ಗವಿಮಠ ಭಕ್ತಿ ಶ್ರದ್ಧೆಯ ಸಹ್ಯಾದ್ರಿಯಾಗಿ ಮಾರ್ಪಟ್ಟಿದೆ. ತನ್ನ ಪರಂಪರೆಯುದ್ದಕ್ಕೂ ಯಾವುದೇ ವಿವಾದಗಳಿಗೆ ಸಿಲುಕದೆ ಮೇಲ್ಪಂಕ್ತಿಯನ್ನು ಕಾಪಾಡಿಕೊಂಡು ಬಂದಿದೆ ಜನಮಾನಸದಲ್ಲಿ ಉತ್ತುಂಗ ಸ್ಥಾನದಲ್ಲಿರುವ ಶ್ರೀಮಠವು ಖಾಸಗಿಯಾಗಿ ಸಾಕಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡುತ್ತಾ ಎಲ್ಲ–ರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾ ಬಂದಿದೆ.ನಿರಾವರಿ, ಅರಣ್ಯ, ಜಲಸಂರಕ್ಷಣೆ ಲಕ್ಷದೀಪೋತ್ಸವ ಮತ್ತು ಸಾಮಾಜಿಕ ಪಿಡುಗುಗಳಾದ ಬಾಲ್ಯವಿವಾಹ, ಮಾನಸಿಕ ಶಾಂತಿ ಮತ್ತು ಸದ್ಭಾವನಾ ಯಾತ್ರೆ ಮಾಡುತ್ತಾ ಬಂದಿರುವುದು ಶ್ರೀಗವಿಮಠದ ಹೆಮ್ಮೆಯ ವಿಷಯವಾಗಿದೆ.ಇದಲ್ಲದೆ ಅರಿವು,ಆಚಾರ, ಶೀಲ ಶಿಕ್ಷಣ,ಸಂಸ್ಕೃತಿ,ಸಂಸ್ಕಾರಗಳನ್ನು ನೀಡುತ್ತಾ ಬಂದಿರುವುದು. ಭಕ್ತ ದೇವನಿಗಾಗಿ ಕಾಯುವುದಿಲ್ಲ ದೇವನೇ ಭಕ್ತನ ಬರುವಿಕೆಗಾಗಿ ಕಾಯುವ ಭಕ್ತ ಮಂದಿರ ಶ್ರೀಗವಿಮಠ

ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಉತ್ತಮ ವಾಗ್ಮಿಗಳು, ಚಿಂತನಶೀಲರೂ,ಸೂಕ್ಷ್ಮಸಂವೇದಿಗಳು, ಪ್ರಗತಿಪರ ಧೋರಣೆ ಉಳ್ಳವರು ಮತ್ತು ಕ್ರಿಯಾಶೀಲತೆ ಉಳ್ಳವರಾದ ಅಭಿನವ ಶ್ರೀಗಳು ಶ್ರೀಮಠಕ್ಕೆಹೊಸ ಸ್ಪರ್ಶ ನೀಡಿ ಆಧುನಿಕ ಸಂದರ್ಭಕ್ಕೆ ತಕ್ಕಂತೆ ಅನುಗುಣವಾಗಿ ರೂಪಗೊಳ್ಳುತ್ತಿರುವ ಕಮ್ಮಟವನ್ನು ನಿರ್ಮಾಣ ಮಾಡಿ ಹೊಸತನ ಮತ್ತು ಆಕರ್ಷಣೀಯವಾಗಿ ಶ್ರೀಮಠವನ್ನು ಜೀರ್ಣೋದ್ಧಾರ ಮಾಡಿರುವುದು. ಬದುಕಲು ಅನ್ನ ಬಾಳಲು ಆರೋಗ್ಯ ಬೆಳೆಯಲು ಶಿಕ್ಷಣ ಮತ್ತು ಅಧ್ಯಾತ್ಮ ಇವುಗಳನ್ನು ನೀಡುವುದು ಅಭಿನವ ಶ್ರೀಗಳ ಸಂಕಲ್ಪವಾಗಿದೆ

ಶ್ರೀಮಠದಲ್ಲಿ ಭಕ್ತರ ಸಮ್ಮುಖದಲ್ಲಿ ಆಚಾರ–ವಿಚಾರ ಕಾರ್ಯಕ್ರಮದ ಮೂಲಕವಾಗಿ ಭಕ್ತ ಕೋಟಿಯಲ್ಲಿ ಅಸಂಖ್ಯಾತ ಜನರ ಬಾಳಿಗೆ ಬೆಳಕು ತುಂಬುವ ಸಾಧಕರಿಂದ ಉಪನ್ಯಾಸವನ್ನು ನೀಡುವ ಮೂಲಕವಾಗಿ ಜನರಲ್ಲಿ ಜಾಗೃತಿ ಮೂಡಿಸುತ್ತಿದೆ. ಶ್ರೀಮಠದ ಪ್ರತಿಯೊಂದು ಕಾರ್ಯವೂ ಸಮಾಜಮುಖಿಯಾಗಿ ಇರುವುದು ಇದಕ್ಕೆ ಸಾಕ್ಷಿ,

ಬಾಲ್ಯ ವಿವಾಹ ಜಾಗೃತಿ ಕಾರ್ಯಕ್ರಮ, ಜಲ ದೀಕ್ಷ ಸಮಾರಂಭ, ಸಂತೃಪ್ತ ಮನ ಸಮೃದ್ಧಿ ಜೀವನ ಕಾರ್ಯಕ್ರಮ, ಲಕ್ಷ ವೃಕ್ಷೋತ್ಸವ ಕಾರ್ಯಕ್ರಮ, ನೈಸರ್ಗಿಕ ಕೃಷಿ ತರಬೇತಿ ಕಾರ್ಯಗಾರ, ಉದ್ಯೋಗ ಮೇಳಮತ್ತು ಧಾರ್ಮಿಕ ಗೋಷ್ಠಿಗಳ ಜೊತೆಗೆ ವಿಭಿನ್ನ ಸಾಂಸ್ಕೃತಿಕ ವಾಗಿರುವಂತೆ ಸಂಸ್ಕೃತಿಗಳನ್ನು ಸಾಂಸ್ಕೃತಿಕ ವಾಗಿರುವ ಕಲೆ ಸಂಗೀತ ಸಾಹಿತ್ಯ ಪ್ರಭೇದಗಳನ್ನು ಪರಿಚಯಿಸುತ್ತಿರುವುದುಭಕ್ತಿಯ ಜೊತೆಗೆ ರಾಷ್ಟ್ರೀಯ ಭಕ್ತಿಯನ್ನು ಬೆಳೆಸುತ್ತಿರುವುದು ಶ್ರೀಮಠದ ಹೆಮ್ಮೆಯ ವಿಷಯವಾಗಿದೆ.

ಭಕ್ತರ ಮನ ಮತ್ತು ಮನೆಗಳಿಗೆ ತಲುಪಿಸಲು ಸದ್ಭಾವನಾ ಪಾದಯಾತ್ರೆ ಮತ್ತು ಆಧ್ಯಾತ್ಮ ಪ್ರವಚನದ ಮೂಲಕವಾಗಿ ಜನರಲ್ಲಿ ಜಾಗೃತಿಯನ್ನು ಮೂಡಿಸುವಂತದ್ದು ಮತ್ತು ಸಮಾಜದ ಮೌಢ್ಯತೆಗಳನ್ನು ಹೋಗಲಾಡಿಸಲು ಸಾಮರಸ್ಯವನ್ನು ಬೆಳೆಸುವ ಕೆಲಸವನ್ನು ಶ್ರೀಮಠದ ಮಾಡುತ್ತಿದೆ.ಸದ್ಭಾವನ ಯಾತ್ರೆಯಲ್ಲಿ ಜಾತಿ ಮತ–ಪಂಥ ಭೇದವಿಲ್ಲದೆ ಪ್ರತಿಯೊಬ್ಬರ ಮನೆಗಳಿಗೆ ಶ್ರೀಗಳು ಭೇಟಿ ನೀಡುವ ಮೂಲಕವಾಗಿ ಭಾವೈಕ್ಯತೆಯನ್ನು ಬೆಳೆಸುತ್ತಾ ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ಮೂಡಿಸುತ್ತಿದೆ.

ಮಾನವನ ಜೀವನದ ಕ್ರಮಗಳಲ್ಲಿ ಹಲವಾರು ಸಮಸ್ಯೆಗಳ ಜೊತೆಗೆ ಹಲವಾರು ವಿಭಿನ್ನವಾಗಿರುವ ಅಂಶಗಳು ಕೂಡ ಪ್ರಭಾವವಿರುತ್ತದೆ ಅದರಲ್ಲಿ ಕೋಪ, ಅಸೂಹೆ,ಜಿಗುಪ್ಸೆ,ಅಸಾಯಕತೆ ಇವುಗಳನ್ನು ಹೋಗಲಾಡಿಸಲು ಆಧ್ಯಾತ್ಮ ಪ್ರವಚನದ ಮೂಲಕವಾಗಿ




ಜನರಲ್ಲಿ ಆತ್ಮವಿಶ್ವಾಸವನ್ನು ಬೆಳೆಸುವ ಮೂಲಕ ತಮ್ಮ ಬಗ್ಗೆ ತಾವು ವಿಶ್ವಾಸದಿಂದ ಇರುವಂತೆ ಮತ್ತು ಕೆಲಸದಲ್ಲಿ ಹೆಚ್ಚು ಕ್ರಿಯಾಶೀಲರಾಗಿವಂತೆ ಶ್ರೀಗಳು ಮಾಡುತ್ತಿದ್ದಾರೆ.

ಶ್ರೀಮಠಕ್ಕೆ ಬರುವ ಪ್ರತಿಯೊಬ್ಬ ಭಕ್ತನಿಗೂ ಎಲ್ಲಾ ಸೌಲಭ್ಯಗಳು ಸಿಗುವಂತೆ ಶ್ರೀಮಠವನ್ನು ಸನ್ನದ್ಧ ಗೊಳಿಸಿದ್ದಾರೆ.ಆಧ್ಯಾತ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳಿಂದ ಶ್ರೀಮಂತವಾದ ಯೋಜನೆಗಳು ಮತ್ತು ಕಾರ್ಯಕ್ರಮಗಳ ಮೂಲಕ ಶ್ರೀಮಠದ ಚಿತ್ರಣದ ಜೊತೆಗೆ ಆಧ್ಯಾತ್ಮಿಕ ಸಿರಿಯನ್ನು ಸ್ವಾಮಿಗಳು ಸಮೃದ್ಧಗೊಳಿಸಿದ್ದಾರೆ. ಈ ಸಾಮರ್ಥ್ಯವನ್ನು ರಾಷ್ಟ್ರದ ಪ್ರಗತಿಗೆ ಮತ್ತು ವಿಶ್ವಶಾಂತಿಗಾಗಿ ಕರುಣಿಸುವುದು ಶ್ರೀ ಅಭಿನವ ಗವಿಸಿದ್ದೇಶ್ವರ ಆಶಯವಾಗಿದೆ.

ಪ್ರತಿವರ್ಷ ಜನವರಿ ತಿಂಗಳಲ್ಲಿ ನಡೆಯುವ ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವಕ್ಕೆ ಒಂದೊಂದು ಸಾಮಾಜಿಕ ಸಮಸ್ಯೆಗಳ ಕುರಿತಾದ ಜಾಗೃತಿ ಮತ್ತು ಕಳಕಳಿಯ ವಿಷಯದ ಕುರಿತು ಕಾರ್ಯಕ್ರಮಗಳನ್ನು ಮತ್ತು ಸಂಕಲ್ಪಗಳನ್ನು ಹಾಕಿಕೊಳ್ಳಲಾಗುತ್ತದೆ, ಬಾಲ್ಯವಿವಾಹ ತಡೆ ಜಾಗೃತಿ,ಜಲ ದೀಕ್ಷಿ ಸಮಾರಂಭ, ಸಶಕ್ತ ಮನಸ್ಸು ಸದೃಢ ದೇಹ, ಲಕ್ಷ ದೀಪೋತ್ಸವ ಕಾರ್ಯಕ್ರಮ, ಕೃಪಾದೃಷ್ಟಿ ಕಾರ್ಯಕ್ರಮ, ಕರೋನ ಮಹಾಮಾರಿಯ ಕಾರಣದಿಂದಾಗಿ 2021ರ ಜಾತ್ರೆಯನ್ನು ದೇಶದಲ್ಲಿಯೇ ಮಾದರಿಯಾಗಿ ಸರಳವಾಗಿ, ಮತ್ತು ಮೂರು ಸಂಕಲ್ಪಗಳ ಮೂಲಕವಾಗಿ ಜಾತ್ರೆಯನ್ನು ಆಚರಣೆ ಮಾಡಲಾಯಿತು, 300 ಎಕರೆ ಪ್ರದೇಶದಲ್ಲಿರುವ ಗಿನಿಗೆರ ಕೆರೆಯ ಪುನಶ್ಚೇತನ ಕಾರ್ಯಕ್ರಮ ಈ ಪುನಶ್ಚೇತನ ಕಾರ್ಯಕ್ರಮದಿಂದ ಕನಿಷ್ಠ 1 ಸಾವಿರ ಎಕರೆ ಪ್ರದೇಶಗಳಿಗೆ ಮತ್ತು ಕನಿಷ್ಠ 3000 ಬೋರ್ವೆಲ್ ಗಳಿಗೆ ನೀರಿನ ಅರಿವು ಹೆಚ್ಚಾಗಲು ಸಾಧ್ಯವಾಯಿತು, ಸರ್ಕಾರದ ಅನುದಾನದಲ್ಲಿ ದಾನಿಗಳ ಸಹಾಯದಿಂದ ಈ ಕೆರೆಯ ಸತ್ತ ಸಸಿಗಳನ್ನು ನೆಡುವುದರ ಮೂಲಕವಾಗಿ ಒಂದು ಸ್ಮಾರ್ಟ್ ಪಾರ್ಕ್ ಮತ್ತು ಸಸ್ಯಧಾಮ ತಯಾರಿಸಲು ನಿರ್ಧ–ರಿಸಲಾಯಿತು, ಮೂಲಭೂತ ಸೌಕರ್ಯಗಳಿಂದ ದೂರ ಇರುವ ಯಲಬುರ್ಗಾ ತಾಲೂಕಿನ ಅಡವಿಹಳ್ಳಿ ಗ್ರಾಮವನ್ನು ದತ್ತು ತೆಗೆದುಕೊಂಡು ಇಡೀ ಗ್ರಾಮವನ್ನು ಸಂಪೂರ್ಣ ಅಭಿವೃದ್ಧಿ ಮಾಡುವ ಯೋಜನೆಯನ್ನು ಸರ್ಕಾರ ಮತ್ತು ದಾನಿಗಳ ಸಹಾಯದಿಂದ ಮಾಡಲಾಯಿತು ಇಡೀ ದೇಶಕ್ಕೆ ಮಾದರಿಯಾಗುವ ರೀತಿಯಲ್ಲಿ ಎಲ್ಲಾ ಸೌಕರ್ಯಗಳು ಹಳ್ಳಿಗೆ ತಲುಪುವ ರೀತಿಯಲ್ಲಿ ಮಾದರಿ ಗ್ರಾಮವನ್ನು ಮಾಡಲು ಈ ಕಾರ್ಯವನ್ನು ಈಗಾಗಲೇ ಪ್ರಾರಂಭ ಮಾಡಲಾಗಿದೆ, ಹಿರೇಹಳ್ಳದ ಪುನಶ್ಚೇತನ ಕಾರ್ಯಕ್ರಮ, 25 ಕಿಲೋಮೀಟರ್ ಹ–ರಿಯುವ ಹಿರೇಹಳ್ಳದ ಪುನಶ್ಚೇತನ ಮತ್ತು ಹಳ್ಳದ ದಂಡೆಯ ಮೇಲೆ ಲಕ್ಷ ಸಸಿಗಳನ್ನು ನೆಡುವುದು,




ಸಾಂಕ್ರಾಮಿಕ ಕರೋನ ರೋಗದ ಸಂದರ್ಭದಲ್ಲಿ ಶ್ರೀಮಠದಿಂದಕೊಪ್ಪಳ ನಗರದ ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ಮತ್ತು ಕರೋನ ವಾರಿಯರ್ಸ್ ಆಗಿ ಕೆಲಸ ಮಾಡಿದ,ಪೊಲೀಸ್ ಇಲಾಖೆಯ ಸಿಬ್ಬಂದಿಗಳಿಗೆ ಮತ್ತು ವೈದ್ಯರುಗಳಿಗೆ ಮತ್ತು ವೈದ್ಯಕೀಯ ಸಿಬ್ಬಂದಿಗಳಿಗೆ ಪ್ರತಿದಿನ ಊಟವನ್ನ 3 ತಿಂಗಳವರೆಗೆ ಅನ್ನದಾನವನ್ನು ನೀಡಿದ್ದಾರೆ.ಜೊತೆಗೆ ಸರ್ಕಾರದ ನಿಯಮದಂತೆ ಶ್ರೀ ಗವಿಮಠದಲ್ಲಿ ಕರೋನ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ ಮತ್ತು ಪ್ರತಿವರ್ಷ ಜಾತ್ರೆಗೆ 6 ಲಕ್ಷ ಭಕ್ತರು ಪಾಲ್ಗೊಳ್ಳುತ್ತಿದ್ದರು ಆದರೆ ಕೋವಿಡ್ 19ಕಾರಣದಿಂದಾಗಿ ಸರ್ಕಾರದ ನಿಯಮಗಳ ಅನುಸಾರವಾಗಿ ಸರಳವಾಗಿ ಮತ್ತು ಪರಿಸರ ಸ್ನೇಹಿಯಾಗಿ ಆಚರಿಸಲು ನಿರ್ಧರಿಸಿರುವುದು ಮಾದರಿಯಾಗಿದೆ.

ಕರೋನವೈರಸ್ ಎರಡನೇ ಹಳೆಯ ಸಂದರ್ಭದಲ್ಲಿ ಇಡೀ ದೇಶವೇ ರಾಜ್ಯವೇ ಲಾಕ್ಡೌನ್ ಆಯಿತು ಆ ಸಂದರ್ಭದಲ್ಲಿ ಧಾರ್ಮಿಕ ಸ್ಥಳಗಳು ಬಂದು ಮಾಡಲಾಯಿತು. ಎರಡನೆಯ ಅಲೆಯ ಪ್ರಭಾವದಿಂದ ಕರೋನಾ ವಿಧವಾಗಿ ಹರಡಿ ಸಾವು–ನೋವುಗಳ ಸಂಖ್ಯೆ ಅಧಿಕ ಪ್ರಮಾಣದ ಲಾಯಿತು, ಎರಡನೇ ಅಲೆಯು ಅಲೆ ಯು ಆಕ್ಸಿಜನ ಕೊರತೆ ಸಾವಿನ ಪ್ರಮಾಣ ಹೆಚ್ಚಾಗಿರುವುದು ಆಸ್ಪತ್ರೆಗಳು ಸಿಗದಿರುವ ಪರಿಸ್ಥಿತಿ ರೋಗಿಗಳಿಗೆ ಚಿಕಿತ್ಸೆ ಸರಿಯಾದ ಸಮಯಕ್ಕೆ ಆಗದಿರುವುದು ಆರೋಗ್ಯಕ್ಕೆ ಸೌಲಭ್ಯಗಳು ಕನಿಷ್ಠ ಮಟ್ಟಕ್ಕೆ ಹೋಗಿರುವುದು ಹಲವಾರು ಸಮಸ್ಯೆಗಳು ಉಂಟಾದವು ಆ ಸಂದರ್ಭದಲ್ಲಿ ಧಾರ್ಮಿಕ ಕೇಂದ್ರಗಳು ಕರೋನಾ ರೋಗಿಗಳಿಗೆ ಆರೈಕೆ ಮಾಡಲು ಆರೈಕೆ ಕೇಂದ್ರಗಳನ್ನು ಪ್ರಾರಂಭಿಸಲು ಮೊಟ್ಟಮೊದಲಬಾರಿಗೆ ಸಂಸ್ಥಾನ ಶ್ರೀ ಗವಿಮಠದ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಪ್ರಾರಂಭಿಸಿದರು, 100 ಬೆಡ್ಡಿನ ಆಕ್ಸಿಜನ್ ಸೌಲಭ್ಯಗಳಿರುವ ಕರೋನಾ ಸೆಂಟರ್ ಕೇರ್, ಮತ್ತು ಎರಡುನೂರು ಬೆಡ್ ಗಳಿರುವ ಕರೋನಾ ರೋಗಿಗಳ ಆರೈಕೆ ಕೇಂದ್ರವನ್ನು ಪ್ರಾರಂಭಿಸಿ, ಅವರ ಆರೈಕೆಯನ್ನು ಸ್ವತಃ ಸ್ವಾಮಿಗಳು ಮತ್ತು ಶ್ರೀಮಠದ ಸಕಲ ಸಿಬ್ಬಂದಿ ಮಾನಸಿಕ ಮತ್ತು ದೈಹಿಕ ಸಾಮರ್ಥ್ಯವನ್ನು ಹೆಚ್ಚು ಗಳಿಸುವಂತೆ ಕಾರ್ಯಕ್ರಮಗಳನ್ನು ಪ್ರತಿನಿತ್ಯ ವಿಶೇಷವಾದ ಆಹಾರಗಳನ್ನು ಮತ್ತು ಸಂಪೂರ್ಣವಾಗಿ ಗುಣಮುಖವಾಗುವ ವಾತಾವರಣವನ್ನು ಸೃಷ್ಟಿ ಮಾಡಿ ಆರೈಕೆ ಕೇಂದ್ರಗಳಲ್ಲಿ ವಿಶೇಷ ವಾಗಿರುವಂತೆ ಯೋಜನೆಗಳನ್ನು ರೂಪಿಸಲಾಗಿತ್ತು ಅದರಿಂದ ಆರೈಕೆ ಕೇಂದ್ರಕ್ಕೆ ಬಂದಿರುವಂತಹ ಕರೋನವೈರಸ್ ಒಳಗಾಗಿರುವ ವ್ಯಕ್ತಿಗಳು ಸಂಪೂರ್ಣ ಗುಣಮುಖರಾಗಿ ಹೋಗಿದಾರಿ. ಇಂತಹ ಹತ್ತು ಹಲವಾರು ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಆ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸುವುದು ರಲ್ಲಿ ಸಂಸ್ಥಾನ ಶ್ರೀಗವಿಮಠದ ಒಂದು ಕೈ ಮುಂದೆ ಇದೆ. ಸಂಸ್ಥಾನ ಶ್ರೀ ಗವಿಮಠದ ಭಕ್ತರಿಂದ ಕಾಣಿಕೆಯನ್ನು ಮಾತ್ರ ತೆಗೆದುಕೊಳ್ಳುವುದಿಲ್ಲ ಸಾಕಾಣಿಕೆಯ ಜೊತೆ ಭಕ್ತರ ಸಮಸ್ಯೆಗಳನ್ನು ಭಕ್ತರ ಕಷ್ಟಗಳನ್ನು ಸ್ವೀಕರಿಸಿ ಭಕ್ತರ ಸಂಕಷ್ಟಗಳಿಗನುಗುಣವಾಗಿ ಯೋಜನೆಗಳನ್ನು ರೂಪಿಸಿ ಭಕ್ತರ ಮನಮುಟ್ಟುವ ಹಾಗೆ ಕೆಲಸ ಮಾಡಿ ಶಿಸ್ತುಬದ್ಧವಾಗಿ ಯೋಜನಾ ರೂಪದಲ್ಲಿ ಪೂರ್ಣಗೊಳಿಸುವುದು ಶ್ರೀಗವಿಮಠದ ಒಂದು ಹೆಮ್ಮೆಯ ಸಂಗತಿಯಾಗಿದೆ. ಇದರ ನೇತೃತ್ವವನ್ನು 18ನೇ ಪೀಠಾಧಿಪತಿಗಳಾರುವಂತಹ ಶ್ರೀಮಹಾ ನಿರಂಜನ ಪ್ರಣವ ಸ್ವರೂಪಿ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಎಲ್ಲಾ ಕಾರ್ಯದಲ್ಲಿ ಮುಂದೆನಿಂತು ಒಂದಿಷ್ಟು ಕಾರ್ಯಗಳನ್ನು ಸ್ವತಃ ತಾವೇ ಮಾಡಿ, ಉಳಿದವರಿಗೆ ಮಾದರಿಯಾಗಿದ್ದಾರೆ ಇಂಥ ಪೂಜ್ಯರನ್ನು ಪಡೆದಿರುವ ಅಂತದ್ದು ಕೊಪ್ಪಳ ಜನತೆಯ ಸೌಭಾಗ್ಯವಾಗಿದೆ.

**–ಶಿವನಗೌಡ ಪೊಲೀಸ್ ಪಾಟೀಲ್**
**ಉಪನ್ಯಾಸಕರು ಕೊಪ್ಪಳ**

## "ಸೂತ್ರ ಧಾರಿಯು ನೀನೆ ಭಗವಂತ'

ಕಲಿಯುಗದ ಕೂಪದೊಳಿಟ್ಟೆ
ನಲಿವಿನ ಕ್ಷಣಗಳಾಕೊಟ್ಟೆ //ಪ//
ನಾನು ನನ್ನದೆಂಬುದ ಕೊಟ್ಟು
ಆನು ತಾನುಗಳೊಳಗಿಟ್ಟು//ಅ.ಪ//
ಬ್ರಹ್ಮಾಂಡವೇ ನೀನು ದೇವ
ಬ್ರಹ್ಮಸ್ವರೂಪಿ ಸದಾನಿರ್ಭಾವ
ಆತ್ಮಬಲದಿ ಅರಿತೆ ಗುರು ಪಥವಾ
ಈ ಆತ್ಮಕೆ ನೀ ತಾನೆ ಜೀವಾ
ಕಳೆದು ಬಿಡು ಭವದ ಕೂಪ
ಅಳೆದಿಹೆ ನೀ ಎಲ್ಲರ ಪುಣ್ಯ ಪಾಪ
ಸೂತ್ರಧಾರಿಯು ನೀನೇ ಭಗವಂತ
ಪಾತ್ರಗಳಂತೆ ನಾವು ಅನವರತ
ಚಿನ್ಮಯ ರೂಪನಾದ ದೇವನೇ
ತನ್ಮಯನಾಗು ಕೇಳಿ ಈ ಪ್ರಾರ್ಥನೇ
ಜಗದ ಅಣುಕಣದಲಿ ತುಂಬಿರುವೆ
ಯುಗದ ಆದಿ ಅಂತ್ಯವ ಅರಿತಿರುವೆ
ಗೋಸಲ ಶ್ರೀಚೆನ್ನಬಸವೇಶ್ವರ

**–ಸಿಂದುಗುಬ್ಬಿ,ಶಿಕ್ಷಕಿ**
**ಸ. ಹಿ. ಪ್ರಾ. ಶಾಲೆ ಹಾಲ್ದೊಡ್ಡೇರಿ**
**ಶಿರಾ ತಾಲೂಕು**

ಕರುನಾಡ ಕಂದ
ಸಂಪುಟ–1 । ಸಂಚಿಕೆ–3
ದಿನಾಂಕ: 1–12–2021 । ಪುಟಗಳು: 16

# ನನ್ನ ಜೀವನದ ಮುದ್ದು ಅವಳು

ಸ್ನೇಹಿತರೆ ತಂಗಿ ಯಾರಿಗೆ ಇಷ್ಟ ಇಲ್ಲ ಹೇಳಿ ಅಪ್ಪ ಅಮ್ಮನಿಗೆ ಮುದ್ದಿನ ಮಗಳಾಗಿ ಅಕ್ಕಂದಿರಿಗೆ ತಂಗಿಯಾಗಿ ಅಣ್ಣನಿಗೆ ಪ್ರೀತಿಯ ಸ್ನೇಹಿತೆಯಾಗಿ ಜೊತೆಗಿರುವಳೇ ತಂಗಿ. ಅಂತಹ ತಂಗಿಯ ಬಗ್ಗೆ ಎಷ್ಟು ಹೇಳಿದರು ಕಡಿಮೆ. ಅಂತಹ ತಂಗಿ ಪರಿಚಯವಾಗಿದ್ದು ಕೆಲವು ತಿಂಗಳ ಹಿಂದೆ ಆದರೂ ಒಂದು ಕ್ಷಣವೂ ಬಿಟ್ಟಿರಲಾರದಂತಹ ಅಣ್ಣ ತಂಗಿ ನಾವಾಗಿದ್ದೇವೆ. ಆ ತಂಗಿ ಬೇರೇ ಯಾರು ಅಲ್ಲ ಅವಳು ನನ್ನ ಚಿಕ್ಕಪ್ಪನ ಮಗಳು.

ಅದೊಂದು ದಿನ ಅಕ್ಕನ ಫೋನ್ ಕೆಟ್ಟು ಹೋಗಿರುತ್ತದೆ ಅವಾಗ ಅಕ್ಕಾ ನನಗೆ ಕರೆ ಮಾಡಬೇಕೆಂದು ಆ ತಂಗಿಯ ಫೋನ್ ತೆಗೆದುಕೊಂಡು ಕರೆ ಮಾಡುತ್ತಾಳೆ ಆವಾಗ ನನ್ನ ಅಕ್ಕನ ಮದುವೆಯ ಸಂದರ್ಭ. ನನ್ನ ಹಾಗೂ ತಂಗಿಯ ಪರಿಚಯವಾಗಿದ್ದು ಆ ಒಂದು ಚಿಕ್ಕ ಫೋನ್ ಕಾರಣವಾಯಿತು. ಫೋನಿಗೆ ಒಂದು ಥ್ಯಾಂಕ್ಸ್ ಹೇಳಲೇಬೇಕು.

ಅವಾಗ್ ನನಗೆ ಅತೀ ಅಪರೂಪ ಎನ್ನುವಂತೆ ಪರಿಚಯ ಆದವಳೇ ನನ್ನ ಮುದ್ದು ಪೆದ್ದು ತರ್ಲೆ ತುಂಟಾಟದ ಮುದ್ದು ಮಾತಾಗಳನ್ನಾಡುವ ಮುಗ್ಧ ಮನಸಿನ ನನ್ನ ಮುದ್ದು ತಂಗಿ. ಅವಳು ನನ್ನ ಚಿಕ್ಕಪ್ಪನ ಕೊನೆಯ ಹಾಗೂ ಮೂರನೇಯ ಮಗಳು. ಚಿಕ್ಕವಳಾಗಿದ್ದರಿಂದ ಇವಳನ್ನು ಎಲ್ಲರು ಅತೀ ಪ್ರೀತಿಯಿಂದ ಕಾಣುತ್ತಿದ್ದರು.

ಇವಳೇ ನನ್ನ ಚಿಕ್ಕಪ್ಪನ ಮಗಳು ಎಂದು ಗೊತ್ತಿದ್ದರೂ ಕೂಡ ಅವಳನ್ನು ಹೆಚ್ಚು ಮಾತನಾಡಿಸುತ್ತಿರಲಿಲ್ಲ ಗೊತ್ತಿದ್ದರೂ ಕೂಡ ಯಾರೋ ಎಂಬಂತೆ ಇರುತ್ತಿದ್ದೆ. ಅವಳು ನನಗೆ ಗೊತ್ತಿದ್ದರೂ ನಾನು ಯಾರು ಎಂದು ನನ್ನ ತಂಗಿಗೆ ಗೊತ್ತಿರಲಿಲ್ಲ. ಯಾಕೆಂದರೆ ಪರಿಚಯ ಇರದ ಕಾಲವದು. ಅವಳೊಂದು ಕಡೆಗೆ ನಾನೊಂದು ಕಡೆಗೆ ಇದ್ದೆವು. ಅದೃಷ್ಟ ಅವಳು ನನಗೆ ಸಿಕ್ಕಿದ್ದು. ನಾವು ಪರಿಚವಾಗಿದ್ದು ಅಕ್ಕನ ಮದುವೆಯ ಸಂದರ್ಭದಲ್ಲಿ. ಅವಳು ನನಗೆ ಸಿಕ್ಕಿದ್ದು ಯಾವ ಜನ್ಮದ ಪುಣ್ಯವೋ ಏನೋ ನನಗೆ ಅಕ್ಕಂದಿರು ಇದ್ದರು ಕೂಡ ತರ್ಲೆ ತುಂಟಾಟದ ತಂಗಿಯ ಸ್ಥಾನವನ್ನು ತುಂಬಿ ಅಣ್ಣ ಎಂಬ ಹೆಮ್ಮೆ ಬರುವಂತೆ ಮಾಡಿದವಳು ಆ ನನ್ನ ಮುದ್ದು ತಂಗಿ .

ಅದೆಷ್ಟೋ ಸಾರಿ ನಾನು ಜಿಗುಪ್ಸೆಗೊಂಡಾಗ, ಬೇರೆಯವರ ಮಾತುಗಳಿಂದ ನಾನು ಬೇಜಾರಾದಾಗ, ಎಲ್ಲ ವಿಷಯವನ್ನು ಯಾರ ಬಳಿಯೂ ಹೇಳದೆ ಇರುವಂತಹ ವಿಷಯಗಳನ್ನು ನನ್ನ ಮುದ್ದು ತಂಗಿ ಮುಂದೆ ಹೇಳುತ್ತೇನೆ. ನನ್ನ ತಂಗಿ ತನಗೆ ತಿಳಿದ ಮಟ್ಟಿನಲ್ಲಿ ಸರಿಯೋ ತಪ್ಪೋ ಸಮಾಧಾನ ಮಾಡುತ್ತಾಳೆ. ಅವಳ ಮುಗ್ಧ ಮಾತುಗಳನ್ನು ಕೇಳಿ ನಾನು ಸಂತೋಷ ಪಡುತ್ತೇನೆ. ತಂಗಿಯ ಮಾತುಗಳನ್ನು ಕೇಳುತ್ತಿದ್ದರೆ ನನಗೆ ಬದುಕೇ ಬೇಡ ಅನಿಸಿದರೂ ಬದುಕುಬೇಕು ಎಂದು ಆಸೆ ಆಗುತ್ತದೆ.ಯಾರಿಗಾಗಿ ಅಲ್ಲದಿದ್ದರೂ ನನಗಾಗಿ ನನ್ನ ತಂಗಿಗಾಗಿ.

ಪ್ರತಿದಿನವೂ ನನ್ನ ತಂಗಿ ಫೋನ್ ಇಂದ ಸಂದೇಶ ಕರೆ ಬರದೇ ಹೋದರೆ ಏನೋ ಕಳೆದುಕೊಂಡಂತೆ ಭಾಸವಾಗುತ್ತದೆ.

ಅಂತ ಮುದ್ದು ತಂಗಿ ನನ್ನ ಜೊತೆ ಇರೋವರೆಗೂ ನನಗೆ ಯಾವ ಭಯವು ಇಲ್ಲ.ಏಕೆಂದರೆ ನನಗೆ ಸ್ಫೂರ್ತಿಯು ಅವಳೇ ಶಕ್ತಿಯು ಅವಳೇ. ಅದೇ ರೀತಿ ನನ್ನ ಹುಟ್ಟುಹಬ್ಬದ ಹಬ್ಬಕ್ಕೆ ಶುಭಾಶಯ ಕೋರಿದಾಗ ನನಗೆ ಎಲ್ಲಿಲ್ಲದ ಸಂತೋಷ. ಮತ್ತೆ ಅಣ್ಣ ತಂಗಿ ಸಂಬಂಧವನ್ನು ಬೆಸೆಯುವ ಹಬ್ಬ ರಕ್ಷಾ ಬಂಧನದ ಶುಭಾಶಯ ಕೋರಿ ನನಗೆ ರಾಕೀ ಕಳುಹಿಸಿ, ಅಕ್ಷತೆಯ ಕಾಳುಗಳೊಂದಿಗೆ ಹಾರೈಸಿದ ನನ್ನ ಮುದ್ದು ತಂಗಿಗೆ ನಾ ಸದಾಕಾಲ ಚಿರಋಣಿ..

ಅವಳಿಗಾಗಿ ಏನು ಬೇಕಾದರೂ ಮಾಡಬಲ್ಲೆ. ನನ್ನ ತಂಗಿಯ ಜೊತೆ ಜಗಳ ಆಡ್ತೀನಿ, ಕೋಪ ಮಾಡ್ಕೋತೀನಿ, ಮುದ್ದು ಮಾಡ್ತೀನಿ, ಕೊನೆಗೆ ನಾನೆ ಕ್ಷಮೇ ಕೇಳ್ತೀನಿ. ಅವಳು ಕೂಡ ನಂಗೆ ಅಷ್ಟೇ ಕಾಟ ಕೊಡ್ತಾಳೆ. ಆದರೆ ಆ ಕಾಟದಲ್ಲೂ ಖುಷಿಯಾಗಿ ಇರ್ತೀನಿ. ಅಂತ ಮುದ್ದು ತಂಗಿ ಬಗ್ಗೆ ಬರೆಯಲು ಕುಳಿತರೆ ಶಬ್ದಮಣಿ ದರ್ಪಣ ಸಾಲದು.

ಮುದ್ದು ಪೆದ್ದು ಮತಗಳನ್ನಾಡುವ ಅರಗಿಣಿ, ಅಣ್ಣನ ಶುದ್ಧ ಜವಾಬ್ದಾರಿಗಳ ಮಹಾರಾಣಿ, ಅಣ್ಣ ಕಾಯುತಿರುವನು ಆ ಮುದ್ದು ಬಂಗಾರಿಯ ನಗುವಿಗಾಗಿ, ಆ ತಂಗಿಯಲ್ಲಿ ತನ್ನ ತಾಯಿಯಾ ಪ್ರತಿ–ರೂಪ ಕಾಣುವಿಕೆಗಾಗಿ,

ಪದಗಳು ಸಾಲುತ್ತಿಲ್ಲ ಹೇಳಲು ಅವಳ ಮಾತನ್ನು, ಮುದ್ದು ಮಾತುಗಳ ಶುದ್ಧ ಪ್ರೀತಿಯಿಂದ ಮನೆ ಮಾಡಿಹಳು ಅಣ್ಣನ ಮನಸಿನ ತುಂಬಾ.

ಅಣ್ಣನೆಂದು ಈ ದಿನ ಈ ಪದವಿಯ ಕೊಟ್ಟ ಆ ದೇವರಿಗೊಂದು ನಮನ, ಪೆದ್ದು ತಂಗಿಯ ಮುದ್ದು ಪ್ರೀತಿಗೆ ಶಿರಬಾಗವೇ ಪ್ರತಿದಿನ, ಪ್ರತಿಕ್ಷಣ.

**–ಕುಮಾರೇಂದ್ರ ಎಸ್ ರಡ್ಡೇರಟ್ಟಿ.**
**(ಬೆಳಗಾವಿ, ಖಾನಟ್ಟಿ)**



ರಾಮನಗರ ಜಿಲ್ಲೆಯ ಹೊಂಬೇಗೌಡನದೊಡ್ಡಿ ಗ್ರಾಮದ ಕೂಟಗಲ್ ಹೋಬಳಿಯ ರಸ್ತೆಯು ಕಳಪೆ ಕಾಮಗಾರಿಯಿಂದ ಆಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕಾಗಿ ವಿನಂತಿ.

# ಭೂ ಮಾಪನ ಕಚೇರಿಯಲ್ಲಿ ಅಧಿಕಾರಿಯ ಅಪರೂಪದ ಹಾಜರಿ!



ಬೀದರ್ ಜಿಲ್ಲೆಯ ಔರಾದ ತಾಲೂಕಿನ ಭೂ ಮಾಪನ ಇಲಾಖೆ ಅಧಿಕಾರಿಗಳು ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸದೆ ಕರ್ತವ್ಯ ಲೋಪ ಎಸಗುತ್ತಿದ್ದಾರೆ ಎಂದು ಆರೋಪಗಳು ಕೇಳಿ ಬರುತ್ತಿವೆ

ಕಚೇರಿ ಸಹಾಯಕ ನಿರ್ದೇಶಕಿ ರಾಜಶ್ರೀ ಸಮಯಕ್ಕೆ ಸರಿಯಾಗಿ ಕಚೇರಿಗೆ ಬರುತ್ತಿಲ್ಲ ಮೋಬೈಲ ಕರೆಗೂ ಸ್ಪಂದಿಸುತ್ತಿಲ್ಲ ಎಂದು ಸಾರ್ವಜನಿಕರು ಅಸಮಾಧಾನ ಹೊರಹಾಕುತ್ತಿದ್ದಾರೆ

ಜಿಲ್ಲಾ ಉಸ್ತುವಾರಿ ಸಚಿವ ಪ್ರಭು ಚೌಹಾಣ ತವರು ಕ್ಷೇತ್ರವಾದ ಔರಾದನಲ್ಲಿ ಅಧಿಕಾ–ರಿಗಳನ್ನು ಕೇಳುವವರೇ ಇಲ್ಲದಂತಾಗಿದೇ ಸರ್ಕಾರ ಸಾಕಷ್ಟು ಹೋಸ ಹೊಸ ಯೋಜನೆಗಳನ್ನು ಜಾರಿಗೆ ತಂದರೂ ಅಧಿಕಾರಿಗಳ ಅಸಡ್ಡೆಯಿಂದಾಗಿ ಯಾವದು ಜಾರಿಗೇ ಬರುತ್ತಿಲ್ಲ

ಭೂಮಿ ಖರೀದಿ ಮಾಡಬೇಕಾದರೆ ಭೂ ಮಾಪನ ಅಧಿಕಾರಿಗಳ ಪಾತ್ರ ಮುಖ್ಯ ಇಂಥ ಸಮಯದಲ್ಲಿ ಅಧಿಕಾರಿಗಳು ಸಕಾಲಕ್ಕೆ ಕೇಲಸ ಮಾಡದಿದ್ದರೆ ಹೇಗೇ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು

ವರದಿ..

**–ಸುಧೀರ ಕುಮಾರ ಬಿ ಪಾಂಡರೇ**

# ಸ್ವಚ್ಛತೆ ಇಲ್ಲದ ಎ ಪಿ ಎಂ ಸಿ ಬಸ್ ನಿಲ್ದಾಣ





ಔರಾದ: ಪಟ್ಟಣದ ಕನ್ನಡಾಂಬೆ ವೃತ್ತದ ಬಸ್ ನಿಲ್ದಾಣ ಈಗ ಕುಡುಕರ ನಿಲ್ದಾಣವಾಗಿ ಮಾರ್ಪಟ್ಟಿದೆ ಸ್ವಚ್ಛತೆ ಇಲ್ಲದೆ ಗಬ್ಬು ವಾಸನೆಯಿಂದ ಪ್ರಯಾಣಿಕರು ಮೂಗು ಮುಚ್ಚಿಕೊಂಡು ನಿಲ್ಲುವಂತ ಪರಿಸ್ಥಿತಿ ನಿರ್ಮಾಣವಾಗಿದೆ ಈ ವಿಷಯದ ಬಗ್ಗೆ ಪಟ್ಟಣ ಪಂಚಾಯತ ಅಧಿಕಾರಿಗಳ ಗಮನಕ್ಕೆ ತಂದರೂ ಅವರಿಗೆ ಈ ಕಡೆ ಗಮನ ಹರಿಸಲು ಸಮಯ ಸಿಗುತ್ತಿಲ್ಲವೇನೋ? ಅನಿಸುತ್ತದೆ.ಇನ್ನಾದರೂ

ಕೂಡಲೇ ಬಸ್ ನಿಲ್ದಾಣ ಸ್ವಚ್ಛಗೊಳಿಸಿ ಪ್ರಯಾಣಿಕರಿಗೆ ನಿಲ್ಲುವ ವ್ಯವಸ್ಥೆ ಮಾಡಿಕೊಡಬೇಕು ಎನ್ನುವುದು ಸಾರ್ವಜನಿಕ ಆಗ್ರಹ.

## ಅನ್ಯಾಯಕ್ಕೊಂದು ನ್ಯಾಯ

ಇಂದಿಗೂ ಅಚ್ಚಳಿಯದೆ ಕುಂತಿದೆ,
ಆ ನಿನ್ನ ಚಹರೆಯ ರೂಪ.
ಇಂದಿಗೂ ಮನಸ್ಸು ಮರುಗುತ್ತಿದೆ,
ನೀ ಸಿಗದಿದ್ದರೂ ಬೇಕೆಂದು.
ಅಂದು ತೋಳಿನ ತೆಕ್ಕೆಯ ಬಂಧನದ,
ಶಾಖ ಇಂದಿಗೂ ಸುಡುತ್ತಿದೆ.
ನಿನ್ನ ನೆನಪಿನ ಸರಮಾಲೆ ಸಜ್ಜಾಗಿ ಕಾಯುತ್ತಿವೆ,
ಬಡ ಜೀವಕ್ಕೆ ಮುತ್ತಿಗೆ ಹಾಕಲೆಂದು.
ಕಳೆದ ದಿನಗಳೆಲ್ಲ ಕಣ್ಣ ಮುಂದೆ
ಸುಳಿಯುತ್ತಿವೆ.
ಮನಸ್ಸು ವಾಸ್ತವ ಒಪ್ಪಿಕೊಳ್ಳಲು
ಹಿಂದೇಟು ಹಾಕುತ್ತಿದೆ.
ನಡೆದ ಅನ್ಯಾಯಕ್ಕೆ ನೆನಪುಗಳೆ
ಸಾಕ್ಷಿಗಳಾಗಿವೆ.
ಆದರೆ ಸಾಬೀತು ಪಡಿಸಲು ಯಾವುದೇ
ನ್ಯಾಯಾಲಯ ಸಿಕ್ಕದಾಗಿದೆ.
ಪ್ರೇಮ ನಿವೇದನೆಗೊಂದು
ಅನ್ಯಾಯದ ನ್ಯಾಯ ಸಿಕ್ಕಂತಾಗಿದೆ.

**– ಆನಂದಿ ರಾಜಶೇಖರ ನೀಮಾಹೊಸಳ್ಳಿ**

## ಕಲ್ಪನೆ ಎಂಬ ಕತಾಜಗತ್ತಿನಲ್ಲಿ ನಾನೊಬ್ಬನೇ ನಾಯಕ ನಟ ಕಾಣದ ಪ್ರೀತಿಯ ಹುಡುಕುತ

ಭ್ರಮಾಲೋಕದಲ್ಲಿನ ಈ ಪ್ರೀತಿಗೆನ ಆಗುವೆ
ಸಾರತಿ

ರಥದ ಪತ ರಣ ಭೂಮಿಯ ಎಡೆಗೆ ಗೆಲುವೋ
ಸೋಲೋ ರಣಕಣ ಪ್ರತಿಬಿಂಬಿಸುತ್ತಿದೆ ಅ ಆಗಸ

ರಣ ಕಣವನ್ನು ಅನಿಸುತ್ತಿದೆ ಪ್ರತಿಬಿಂಬಿಸುತ್ತಿದೆ
ಅ ಆಗಸ ರಣರಂಗದ ರಣಕಹಳೆಯಲ್ಲಿ ಗೆದ್ದರೂ
ಸೋಲದ ಗೆಲ್ಲುವ ಸೋತರೂ ಗೆಲ್ಲುವ ಮನಸಿನ
ಮೌನವೇ ಪ್ರೀತಿ

ಮೌನ ಮುರಿದು ಮಾತಾದಾಗ ಪ್ರೀತಿಯ
ಹೊಂಗಿರಣ ಹೊರಚಾಚಿ ಕಲ್ಪನಾ ಎಂಬ ಕಥಾ
ಜಗತ್ತಿನಿಂದ ಹೊರಬಂದಾಗ
ಗೆಲುವು ನಂಬಿಕೆಗೆ ಎಡಗೆ ಆ
ನಂಬಿಕೆಯೇ ಪ್ರೀತಿ



**– ಕೌಶಿಕ್ ಎಂಪಿ**
**ಮೂಡಿಗೆರೆ**

ಕರುನಾಡ ಕಂದ
ಸಂಪುಟ–1 । ಸಂಚಿಕೆ–3
ದಿನಾಂಕ: 1–12–2021 । ಪುಟಗಳು: 16

# ‘ಬಿಟ್ ಕಾಯಿನ್’? ಮಾಹಿತಿ, ಇತಿಹಾಸ

ಬಿಟ್ ಕಾಯಿನ್, ಬಿಟ್ ಕಾಯಿನ್ ಅಂತ ಎಲ್ಲರೂ ಮಾತಾಡ್ತಾ ಇದ್ದಾರೆ, ಪತ್ರಿಕೆಗಳಲ್ಲಿ , ಟಿವಿ ಚಾನೆಲ್‌ಗಳಲ್ಲಿ, ಸಾಮಾಜಿಕ ಜಾಲತಾಣದಲ್ಲಿ ಪುನೀತ್ ನಂತರ ಟ್ರೆಂಡಿಂಗ್‌ನಲ್ಲಿರೋ ಪದ ಬಿಟ್ ಕಾಯಿನ್. ಬಿಟ್ ಕಾಯಿನ್ ಬಗ್ಗೆ ಮಾತಾಡೋವಾಗಲೆಲ್ಲ, ಬರೀವಾಗಲೆಲ್ಲ ಃ ಚಿಹ್ನೆ ಇರುವ ಚಿನ್ನದ ಬಣ್ಣದ ಕಾಯಿನ್‌ಗಳನ್ನೂ ತೋರಿಸ್ತಾ ಇದ್ದಾರೆ. ಹಂಗಂತ ಅದೊಂದು ನಮ್ಮ ರೂಪಾಯಿ ತರದ ಮಾರುಕಟ್ಟೆಯಲ್ಲಿ ಚಲಾವಣೆಯಲ್ಲಿರುವ ನಾಣ್ಯ ಅಂತ ಅಂದುಕೊಳ್ಳುವಂತಿಲ್ಲ. ಇದೊಂದು ಡಿಜಿಟಲ್ ಕರೆನ್ಸಿ. ಹಾಗಂತ ಹೇಳಿದ ಕೂಡಲೇ ಅರ್ಥವಾಗುವುದಿಲ್ಲವಾದರೆ ಒಂಚೂರು ಮಾನವನ ಇತಿಹಾಸಕ್ಕೆ ಹೋಗೋಣ.

ಬಿಟ್ ಕಾಯಿನ್ ಅರ್ಥ ಮಾಡಿಕೊಳ್ಳಲು ಹಣ ಮತ್ತು ಅದರ ವಹಿವಾಟಿನ ಕುರಿತ ಇತಿಹಾಸವನ್ನೂ ಗಮನಿಸಬೇಕಾಗುತ್ತದೆ. ನಾವು ಒಂದರಿಂದ ಹತ್ತರವರೆಗೆ ಎಣಿಸಲು ನಮ್ಮ ಕೈಬೆರಳುಗಳನ್ನು ಬಳಸುತ್ತೇವೆ, ಹತ್ತಕ್ಕಿಂತ ಹೆಚ್ಚಿಗೆ ಇದ್ದಾಗ ಬೆರಳುಗಳ ಮೂರು ಗೆರೆಗಳನ್ನೂ ಬಳಸಿಕೊಳ್ಳುತ್ತೇವೆ, ಇನ್ನೂ ಹೆಚ್ಚಿಗೆ ಆದಾಗ ಮಗ್ಗಿಯನ್ನು ಗುಣಗುಣಿತೊಡಗುತ್ತೇವೆ. ಅದೂ ಸಾಲದಾದಾಗ ಕಾಗದ, ಪೆನ್ನು ಬಳಸಿ ಕೂಡಿ, ಕಳೆದು, ಗುಣಿಸಿ ಭಾಗಿಸುತ್ತೇವೆ, ಇನ್ನೂ ಹೆಚ್ಚಿನ ಸಂಖ್ಯೆ ಮತ್ತು ಡೆಸಿಮಲ್‌ಗಳು ಬಂದಾಗ ಕ್ಯಾಲುಕಲೇಟರ್ ಹುಡುಕಾಡುತ್ತೇವೆ, ಈಗ ಆಂಡ್ರಾಯ್ಡ್ ಮೊಬೈಲ್ ಫೋನ್‌ಗಳಲ್ಲೇ ಈ ಕ್ಯಾಲುಕಲೇಟರ್ ಇರುತ್ತದೆ . ಈ ಕ್ಯಾಲುಕಲೇಟರ್ ಪದಕ್ಕೆ ಮೂಲ ಪದ ಕ್ಯಾಲುಕಲಸ್ ಅಂದರೆ ಎಣಿಕೆ ವಿಧಾನ ಅಂತ ಅರ್ಥ, ಮಾನವ ಎಣಿಕೆಯ ಪ್ರಾಥಮಿಕ ಪಾಠಗಳನ್ನು ಕಲಿಯುತ್ತಿದ್ದಾಗ, ಉದಾಹರಣೆಗೆ ಆತನ ಬಳಿ ನೂರು ಕುರಿಗಳಿವೆ ಎಂದರೆ, ಒಂದೊಂದು ಕುರಿಗೆ ಒಂದರಂತೆ ನೂರು ಸಣ್ಣ ಕಲ್ಲಿನ ಹರಳುಗಳನ್ನು ಒಂದು ಕೈ ಚೀಲಕ್ಕೆ ಹಾಕಿ ಇರಿಸಿಕೊಳ್ಳುತ್ತಿದ್ದನಂತೆ, ಒಂದು ಕುರಿ ಎರಡು ಮರಿ ಹಾಕಿದರೆ ಇನ್ನೂ ಎರಡು ಸಣ್ಣ ಕಲ್ಲ ಹರಳುಗಳನ್ನು ಆ ಚೀಲಕ್ಕೆ ಸೇರ್ಪಡೆ ಮಾಡಿಕೊಳ್ಳುತ್ತಿದ್ದನಂತೆ, ಅಕಸ್ಮಾತ್ ಒಂದು ಕುರಿಯನ್ನು ಯಾರಿಗಾದರೂ ಕೊಟ್ಟಾಗ ಆ ಚೀಲದಿಂದ ಒಂದು ಕಲ್ಲಹರಳನ್ನು ತೆಗೆದು ಅಚೆಗೆ ಎಸೆಯುತ್ತಿದ್ದನಂತೆ, ಈ ಕಲ್ಲ ಹರಳಿಗೆ ಕ್ಯಾಲುಕಲಸ್ ಎಂದು ಲ್ಯಾಟಿನ್ ಭಾಷೆಯಲ್ಲಿ ಕರೆಯುತ್ತಾರೆ. ಈ ಎಣಿಕೆಯ ವಿಧಾನವನ್ನು ಕ್ಯಾಲುಕಲೇಟ್ ಅಂತ ಇಂಗ್ಲಿಷಿನಲ್ಲಿ ನಾವು ಬಳಸುತ್ತಿದ್ದೇವೆ. ಹೀಗೆ ಇಂಥಾ ಅನಾದಿ ಕಾಲದ ಒರಟು ಎಣಿಕೆಯ ವಿಧಾನದಿಂದ ಅಗಣಿತ ಸಂಖ್ಯೆಗಳನ್ನು ಕ್ಷಣಾರ್ಧದಲ್ಲಿ ಗಣಿಸಿ ಉತ್ತರ ಹೇಳುವ ಸೂಪರ್ ಕಂಪ್ಯೂಟರ್ ಸೃಷ್ಟಿಸಿಕೊಂಡ ಮನುಷ್ಯ ಗ್ರೇಟ್ ಅಂತ ಅನಿಸುತ್ತೆ ಅಲ್ವಾ.

ಕಾಡಿನಲ್ಲಿ ಬೇಟೆಯಾಡುತ್ತಾ, ಹಣ್ಣು ಹಂಪಲನ್ನು ತಿನ್ನುತ್ತಾ ಬೆಳೆದ ಮನುಷ್ಯ ಎಲ್ಲ ಋತುಗಳಲ್ಲೂ ಏಕ ರೂಪದ ಏಕ ಪ್ರಮಾಣದ ಆಹಾರ ಒದಗಿಸಿಕೊಳ್ಳಲು ಸಂಗ್ರಹ ಗುಣವನ್ನು ರೂಡಿಸಿಕೊಂಡ, ಮುಂದುವರೆದು ಯಾರೋ ಸಂಗ್ರಹಿಸಿದ್ದನ್ನು ತೋಳ್ಬಲ ಬಳಸಿ ಕಿತ್ತುಕೊಳ್ಳುವ ಅಥವಾ ದೋಚುವ ಪ್ರವೃತ್ತಿಯನ್ನೂ ಬಳಕೆಗೆ ತಂದ. ಪದಾರ್ಥಗಳನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ವ್ಯವಹಾರ ಆರಂಭಿಸಿದ ಮಾನವ, ವಸ್ತುಗಳ ಬದಲಿಗೆ ಬೆಲೆಬಾಳುವ ಚಿನ್ನ,ಹಿತ್ತಾಳೆ,ತಾಮ್ರದ ಲೋಹಗಳನ್ನು ಹಣದ ರೂಪದಲ್ಲಿ ಬಳಸುವುದನ್ನು ಆರಂಭಿಸಿದ. ಈ ಹಣದ ಮೇಲೆ ಆಳುವ ರಾಜನ ಹತೋಟಿ ಆರಂಭವಾಯಿತು. ರಾಜ ಟಂಕಿಸಿದ ನಾಣ್ಯಕ್ಕೆ ಮಾತ್ರ ಬೆಲೆ ಎನ್ನುವ ಕಾಲ ಬಂತು.



ಕಾಲಾನಂತರ ಸರ್ಕಾರಗಳು ಕಾಗದದ ಹಣವನ್ನು ಚಲಾವಣೆಗೆ ತಂದವು. (ತೊಘಲಕ್ ಎಂಬ ದೊರೆ ಚರ್ಮದ ನಾಣ್ಯವನ್ನೂ ಚಲಾವಣೆಗೆ ತಂದಿದ್ದ ), ಆಯಾ ದೇಶಗಳ ರಿಸರ್ವ್ ಬ್ಯಾಂಕ್‌ಗಳು ಆ ದೇಶಗಳ ಖಜಾನೆಗಳ ಸಂಗ್ರಹದಲ್ಲಿರುವ ಚಿನ್ನದ ಪ್ರಮಾಣ ಅಥವಾ ಮೌಲ್ಯಕ್ಕೆ ಸರಿಸಮಾನವಾದಷ್ಟು ನೋಟುಗಳನ್ನು ಮಾತ್ರವೇ ಮುದ್ರಿಸುವ ಹಂತಕ್ಕೆ ಬಂದವು. ಕರೆನ್ಸಿ ಅಂದರೆ ಚಲಾವಣೆಯಲ್ಲಿರುವ ಹಣ ಎಂದರ್ಥ, ಆದರೆ ಈ ನೋಟುಗಳೇ ಹಣವಲ್ಲ, ಅದೊಂದು ಭರವಸೆ ಮಾತ್ರ. ಯಾವುದೇ ನೋಟನ್ನು ನೋಡಿ, ಅದರಲ್ಲಿ “ ಈ ನೋಟನ್ನು ಹೊಂದಿರುವವರಿಗೆ ನಾನು ---- ರೂಪಾಯಿಗಳನ್ನು ನೀಡುವ ಭರವಸೆ ನೀಡುತ್ತೇನೆ ಎಂದು ಹೇಳಿ ರಿಸರ್ವ್ ಬ್ಯಾಂಕ್ ಗವರ್ನರ್ ಸಹಿಯನ್ನು ಮುದ್ರಿಸಲಾಗಿರುತ್ತದೆ. ಆದರೆ ಈ ಬಿಟ್ ಕಾಯಿನ್‌ಗೆ ಯಾವ ದೇಶದ ಯಾವ ಸರ್ಕಾರವಾಗಲೀ ರಿಸರ್ವ್ ಬ್ಯಾಂಕ್ ಆಗಲೀ ಯಾವುದೇ ಮೊತ್ತವನ್ನು ಪಾವತಿಸುವ ಭರವಸೆಯನ್ನೂ ನೀಡಿಲ್ಲ.

ಹಣದ ಮುದ್ರಿತ ರೂಪವನ್ನು ನೋಟು ಎನ್ನುತ್ತೇವೆ, ಲೋಹದಲ್ಲಿ ಟಂಕಿಸಿದರೆ ನಾಣ್ಯ ಎನ್ನುತ್ತೇವೆ. ಇವತ್ತು ಅತಿ ಹೆಚ್ಚು ಚರ್ಚೆಗೆ ಒಳಗಾಗಿರುವ ಬಿಟ್ ಕಾಯಿನ್ ಎನ್ನುವುದು ಹಣದ ಇಲೆಕ್ಟ್ರಾನಿಕ್ ಸ್ವರೂಪ, ಯಾವ ದೇಶಗಳ ಯಾವ ರಿಸರ್ವ್ ಬ್ಯಾಂಕುಗಳೂ ಈ ಬಿಟ್ ಕಾಯಿನ್ ಅನ್ನು ಟಂಕಿಸುವುದಿಲ್ಲ ಅಥವಾ ಮುದ್ರಿಸುವುದಿಲ್ಲ. ಅದೇ ರೀತಿ ಯಾವ ದೇಶದ ಯಾವ ಸರ್ಕಾರಕ್ಕೂ ಈ ಬಿಟ್ ಕಾಯಿನ್ ಎಂಬ ಕಾಲ್ಪನಿಕ ಕರೆನ್ಸಿಯ ಮೇಲೆ ಹತೋಟಿ ಇಲ್ಲ. ಇದೊಂದು ವಿಕೇಂದ್ರೀಕೃತ ಪರೋಕ್ಷ ಹಣ ಚಲಾವಣೆ ವಿಧಾನ.

ಬಿಟ್ ಕಾಯಿನ್ ಎಂಬುದೊಂದು ಬ್ರಾಂಡ್‌ನ ಹೆಸರು, ಇದನ್ನು ಕ್ರಿಪ್ಟೋ ಕರೆನ್ಸಿ ಎಂದು ಅಧಿಕೃತವಾಗಿ ಕರೆಯಲಾಗುತ್ತದೆ. ಬಿಟ್ ಕಾಯಿನ್ ತರದಲ್ಲೇ ಸಾವಿರಾರು ಕರೆನ್ಸಿಗಳು ಚಾಲ್ತಿಯಲ್ಲಿವೆ. ಜಗತ್ತಿನ ಎಲ್ಲ ದೇಶಗಳೂ ಈ ಕ್ರಿಪ್ಟೋ ಕರೆನ್ಸಿಗೆ ಮಾನ್ಯತೆ ನೀಡಿಲ್ಲ, ಆದರೆ ಇತ್ತೀಚೆಗೆ ಕೆಲವು ದೇಶಗಳು ನಿರ್ದಿಷ್ಟ ಕ್ರಿಪ್ಟೋ ಕರೆನ್ಸಿ ಬಳಕೆಗೆ ಅವಕಾಶ ನೀಡಿವೆ, ಇನ್ನೂ ಕೆಲವು ದೇಶಗಳೇ ಇಂಥ ಕ್ರಿಪ್ಟೋ ಕರೆನ್ಸಿ ಸೃಷ್ಟಿಸುತ್ತಿವೆ. ಇಂಥ ಸಾವಿರಾರು ಕ್ರಿಪ್ಟೋ ಕರೆನ್ಸಿಗಳ ಪೈಕಿ ಹೆಚ್ಚಿನ ಮೌಲ್ಯ ಹೊಂದಿರುವ ಮತ್ತು ಹೆಚ್ಚು ಚಲಾವಣೆಯಲ್ಲಿರುವುದು ಬಿಟ್ ಕಾಯಿನ್ ಮಾತ್ರವೇ.

31.10.2009ರಂದು ಅಂತರ್‌ಜಾಲ ತಾಣವೊಂದರಲ್ಲಿ ಜಪಾನ್ ರಾಷ್ಟ್ರೀಯ ಎಂದು ಹೇಳಿಕೊಂಡ 46 ವರ್ಷದ (ಜನನ 5.4.1975) ಸತೋಷಿ ನಕಮೋಟೋ ಎಂಬ ಹೆಸರಿನಲ್ಲಿ ಮೊಟ್ಟ ಮೊದಲ ಬಾರಿಗೆ ಬ್ಲಾಕ್ ಚೈನ್ ಆಧರಿಸಿದ ಬಿಟ್ ಕಾಯಿನ್ ಪರಿಕಲ್ಪನೆಯನ್ನು ವಿವರಿಸಿ, ತಾನೇ ಈ ಬಿಟ್ ಕಾಯಿನ್ ಸೃಷ್ಟಿಕರ್ತನೆಂದೂ ಕಳೆದ ಎರಡು ವರ್ಷಗಳ ಸಂಶೋಧನೆಯ ಫಲವಿದೂ ಎಂದೂ ಹೇಳಿಕೊಂಡ. ಅದಾದ ಒಂದು ವರ್ಷ ಈತ ಅಂತರ್‌ಜಾಲ ತಾಣದಲ್ಲಿ ಸಕ್ರಿಯವಾಗಿದ್ದು ನಂತರ ಈ ಹೆಸರಿನಲ್ಲಿ ಯಾವ ಹೇಳಿಕೆಗಳೂ ಬಂದಿಲ್ಲ.

ಆದರೆ ಹಲವಾರು ಮಂದಿ ನಾನೇ ಸತೋಷಿ ನಕಮೊಟೋ ಎಂದು ಹೇಳಿಕೊಂಡಿದ್ದೂ ಉಂಟು. ಈ ಬಿಟ್ ಕಾಯಿನ್ ಸೃಷ್ಟಿಕರ್ತ ಒಬ್ಬ ವ್ಯಕ್ತಿಯೇ ಅಥವಾ ಹಲವಾರು ವ್ಯಕ್ತಿಗಳ ಗುಂಪೇ, ಸಂಸ್ಥೆಯೇ ಎಂಬ ಬಗ್ಗೆಯೂ ಚರ್ಚೆ ಮುಂದುವರೆದಿದೆ. ಬಿಟ್ ಕಾಯಿನ್ ಪರಿಕಲ್ಪನೆಯನ್ನು ಸೃಷ್ಟಿಸಿದವನ ಭಾವ ಚಿತ್ರವನ್ನೂ ಯಾರೂ ಈವರೆಗೆ ನೋಡಿಲ್ಲ. ಒಟ್ಟಾರೆ ಇದೊಂದು ಹುಸಿ ಹೆಸರು ಎಂದು ಎಲ್ಲರೂ ಭಾವಿಸಿದ್ದಾರೆ. ಒಟ್ಟಾರೆ ಬಿಟ್ ಕಾಯಿನ್ ಚಲಾವಣೆ ಎಷ್ಟು ನಿಗೂಢವಾಗಿದೆಯೋ ಅದರ ಸೃಷ್ಟಿಯೂ ಅಷ್ಟೇ ನಿಗೂಢವಾಗೇ ಇದೆ.

ಕ್ರಿಪ್ಟೋ ಕರೆನ್ಸಿಯಲ್ಲಿ ಬಳಕೆಯಾಗುವ ಕ್ರಿಪ್ಟೋ ಎಂದರೆ ಸುಭದ್ರ ಅಂಥ ಅರ್ಥ, ವಾಟ್ಸಪ್ ಸಂದೇಶ ಕಳಿಸುವಾಗ “ ಯುವರ್ ಮೆಸೇಜ್ ಈಸ್ ಎನ್‌ಕ್ರಿಪ್ಟೆಡ್” ಅಂತ ಬರುತ್ತೆ ನೋಡಿದ್ದೀರಾ ಅಲ್ವಾ, ಅದರರ್ಥ ನೀವು ಕಳಿಸುವ ಸಂದೇಶ ನೀವು ಯಾರಿಗೆ ಕಳಿಸುತ್ತೀರೋ ಅವರನ್ನು ಬಿಟ್ಟು ಇನ್ನಾರಿಗೂ ಕಾಣುವುದಿಲ್ಲ ಅಂತ. ಆದರೆ ಸರ್ಕಾರ ಅಥವಾ ಪೊಲೀಸರು ಅಪರಾಧ ಪ್ರಕರಣಗಳಲ್ಲಿ ಇಂಥ ವಾಟ್ಸಾಪ್ ಸಂದೇಶಗಳ ಮಾಹಿತಿಯನ್ನು ಆ ಕಂಪನಿಯಿಂದಲೇ ಪಡೆಯುತ್ತಾರೆ ಎಂಬುದೂ ನೆನಪಿನಲ್ಲಿರಲಿ.

ಆದ್ದರಿಂದ ಬಿಟ್ ಕಾಯಿನ್ ಎಂದರೆ ಕಣ್ಣಿಗೆ ಕಾಣುವ, ಕೈಯಲ್ಲಿ ಮುಟ್ಟಬಹುದಾದ ನಾಣ್ಯ ಅಥವಾ ನೋಟಲ್ಲ, ಅದು ಇಂಟರ್‌ನೆಟ್‌ನಲ್ಲಿ ರಿಜಿಸ್ಟರ್ ಮಾಡಿಕೊಂಡು ಲಾಗಿನ್ ಆದ ಎಲ್ಲರೂ ನೋಡಬಹುದಾದ ಸಾರ್ವಜನಿಕ ಲೆಡ್ಜರ್‌ನಲ್ಲಿ ಇರುವ ಮೊತ್ತ ಅಂತ ಹೇಳಬಹುದು.

ಈ ಬಿಟ್ ಕಾಯಿನ್ ನಿಮಗೆ ದಕ್ಕುವುದಾದರೂ ಹೇಗೆ ಎಂಬ ಪ್ರಶ್ನೆಗೆ ‘ಮೈನಿಂಗ್’ ಮಾಡಿ ಎಂಬ ಉತ್ತರ ಬರುತ್ತದೆ. ತೀರಾ ಕ್ಲಿಷ್ಟವಾದ ‘ಬ್ಲಾಕ್ ಚೈನ್’ಗಳೆಂಬ ಗಣಕ ತಂತ್ರಾಂಶ ಲೆಕ್ಕವೊಂದನ್ನು ಬಿಡಿಸುವುದನ್ನು ‘ಮೈನಿಂಗ್’ ಎನ್ನಲಾಗುತ್ತದೆ. ಇಂಥ ಲೆಕ್ಕವನ್ನು ಬಿಡಿಸಲು ಕಂಪ್ಯೂಟಿಂಗ್ ಪರಿಣಿತರೇ ಬೇಕು, ಇಂಥಾ ಪರಿಣಿತರಿಗೆ ‘ಮೈನರ್ಸ್’ ಎನ್ನುತ್ತಾರೆ. ಒಂದು ಬಿಟ್ ಕಾಯಿನ್‌ನ ಲೆಕ್ಕವನ್ನು ಯಶಸ್ವಿಯಾಗಿ ಬಿಡಿಸಲು ಪರಿಣಿತ ಮೈನರ್‌ಗಳು ಕನಿಷ್ಟ ಹತ್ತು ನಿಮಿಷದಿಂದ ಒಂದು ಗಂಟೆ ಸಮಯ ತೆಗೆದುಕೊಳ್ಳುತ್ತಾರೆ. ಈ ಲೆಕ್ಕ ಬಿಡಿಸಿದ ಕೂಡಲೇ ಆ ಬಿಟ್ ಕಾಯಿನ್ ನಿಮ್ಮದಾಗುತ್ತದೆ. ಹೀಗೆ ಲೆಕ್ಕ ಬಿಡಿಸಿಕೊಡುವ ಮೈನರ್‌ಗಳಿಗೆ ಶುಲ್ಕವಾಗಿ ಬಿಟ್ ಕಾಯಿನ್‌ಗಳನ್ನೇ ಕೊಡುವುದೂ ಉಂಟು. ಬ್ಲಾಕ್ ಚೈನ್ ತಂತ್ರಾಂಶವನ್ನು ಬಿಟ್ ಕಾಯಿನ್‌ಗಳಿಗೆ ಮಾತ್ರವಲ್ಲದೇ ಇತರ ಕಾರ್ಯಗಳಿಗೂ ಬಳಸಬಹುದು. ಪುಟ್ಟ ದೇಶವೊಂದು ಈ ಬ್ಲಾಕ್ ಚೈನ್ ತಂತ್ರಾಂಶ ಬಳಸಿ ಚುನಾವಣೆಯನ್ನೂ ಇತ್ತೀಚೆಗೆ ನಡೆಸಿದೆ. ಈ ಬ್ಲಾಕ್ ಚೈನ್ ತಂತ್ರಾಂಶದಲ್ಲಿ ನಡೆಸುವ ವಹಿವಾಟುಗಳನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಬರುವುದಿಲ್ಲವಾದ್ದರಿಂದ ಹಣ ಚಲಾವಣೆ ಖಾತರಿ ಎಂದು ನಂಬಲಾಗಿದೆ.

ಬಿಟ್ ಕಾಯಿನ್‌ಗೆ ಆಯಾ ದೇಶಗಳ ಕರೆನ್ಸಿಗಳಿಗೆ ಹೋಲಿಸಿ ಮೌಲ್ಯ ನಿರ್ಧರಣೆ ಮಾಡಲಾಗುತ್ತದೆ. ಹನ್ನೊಂದು ವರ್ಷಗಳ ಹಿಂದೆ ಒಂದು ಬಿಟ್ ಕಾಯಿನ್‌ಗೆ ಹೆಚ್ಚಿನ ಮೌಲ್ಯವಿರಲಿಲ್ಲವಾದರೂ ಈಗ ಒಂದು ಬಿಟ್ ಕಾಯಿನ್ ಇಂಡಿಯಾದ ಲೆಕ್ಕದಲ್ಲಿ ರೂ. 4,594,113 ಗೆ ಸಮನಾಗಿದೆ. ದಿನವೂ ಅದರ ಮೌಲ್ಯ ಏರಿಳಿತ ಕಾಣುತ್ತದೆ. ಕೆಲವೊಮ್ಮೆ ಇಳಿಯುತ್ತದೆ.

ಸದ್ಯಕ್ಕೆ ಇಂಡಿಯಾದಲ್ಲಿ ಬಿಟ್ ಕಾಯಿನ್‌ನನ್ನು ಸರ್ಕಾರ ಅಥವಾ ಬ್ಯಾಂಕುಗಳು ಒಪ್ಪದೇ ಹೋಗಿದ್ದರೂ, ನಿರಾಕರಿಸುವ ಪರಿಸ್ಥಿತಿ ಇಲ್ಲ. ಬಿಟ್ ಕಾಯಿನ್ ಚಲಾವಣೆಗೆ ರಿಸರ್ವ್ ಬ್ಯಾಂಕ್ ಒಡ್ಡಿದ್ದ ತಡೆಯನ್ನು ಸುಪ್ರೀಂ ಕೋರ್ಟ್ ಈಗಾಗಲೇ ತಳ್ಳಿಹಾಕಿದ್ದಾಗಿದೆ. ಬಿಟ್ ಕಾಯಿನ್ ಅನ್ನು ಉಳಿತಾಯದ ಹಣವನ್ನು ಹೂಡಿಕೆ ಮಾಡುವ ಮತ್ತು ಲಾಭ ಗಳಿಸುವ ವಿಧಾನವಾಗಿ ಸಾಮಾನ್ಯವಾಗಿ ಬಳಕೆಯಾಗಿದೆ. ಅದಕ್ಕಾಗಿಯೇ ಕೆಲವು ಆಪ್‌ಗಳಿವೆ. ಅದನ್ನು ಬಿಟ್ಟರೆ ಹೊರ ದೇಶಗಳಿಗೆ ಹಣವನ್ನು ಕಳಿಸುವ ಸುಲಭ ವಿಧಾನವಾಗಿ ಬಿಟ್ ಕಾಯಿನ್ ಬಳಕೆಯಾಗುತ್ತಿದೆ. ಹೇಗೆಂದರೆ, ನಿಮ್ಮ ಬ್ಯಾಂಕಿನಲ್ಲಿರುವ ಹಣವನ್ನು ವಿದೇಶದಲ್ಲಿರುವ ನಿಮ್ಮವರಿಗೆ ಕಳಿಸಬೇಕಾದರೆ ಹಣ ವರ್ಗಾಯಿಸುವ ಬ್ಯಾಂಕುಗಳಿಗೆ ದೊಡ್ಡ ಮೊತ್ತದ ಕಮೀಶನ್ ಕೊಡಬೇಕು ಮತ್ತು ಎರಡು ದಿನಕಾಯಬೇಕು. ಬಿಟ್ ಕಾಯಿನ್ ಸ್ವರೂಪದಲ್ಲಿ ಕಳಿಸಲು ಹತ್ತು ನಿಮಿಷ ಸಾಕು ಮತ್ತು ಯಾವ ಶುಲ್ಕವೂ ಇಲ್ಲ.

ಈ ಎಲ್ಲದರ ಹೊರತಾಗಿ ಬಿಟ್ ಕಾಯಿನ್ ವಹಿವಾಟು ಕರ್ನಾಟಕದಲ್ಲಿ ಹಗರಣದ ಸ್ವರೂಪ ತಳೆದಿದೆ. ಸರ್ಕಾರದ ಖಾತೆಗಳಿಂದ ಹಣವನ್ನು ಹ್ಯಾಕ್ ಮಾಡಲಾಗಿದೆ ಎಂದು ಆರೋಪಿಸಲಾಗಿದೆ. ಈ ಹಗರಣದ ಕೇಂದ್ರ ಬಿಂದುವಾಗಿರುವ ಶ್ರೀಕಿ ಅಲಿಯಾಸ್ ಶ್ರೀ ಕೃಷ್ಣ ಎಂಬ ಹ್ಯಾಕರ್‌ನನ್ನ ಆಗಾಗ ಶ್ರೀಕೃಷ್ಣ ಜನ್ಮ ಸ್ಥಾನಕ್ಕೆ ಕಳಿಸುವ ಮತ್ತು ಆತನಿಗೇ ಗೊತ್ತಿಲ್ಲದಂತೆ ಯಾರೋ ಜಾಮೀನು ನೀಡಿ ಹೊರಗೆ ಕರೆತರುವ ನಾಟಕಗಳು ನಡೆಯುತ್ತಿವೆ. ಈ ಹಗರಣ ತನಿಖೆ ನಡೆದರೆ ಸತ್ಯಾಂಶ ಹೊರಗೆ ಬರಲಿದೆ.

## ಈಚನಾಳದಲ್ಲಿ ನಾರುತ್ತಿರುವ ಚರಂಡಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಸ್ಥಳಕ್ಕೆ ಭೇಟಿ ನೀಡಿ 2 ತಿಂಗಳು ಕಳೆದರೂ ಬಗೆಹರಿಯದ ಸಮಸ್ಯೆ...!!!!

ಲಿಂಗಸುಗೂರು– ಸರ್ಕಾರ ಗ್ರಾಮ ಪಂಚಾಯತ್ ಗೆ ಸ್ವಚ್ಛತೆ ಹಾಗೂ ಮೂಲಭೂತ ಸೌಕರ್ಯಗಳ ಕೊರತೆ ನೀಗಿಸಲು ಕೋಟಿ ಕೋಟಿ ಹಣ ಮೀಸಲಿಟ್ಟರೂ, ಗ್ರಾಮೀಣ ಭಾಗದ ಜನರ ಸಮಸ್ಯೆಗಳಿಗೆ ಗ್ರಾಮ ಪಂಚಾಯತ್ ಅಧಿಕಾರಿಗಳ ಬೇಜವಾಬ್ದಾರಿತನದಿಂದ ಸರಿಯಾಗಿ ಸರ್ಕಾರದ ಸೌಕರ್ಯಗಳು ತಲುಪಿಲ್ಲ. ಇದಕ್ಕೆ ತಾಜಾ ಉದಾಹರಣೆ ಎಂದರೆ ಈಚನಾಳ ಗ್ರಾಮ ಪಂಚಾಯತ್ ಈ ಗ್ರಾಮ ದಲ್ಲಿ 1 ನೇ ವಾರ್ಡ್ ನಲ್ಲಿ ಚರಂಡಿ ತುಂಬಿ , ಗಲೀಜು ನೀರು ರಸ್ತೆಯ ಮೇಲೆ ಹರಿಯುವ ಕುರಿತು ಈಗಾಗಲೇ ಹಲವು ದಿನಪತ್ರಿಕೆ ಗಳಲ್ಲಿ ಮೂರು ತಿಂಗಳುಗಳ ಹಿಂದೆ ವರದಿ ಬಂದಿವೆ.ಈ ಪತ್ರಿಕಾ ವರದಿಗಳನ್ನು ಆಧರಿಸಿ ದಿನಾಂಕ 24–08–2021 ರಂದು ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳಾದ ಲಕ್ಷ್ಮೀ ದೇವಿ ಅವರು ಈಚನಾಳ ಗ್ರಾಮ ಕ್ಕೆ ಭೇಟಿ ನೀಡಿ, ಅಸ್ವಚ್ಛತೆಯ ಸ್ಥಳ ಪರಿಶೀಲನೆ ಮಾಡಿ, 2 ತಿಂಗಳು 15 ದಿನ ಕಳೆದರೂ ಈ ಚರಂಡಿಯ , ಸಮಸ್ಯೆ ಬಗೆಹರಿಸಲು ಆಗದೇ ಇರುವುದು ನಿಜಕ್ಕೂ ಅಧಿಕಾರಿಗಳು ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಎಷ್ಟ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದ್ದಾರೆ ಎಂಬುದು ಈಗ ಜಗಜ್ಜಾಹೀರು ಆಗಿದೆ. ಒಟ್ಟಾರೆ ಈಚನಾಳ ಗ್ರಾಮ ದ ಈ ಅಸ್ವಚ್ಛತೆಯ ಸ್ಥಳಗಳಿಗೆ ಯಾವಾಗ ಮುಕ್ತಿ ಸಿಗುತ್ತದೆ ಎಂಬುದು ಕಾದುನೋಡಬೇಕಿದೆ.






ಕರುನಾಡ ಕಂದ
ಸಂಪುಟ–1 । ಸಂಚಿಕೆ–3
ದಿನಾಂಕ: 1–12–2021 । ಪುಟಗಳು: 16

# ಶಿರಹಟ್ಟಿ ಪ್ರಥಮ ದರ್ಜೆ ಕಾಲೇಜಿಗೆ ಸ್ನಾತಕೋತ್ತರ ಪದವಿ ಕೋರ್ಸ್ ನಡೆಸುವಂತೆ ಮನವಿ



ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಮತ್ತು( ಕರವೇ) ಕುದ್ದಾಗಿ ಭೇಟಿ ನೀಡಿ. ಕರ್ನಾಟಕದ ವಿಶ್ವವಿದ್ಯಾಲಯ ಕುಲಪತಿಗಳಿಗೆ ಕಚೇರಿಗೆ ಮನವಿ ಸಲ್ಲಿಕೆ, ಪಟ್ಟಣದಲ್ಲಿರುವ ಶ್ರೀ ಜಗದ್ಗುರು ಫಕ್ಕಿರೇಶ್ವರ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ. ಸ್ನಾತಕೋತ್ತರ ಪದವಿ ತರಗತಿಗಳಿಗೆ ಕೇಂದ್ರ ಪ್ರಾರಂಭಿಸಲು .ಅನುಮತಿ ನೀಡುವಂತೆ ಶಿರಹಟ್ಟಿ ತಾಲೂಕು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ತಾಲೂಕ ಅಧ್ಯಕ್ಷರು ರಾಜು ಎನ್ ಎಚ್ ಅವರ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಶಿರಹಟ್ಟಿ ತಾಲೂಕು ಕರ್ನಾಟಕ ರಕ್ಷಣಾ ವೇದಿಕೆ ಶಿರಹಟ್ಟಿ ತಾಲೂಕು ಅಧ್ಯಕ್ಷ ಬಸರಾಜ ವಡವಿ .ಮಾತನಾಡಿ ಈ ಹಿಂದೆ ದಿನಾಂಕ 10,12,2020 ರಂದು ಸ್ನಾತಕೋತ್ತರ ಪದವಿ ತರಗತಿ ಪ್ರಾರಂಭಿಸಲು. ಮನವಿ ಸಲ್ಲಿಸಿದ್ದರು. ಯಾವುದೇ ಕ್ರಮ ಕೈಗೊಂಡಿಲ್ಲ. ಈ ವಿಷಯಕ್ಕೆ ನಾವೆಲ್ಲ ಕ್ರಮ ಖಂಡಿಸುತ್ತೇವೆ .ನಂಜುಂಡಪ್ಪನವರ ಪ್ರಕಾರ ಶಿರಹಟ್ಟಿ ತಾಲೂಕು ಹಿಂದುಳಿದ ತಾಲೂಕು ಎಂಬ ಹೆಗ್ಗಳಿಕೆ ಪಾತ್ರವಾಗಿದೆ .ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಬೇಕಾಗಿದೆ .ಪ್ರಥಮ ದರ್ಜೆ ಕಾಲೇಜಿಗೆ ಗ್ರಾಮೀಣ ಭಾಗದಿಂದ ನೂರಾರು ವಿದ್ಯಾರ್ಥಿಗಳು ಬರುತ್ತಿದ್ದರು. ಈ ಕೂಡ ಪದವಿ ನಂತರ ಅಧ್ಯಯನ ಮಾಡಲು ಧಾರವಾಡ. ಗದಗ ನಗರಗಳಿಗೆ ಸುಮಾರು 50/100 ಕಿಲೋಮೀಟರ್ ದೂರದವರೆಗೂ ಪ್ರಯಾಣ ಮಾಡಬೇಕಾಗಿದೆ. ಬಡವರ್ಗದ ವಿದ್ಯಾರ್ಥಿಗಳಿಗೆ ಇದು ಸಾಧ್ಯವಾಗದು, ಸ್ನಾತಕೋತ್ತರ ಅಧ್ಯಯನ ಕನ ಸಾಗುತ್ತಿರುವುದು ದುರದೃಷ್ಟಕರ ಸಂಗತಿಯಾಗಿದೆ .ಮುಂದಿನ ಭವಿಷ್ಯದ ಉದ್ಧಾರಕ್ಕಾಗಿ ಸ್ನಾತಕೋತ್ತರ ಅಧ್ಯಯನ ಅವಶ್ಯವಾಗಿದ್ದು. ಸ್ನಾತಕೋತ್ತರ

ಪದವಿಗಾಗಿ ಮೂಲಭೂತ ಅವಶ್ಯಕತೆಗೆ ಬೇಕಾದ ಕೊರತೆಗಳಿದ್ದರೂ. ಯಾವ ಕಾರಣಕ್ಕಾಗಿ ಪ್ರಾರಂಭ ಮಾಡುತ್ತಿಲ್ಲ, ಕಾಲೇಜಿನ ಆಡಳಿತ ಮಂಡಳಿ ನಿರ್ಲಕ್ಷ್ಯದಿಂದ ತಾಲೂಕಿನ ವಿದ್ಯಾರ್ಥಿಗಳಿಗೆ ಮೋಸ ಮಾಡಲಾಗುತ್ತಿದೆ .ಅತಿ ಶೀಘ್ರದಲ್ಲಿ ಸ್ನಾತಕೋತ್ತರ ಪದವಿ ತರಗತಿಗಳಿಗೆ ಕೇಂದ್ರ ತೆರೆಯಬೇಕು ಮತ್ತು ಪಕ್ಷದಿಂದ ಅಥವಾ ಸಂಘಟನೆಯಿಂದ ಆಡಳಿತ ವರ್ಗದ ವಿರುದ್ಧ ಉಗ್ರವಾದ ಹೋರಾಟ ಮಾಡಲಾಗುವುದು ಎಂದು ಹೇಳಿದರು,

ಈ ಸಂದರ್ಭದಲ್ಲಿ ಉಪಕುಲಪತಿಗಳು ಶೀಘ್ರದಲ್ಲಿ ಶಿರಹಟ್ಟಿ ಕಾಲೇಜಿಗೆ ಸ್ನಾತಕೋತ್ತರ ಪದವಿ ತರಗತಿಗಳಿಗೆ ಪ್ರಾರಂಭಿಸಲು ಕೈಗೊಳ್ಳಲಾಗುವುದು ಎಂದು ಹೇಳಿದರ,



ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಶಿರಹಟ್ಟಿ ತಾಲೂಕು ಅಧ್ಯಕ್ಷ ರಾಜು ಎಚ್ ,ರಾಕೇಶ್ ಬೂದಿಹಾಳ್ ಪ್ರಧಾನ ಕಾರ್ಯದರ್ಶಿ, ಅರುಣ್ ವಿದ್ಯಾರ್ಥಿ ಘಟಕದ ತಾಲೂಕು ಅಧ್ಯಕ್ಷ ,ಕರವೇ ತಾಲೂಕ ಅಧ್ಯಕ್ಷರಾಗಿ ಬಸವರಾಜ ವಡವಿ, ರೈತ ಯುವ ಘಟಕದ ಜಿಲ್ಲಾಧ್ಯಕ್ಷ ಪ್ರಕಾಶ್ ಕಲ್ಯಾಣಿ ,ಕರವೇ ಉಪಾಧ್ಯಕ್ಷ ದೇವೇಂದ್ರ ,ಕೋಗನೂರು ಕರವೇ ಗ್ರಾಮ ಘಟಕದ ಅಧ್ಯಕ್ಷ ನಾಗೇಂದ್ರ ಬಿರಬ್ಬಿ ,ರವಿ ಮಟ್ಟಿ .ಮಲ್ಲಪ್ಪ ಕುರುಬರ .ಇನ್ನೂ ಅನೇಕ ವ್ಯಕ್ತಿಗಳು ಉಪಸ್ಥಿರಿದ್ದರು

# ಜನಮನ ಗೆದ್ದ ಶ್ರೀ ಬಾಬು ಮಹಾರಾಜರು



ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನ ಹಣ ಮಾ ಪೂರ ಪುಟ್ಟ ಹಳ್ಳಿಯಲ್ಲಿ ಶ್ರೀ ಬಾಬು ಮಹಾರಾಜರು ಸುತ್ತಮುತ್ತ ಹತ್ತಾರು ಹಳ್ಳಿಗಳ ಜನರ ಪಾಲಿಗೆ



ಆಶಾಕಿರಣ, ಗ್ರಾಮಸ್ಥರ ಸಮಸ್ಯೆಯನ್ನು ನಿವಾರಣೆ ಮಾಡಿ ಉತ್ತಮ ಮಾರ್ಗದ ಮೂಲಕ ದಾರಿ ತೋರಿಸಿದ ಮಹಾನ ವ್ಯಕ್ತಿ ಬಾಬು ಮಹಾರಾಜರು 400/450 ವರ್ಷಗಳ ಪುರಾತನತೆ ಹೊಂದಿರುವ ಗ್ರಾಮದಲ್ಲಿ 450 ಕುಟುಂಬ ವಾಸವಾಗಿದ್ದು 2500 ಜನಸಂಖ್ಯೆ ಹೊಂದಿದ ಪುಟ್ಟಗ್ರಾಮ ಹಣಮಾಪುರ,

ಗ್ರಾಮದ ಆರಾಧ್ಯ ದೈವ ಶ್ರೀ ಅಮೋಘ ಸಿದ್ದೇಶ್ವರ ಗದ್ದುಗೆ ಶ್ರೀ ಬ್ರಹ್ಮದೇವರ ದೇವಸ್ಥಾನ ಶ್ರೀ ಮಾತಂಗಿ ಎಲ್ಲಮ್ಮದೇವಸ್ಥಾನ ಅಂಗನವಾಡಿ ಸರ್ಕಾರಿ ಹಾಗೂ ಪ್ರೌಢಶಾಲೆ ಗಳು ಇವೆ ಇಲ್ಲಿಯ ಜನರು ಮೂಲ ಕೃಷಿಕರಾಗಿದ್ದು

ಉಪಜೀವನಕ್ಕಾಗಿ ಕುರಿ ಆಡು ಆಕಳು ಎಮ್ಮೆಗಳ ಸಾಕಾಣಿಕೆ ಮಾಡುತ್ತಿದ್ದು ಸರ್ಕಾರಿ ಅರೆ ಸರ್ಕಾರಿ ಹುದ್ದೆಯಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ ದೇಶಕ್ಕಾಗಿ ಸೈನಿಕರಾಗಿ ಗಡಿಕಾಯುವ ದೇಶಭಕ್ತರು ಇವರು, ಹಣಮಾಪುರ ಸಾಧು–ಸಂತರು ನಲಿದಾಡುವ ಪುಣ್ಯಭೂಮಿ ಆಗಿದ್ದು ಇವರಲ್ಲಿ ಪ್ರಮುಖವಾಗಿ ಸಿದ್ದಪ್ಪ ಮಹಾರಾಜರು ಶಿರೋಳದ ಸೋಮಣ್ಣ ಮತ್ಯಾರು ಉಮದಿ ಶ್ರೀ ಸಿದ್ದರಾಮ ಸಂತರು ಮುಂತಾದವರ ಪಾದಸ್ಪರ್ಶದಿಂದ ಪಾವನ ಭೂಮಿ ಹಣಮಾಪುರ ಗ್ರಾಮದ ಪುಣ್ಯಭೂಮಿಯಲ್ಲಿ ಜನಿಸಿದ ಶ್ರೀ ಬಾಬು ಮಹಾರಾಜರು ಮೌನ ಯೋಗಿಯಾಗಿ ಕಾಯಕ ಯೋಗಿಯಾಗಿ ಪವಾಡ ಪುರುಷರಾಗಿ ಹಣಮಾಪೂರ ಕೀರ್ತಿ ಪತಾಕೆಯನ್ನು ಹಾರಿಸಿದ ಪೂಜ್ಯರುಬೆಳೆಸಿದ ಹಿರಿಯ ಯತಿಗಳಾದ ಶ್ರೀ ಶ್ರೀ ಅಮರೇಶ್ವರ ಮಹಾರಾಜರು ಇಂದು ನಾಡಿನ ಹೆಸರಾಂತ ಸಂತರು ಎಂದು ಹೇಳಲು ಸಂತೋಷವಾಗುತ್ತದೆ, ಶ್ರೀ ಬಾಬು ಮಹಾರಾಜರು 01/06/1948 ರಂದು ಪೂಜಾರಿ ಮನೆತನದ ಶ್ರೀ ರಾಮ ಹಾಗೂ ಶ್ರೀಮತಿ ಜಾನಕಾ ಬಾಯಿ ಪುಣ್ಯ ದಂಪತಿಗಳ ಉದರದಿಂದ ಜನಿಸಿದರು, ಹ ಣ ವ ಮಾ ಪೂ ರ ಗ್ರಾ ವ ುದ ಅಮೋಘಸಿದ್ಧೇಶ್ವರ ದೇವರ ದೇವಸ್ಥಾನದ ಪೂಜಾರಿ ಆಗಿ ಅದೇ ರೀತಿ ಕೃಷಿ ಕಾಯಕ ಇವರ ಮೂಲ ಕಸುಬು, ದೇವರ ಪೂಜೆ ಪುನಸ್ಕಾರ ಮಾಡುವುದರಲ್ಲಿ ಬಹಳ ಆಸಕ್ತಿಯನ್ನು ಹೊಂದಿದವರು ತಂದೆ–ತಾಯಿ ಹಾಗೂ ಗುರುಹಿರಿಯರನ್ನು ಬಹಳ ಪ್ರೀತಿ–ವಿಶ್ವಾಸದಿಂದ ಕಾಣುತ್ತಿದ್ದರು ಇವರು ಆಚಾರ ವಿಚಾರ ನಡೆ–ನುಡಿ ವಿನಯವಂತಿಕೆ ಇವರ ಜೀವನದ ಅವಿಭಾಜ್ಯ ಅಂಗ ಅಂದರೆ ತಪ್ಪಾಗಲಾರದು, ಮುಂದೆ ದಿನಗಳು ಕಳೆದಂತೆ ಬಾಬು ಮತ್ತು ಸುಶೀಲಾಬಾಯಿ ದಂಪತಿಗಳ ಸಂಸಾರ ಹಾಲು ಜೇನಿನ ಗೂಡು ಅಂದರೆ ತಪ್ಪಾಗಲಾರದು3 ಜನ ಮಕ್ಕಳು ಒಂದು ಗಂಡು ಇಬ್ಬರು ಹೆಣ್ಣು ಮಕ್ಕಳು ಸಂಸಾರಿಕ ಜೀವನ ಸುಗಮವಾಗಿ ನಡೆಯುತ್ತಿರುವಾಗ ಜೀವನದಲ್ಲಿ ಸಂತೋಷ ನೆಮ್ಮದಿ ಅವರಿಗೆ ಗಗನಕುಸುಮ ಏಕೆಂದರೆ ಅವರಲ್ಲಿ ಆಧ್ಯಾತ್ಮದ ಒಲವು ಹೆಚ್ಚಿತ್ತು ಪ್ರಾಪಂಚಿಕ ಜೀವನ ನಶ್ವರ ಎನಿಸಿತು ಇದೇ ಸಮಯದಲ್ಲಿ ಶ್ರೀ ಅಮೋಘಸಿದ್ದೇಶ್ವರ ದೇವರು ಅವರ ಕನಸಿನಲ್ಲಿ ಬಂದು ಬಾ ನನ್ನ ದಾಸ,(ಸೇವಕ) ನಾಗು ಎಂದು



ಕರೆದು ವಿಶೇಷನಾಗು ಎಂದು ಕರೆಯ ತೊಡಗಿದನು ಒಂದು ಕಡೆ ಸಂಸಾರ ಮತ್ತೊಂದು ಕಡೆ ದೇವರ ಮಾತು ಇವುಗಳ ನಡುವೆ ಸಂಸಾರಕ್ಕೆ ಬಿಡುಗಡೆಯಾಗಿ ದೇವರ ಕಡೆಗೆ ನಡೆದರು ಆಗ ಇವರಿಗೆ ಕೇವಲ 35 ವರ್ಷ ಮಹಾರಾಷ್ಟ್ರದ ಉಮದಿ ಯ ಶ್ರೀ ಸಿದ್ದರಾಮ ಸಂತರ ಭೇಟಿಯಾದರು ಆಗ ಶ್ರೀ ಸಿದ್ದರಾಮ ದರ್ಶನಕ್ಕೆ ಆತ್ಮದ ಮುಕ್ತಿಗೆ ಗುರು ದೀಕ್ಷೆ ಅತ್ಯುತ್ತಮ ಮಾರ್ಗ ಇದು ಗುರುದೀಕ್ಷೆಯ ಮೂಲಕ ಶಿಷ್ಯರಾದರು,

ಸತ್ಯ ಧರ್ಮ ನ್ಯಾಯ ನೀತಿ ಹಾಗೂ ಆಚಾರ–ವಿಚಾರ ಕುರಿತು ಸನ್ಮಾರ್ಗ ತೋರಿಸಿದರು,

ಆಕಳು ತನ್ನ ಹಾಲನ್ನು ತಾನೇ ಕುಡಿಯುವುದಿಲ್ಲ
ಮರ ತನ್ನ ಹಣ್ಣನ್ನು
ತಾನೇ ತಿನ್ನೋದಿಲ್ಲ
ನದಿ ತನ್ನ ನೀರನ್ನು ತಾನೇ ಕುಡಿಯುವುದಿಲ್ಲ
ವಚನದಲ್ಲಿ ಹೇಳಿದ್ದಾರೆ, ಬಾಬು ಮಹಾರಾಜರ ಬಗ್ಗೆ ಮಾಹಿತಿ ನೀಡಿದ ಯುವ ಸಾಹಿತಿ ಉಮೇಶ ಮಜ್ಜಿಗಿ ಅವರಿಗೆ ಹೃದಯಪೂರ್ವಕ ಧನ್ಯವಾದಗಳು,

**–ದಯಾನಂದ ಪಾಟೀಲ ಅಧ್ಯಕ್ಷರು**



## ಗುರು ಮಹಿಮೆ

ಗುರುಪೂರ್ಣಿಮೆಯು ದಿನವೂ ಮೂಡಿ ಬರಲಿ
ಅಕ್ಷರದ ಜೋಳಿಗೆಯು ದಿನವೂ ತುಂಬಿ ಬರಲಿ
ಹಸಿದ ಹೊಟ್ಟೆಯನು ತಣಿಸುತ
ಬಾಳಿಗೆ ಆಸರೆಯನು ಕೊಡುತ

ಸಾಗುವ ದಾರಿಗಳಿಗೆ ಸವಾಲವು
ಗುರುವಿನ ಮಾರ್ಗದಲಿ ಸುಲಭವು
ಪ್ರತಿ ನಿಮಿಷ, ಗಂಟೆಗಳಿಗೆ ದರ್ಶನವು
ಕೈಮುಗಿದು ಬೇಡುವ ವರ ಪ್ರಸಾದವು

ಕಣ್ಣಿಗೆ ಕಾಣುವ ಪ್ರತ್ಯಕ್ಷ ದೈವವು
ಪ್ರತಿ ಮನ ಮನೆಗಳಲ್ಲಿಯೂ
ಅನು ದಿನ, ಅನುಕ್ಷಣವೂ ನೆನೆಸುವ ಗುರುಪೂರ್ಣಿಮೆಯ
ಗುರು ಮಹಿಮೆಯು

ಅಳಿದರೂ ಅಳಿಯದೇ ಇರುವ ಜ್ಞಾನವು
ಬುದ್ಧ, ವ್ಯಾಸರ ಮಹಿಮೆಯ ಸುಧೆಯು
ತಂದೆ–ತಾಯಿಯ ಅನುಗ್ರಹದ ಫಲವು
ಕಲಿಯುಗದ ಯುವ ಪೀಳಿಗೆಗೆ ಆದರ್ಶವು

***ಸಾವಿತ್ರಿ ಕಮಲಾಪೂರ* *ಮೂಡಲಗಿ***

## ತುಂತುರು ಮಳೆಹನಿ

ಹನಿಹನಿ ತುಂತುರು ಹನಿಯ ಮುತ್ತವು
ಎಣಿಕೆಗೆ ಸಿಗದೆ ಆವರಿಸಿವೆ ಧರಣಿಯನವು
ಸೂಸಿವೆ ಎಲ್ಲೇಡೆ ಭೂವಿಯ ಕಂಪನು
ಕಾಣಬೇಕು ಒಮ್ಮೆ ರಮಣೀಯ ನೋಟವನ್ನು
ಇದು ಧರೇಯ ವರವೊ
ಹರನಿಟ್ಟ ವರದ ವರುನು
ನಾ ಸವಿದ ಸುಂದರ ಬಾವವೊ
ಇದು ಸೃಷ್ಟಿಯ ಒಲವಿನ ಸಿಂಚನವೊ
ತಿಳಿಯದು ನಿಸಗ9ದ ಆಟ
ಎಲ್ಲವು ಕಾಲದ ಇತಿಮಿತಿಯ ಓಟ
ಹೊರೆಯಾಗದಿರಲಿ ಹನಿಯ ಕಾಟ
ಹಿತವಾಗಿ ಕಾಣಬೇಕು ಭೂ ಹೂವುದೋಟ
ತುಂತುರು ಹನಿಯ ಮುದ್ದಾಟ
ಮುಟ್ಟಬೇಕು ಎನ್ನುವ ಮನದ ಒದ್ದಾಟ
ಎಲ್ಲವು ಸೃಷ್ಟಿಕರ್ತನ ಕರದಮಾಟ
ಮತ್ತೆ ಮತ್ತೇ ಕೇಳಬೇಕು ತುಂತುರು ಹನಿಯ
ಚಟಪಟ..

**ಶ್ರೀಮತಿ:ಗೌರಿ.ಎಸ್.ಬಡಿಗೇರ, ಸ್ಥಳ:ಹುಬ್ಬಳ್ಳಿ.**

KARUNADA KANDA, Fortnightly, Published and Owned by Karibasappa Baligar, At & Post: Gunnal-583237, Tq: Yalaburga, Dist: Koppal. Printed at Manohar printery , Azad road CBT HUBLI, Dist. Dharwad -580 020 email-karunadakanda33@gmail.com, Ph:9986366909, 9742776385. KARKAN/2021/27600. Editor: Basavaraj Baligar.